ಜನುಮದಿನ ಹಾಗು ಪ್ರಥಮ ವರ್ಷದ ಪುಣ್ಯ ಸ್ಮರಣೆ

ನೆನಪಿನ ಅಂಗಳದಲ್ಲಿ

ಡಾ|| ರಾಜ್

ಸಂಪಾದಕ : ಗೌರಿ ಸುಂದರ್

50 ಜನಪ್ರಿಯ ಗೀತೆಗಳ ಸಂಗ್ರಹವು ಸೇರಿದೆ



ಸುಂದರ ಪ್ರಕಾಶನ
ಬೆಂಗಳೂರು

ಜನುಮದಿನ ಹಾಗು ಪ್ರಥಮ ವರ್ಷದ ಪುಣ್ಯ ಸ್ಮರಣೆ

ನೆನಪಿನ ಅಂಗಳದಲ್ಲಿ
ಡಾ|| ರಾಜ್

(50 ಜನಪ್ರಿಯ ಚಿತ್ರಗೀತೆಗಳ ಸಂಗ್ರಹದೊಂದಿಗೆ)

ಸಂಪಾದಕ

ಗೌರಿ ಸುಂದರ್

ಸುಂದರ ಪ್ರಕಾಶನ

ಚಿತ್ರಶ್ರೀ – 43 ಕಲಾಮಂದಿರ 5ನೇ ತಿರುವು ಅ ನ ಸುಬ್ಬರಾವ್ ರಸ್ತೆ
ಹನುಮಂತನಗರ ಬೆಂಗಳೂರು – 560 019

"NENAPINA ANGALADALLI DR. RAJ" - Edited & Published by Gauri Sunder for Sundara Prakashana, Chitrashree - Kalamandira, 5th Cross, A.N. Subbarao Road, Hanumanthanagar, Bangalore - 19. Tel: 080-6562 3165, 2660 5796.

First Edition : 2007

Pages : 168

Paper used :
70 GSM (18.6 kg) Maplitho Paper.

Price: **Rs. 85/-**

Cover Page & Computer Typesetting
Suma Rao Kollegala
Bangalore - 560 085
Cell : 93412 29523

Printed by :
Parishree Printers
Srirampuram, Bangalore-560 021
Phone: 080-2312 8286
Email:parishree@yahoo.com

ಸಂಪಾದಕರ ಮಾತು

ಹೌದು, ನಾವು ಅಂದುಕೊಂಡೇ ಇರಲಿಲ್ಲ. ಕಾಲಚಕ್ರ ಇಷ್ಟುಬೇಗ ಉರುಳುತ್ತದೆ ಎಂದು. ಡಾ॥ ರಾಜ್ ಎಲ್ಲಿದ್ದಾರೆ ಅಂದರೆ ಇಲ್ಲೇ ಎಲ್ಲೋ ಇದ್ದಾರೆ ಅಷ್ಟೆ ಟಿ.ವಿ.ಯಲ್ಲಿ, ರೇಡಿಯೋದಲ್ಲಿ, ಸಿ.ಡಿ.ಗಳಲ್ಲಿ, ಕ್ಯಾಸೆಟ್‌ಗಳಲ್ಲಿ, ಜನಮನದಲ್ಲಿ ಅಚ್ಚುಕಟ್ಟಾಗಿ ಕೂತುಬಿಟ್ಟಿದ್ದಾರೆ.

ಕಳೆದ ವರ್ಷ ಆಗಸ್ಟ್‌ನಲ್ಲಿ 'ಕನ್ನಡ ಕಲಾಕಂಠೀರವ ಡಾ॥ ರಾಜ್‌ಕುಮಾರ್' ಎಂಬ ಬೃಹತ್ ಗ್ರಂಥವನ್ನು ಹೊರತಂದಾಗ ನಮಗೆ ನಾವು ಅಂದುಕೊಂಡಷ್ಟು ಜನರಿಗೆ ತಲುಪಲಿಲ್ಲ. ಬೃಹತ್ ಗಾತ್ರ ಅಥವಾ ರೂ 300/– ಹೆಚ್ಚಾಯಿತೇನೊ. ಅಶ್ರುತರ್ಪಣ, ಅಂತ್ಯಕ್ರಿಯೆಯ ಭಾಗವನ್ನು ನಾವು ಅಚ್ಚಿಸಿರಲಿಲ್ಲ. ಹಾಗಾಗಿ ಆ ಭಾಗವನ್ನು ಸಮಾಧಿಯ ಅಭಿವೃದ್ಧಿಯ ಬಗ್ಗೆಗಿನ ಆತುರ ಕಾತರ, ಸರ್ಕಾರ ಮತ್ತು ಚಿತ್ರರಂಗದ ದಿಗ್ಗಜರ ಹೇರಿಕೆ ಮತ್ತು ಕಾರ್ಯ ಬಹುಳ್ಯವನ್ನು ಇದರಲ್ಲಿ ಪ್ರಕಟಿಸಲಾಗಿದೆ. ಅಲ್ಲದೆ ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್ ಅವರು ಸರ್ಕಾರಕ್ಕೆ ಡಾ॥ ರಾಜ್ ಅಭಿಮಾನಿಗಳ ಪರವಾಗಿ ಒತ್ತಡ ಮತ್ತು ಸಲಹೆ ನೀಡುತ್ತಿರುವದು ನಮಗೆಲ್ಲ – ಕನ್ನಡಿಗರಿಗೆಲ್ಲ ಹೆಮ್ಮೆಯ ವಿಷಯವಾಗಿದೆ. ಶತಶತಮಾನಗಳಲ್ಲಿ ಸ್ಮರಣೆಯ ರೂಪದಲ್ಲಿ ಡಾ॥ ರಾಜ್ ಇರುವಂತಹವರು. ಹಾಗಾಗಿ ಇನ್ನೂ ಆಗಬೇಕಾದ ಕೆಲಸ ಹಿಮಾಲಯದಷ್ಟಿದೆ. 'ನಾನಿರುವುದೇ ನಿಮಗಾಗಿ' ಎಂದು ಹಾಡಿದ ಅವರ ಗೀತೆಯ ಸಾಲುಗಳನ್ನು ನಾವು ಅಜರಾಮರವಾಗಿ ಇಡಬೇಕಾಗುತ್ತದೆ. ಸತ್ಯಕ್ಕೆ ಸಾವಿಲ್ಲ ಎನ್ನುವಂತೆ ಡಾ॥ ರಾಜ್‌ಕುಮಾರ್ ಅವರಿಗೂ ಸಾವಿಲ್ಲ. ಕನ್ನಡ ಇರುವವರೆಗೂ ಅವರು ಜನರ ನಾಡಿ–ನುಡಿಗಳಲ್ಲಿ ರಾರಾಜಿಸುತ್ತಾರೆ. ಬದುಕಿಗೆ ಬೆಳಕನ್ನು ಕೊಡುವ ಮಹಾ ಚೇತನ ಡಾ॥ ರಾಜ್‌ಕುಮಾರ್.

ಕೆಲವು ಲೇಖನಗಳನ್ನು ಮತ್ತೆ ಉಪಯೋಗಿಸಿಕೊಳ್ಳಲು ಅನುಮತಿ ನೀಡಿದ ಈ ಕೃತಿಯ ಲೇಖಕರಿಗೂ, ವಿಶೇಶವಾಗಿ ಈ ಕೃತಿಯು ಹೊರಬರಲು ಕೈ ಜೋಡಿಸಿದ ಸುಂದರ ಪ್ರಕಾಶನದ ಗೌರವಾನ್ವಿತ ಸಲಹೆಗಾರರು, ಶ್ರೀ ಮ.ಅ. ವೆಂಕಟೇಶ್, ಶ್ರೀ ಎನ್. ಆನಂದರಾಮರಾವ್, 50 ಜನಪ್ರಿಯ ಗೀತೆಗಳನ್ನು ಸಂಪಾದಿಸಿಕೊಟ್ಟ ಶ್ರೀ ಎನ್.ಎಸ್. ಶ್ರೀಧರಮೂರ್ತಿ, ಶ್ರೀ ಸುಮರಾವ್ ಕೊಳ್ಳೇಗಾಲ ಹಾಗು ಛಾಯಾಚಿತ್ರಗಳನ್ನು ಒದಗಿಸಿದ ಛಾಯಾಗ್ರಾಹಕ ಮಿತ್ರರಿಗೂ ಅನಂತ ವಂದನೆಗಳು.

– **ಗೌರಿಸುಂದರ್**

ಸುಂದರ ಪ್ರಕಾಶನದ ಪರವಾಗಿ

24–04–2007

ಡಾ॥ ರಾಜ್ ಜನ್ಮದಿನ

ಗೌರವಾನ್ವಿತ ಸಲಹೆಗಾರರು

ಪ್ರೊ. ಜಿ. ವೆಂಕಟಸುಬ್ಬಯ್ಯ

ಪ್ರೊ. ಎಲ್.ಎಸ್. ಶೇಷಗಿರಿರಾವ್

ಶ್ರೀ ವ್ಯಾಸರಾಯ ಬಲ್ಲಾಳ

ಡಾ॥ ರಾಜೀವ್ ತಾರಾನಾಥ್

ಡಾ॥ ಚಂದ್ರಶೇಖರ ಕಂಬಾರ

ಶ್ರೀ ಸಿ.ಆರ್. ಸಿಂಹ

ಪ್ರೊ. ಕೆ.ಇ. ರಾಧಾಕೃಷ್ಣ

ಶ್ರೀ ಹೆಚ್.ಜಿ. ಸೋಮಶೇಖರ ರಾವ್

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಶ್ರೀ ಕೆ.ಎಸ್.ಎಲ್. ಸ್ವಾಮಿ (ರವೀ)

ಶ್ರೀಮತಿ ಇಂದಿರಾ ಸುಂದರ್

ಪರಿವಿಡಿ

ಸಂಪಾದಕರ ಮಾತು – ಗೌರಿ ಸುಂದರ್ 5

ಅಮರಜೀವಿ ಅಲ್ಲವೇ!? – ಕೆ.ಎಸ್.ಎಲ್. ಸ್ವಾಮಿ 13

ಮಾದರಿ ಪುರುಷ – ಪ್ರೊ. ಜಿ. ವೆಂಕಟಸುಬ್ಬಯ್ಯ 16

ಕನ್ನಡದ ಶಕ್ತಿ – ಪ್ರೊ. ಎಲ್.ಎಸ್. ಶೇಷಗಿರಿರಾವ್ 17

ಸರಳ ಸಜ್ಜನಿಕೆಯ ಮಹಾಪುರುಷ – ವ್ಯಾಸರಾಯ ಬಲ್ಲಾಳ 19

ಸರಳ–ಸಜ್ಜನ – ಪಂ. ರಾಜೀವ್ ತಾರಾನಾಥ್ 20

ಕನ್ನಡಿಗರ ಹೃದಯದ ಅರಸು – ಸಿ.ಆರ್. ಸಿಂಹ 23

ಕಂಡ ಕಲಾತಪಸ್ವಿ – ಎಚ್.ಜಿ. ಸೋಮಶೇಖರ ರಾವ್ 25

ನಾಡೋಜ–ಡಾ॥ ರಾಜ್‌ಕುಮಾರ್– ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ 32

ನಿಜದ ಸಂಸ್ಕೃತಿಯ ಉಸಿರು– ಪ್ರೊ. ಕೆ.ಇ. ರಾಧಾಕೃಷ್ಣ 37

ಸೌಜನ್ಯಮೂರ್ತಿ–ಮುತ್ತುರಾಜ್ – ಮಂ.ಅ. ವೆಂಕಟೇಶ್ 42

ನವರಸಗಳ ನಿಧಿ–ನಮ್ಮ ರಾಜಣ್ಣ – ಎಸ್. ಶಿವರಾಂ 46

ಡಾ॥ ರಾಜ್‌ಗೆ ನುಡಿ–ನಮನ – ಡಾ॥ ದೊಡ್ಡರಂಗೇಗೌಡ 53

ಜೀವಂತ ದಂತಕತೆ – ವಿ.ಎನ್. ಸುಬ್ಬರಾವ್ 57

ದೇವತಾ ಮನುಷ್ಯ – ಡಾ॥ ಸಿ. ಸೋಮಶೇಖರ 62

ಅಲ್ಲಿಂದ ಇಲ್ಲೀವರೆಗೆ – ಎಂ.ಎ. ವೆಂಕಟೇಶ್ 66

ಎನ್ ಆನಂದರಾಮ ರಾವ್ 98

ಆ ದೇವನಾಡುವ ಗೊಂಬೆಯಾಟವಯ್ಯ – ವೇದಪುಷ್ಪ 99

ನಿನ್ನುಸಿರು ಕನ್ನಡಕೆ ಎಂದೂ ಹರುಷವ ತರಲಿ– ಕೆ.ಎಸ್.ಎಲ್. ಸ್ವಾಮಿ 100

ಡಾ॥ ರಾಜ್ ಸಮಾಧಿಯ ಬಗ್ಗೆ – ವಿವಿಧ ಗಣ್ಯರಿಂದ

ಗೀತ ನಮನ (50 ಜನಪ್ರಿಯ ಗೀತೆಗಳ ಸಂಗ್ರಹ)– ಎನ್.ಎಸ್. ಶ್ರೀಧರಮೂರ್ತಿ 115

ನೆನಪಿನ ಅಂಗಳದಲ್ಲಿ ಡಾ॥ ರಾಜ್



ರಾಜ್‌ಕುಮಾರ್ ಅವರ ಸಮಾಧಿ ಬಳಿ ರಂಗಮಂದಿರ, ಯೋಗಮಂದಿರ, ರಾಜ್ ಮೇಣದ ಪ್ರತಿಮೆ, ವಸ್ತು ಸಂಗ್ರಹಾಲಯ ನಿರ್ಮಾಣವಾಗಬೇಕು. ಅಗತ್ಯ ಮೂಲಭೂತ ಸೌಲಭ್ಯಗಳಿದ್ದು, ಹೂತೋಟದ ಮಧ್ಯೆ ಇವು ಕಂಗೊಳಿಸಬೇಕು. ಇಂತಹದೊಂದು ಯೋಜನೆ ಸಿದ್ದಪಡಿಸಿ ಸರ್ಕಾರಕ್ಕೆ ಸಲ್ಲಿಸಿದ್ದೇವೆ.


– ಪಾರ್ವತಮ್ಮ ರಾಜ್‌ಕುಮರ್





ಡಾ॥ ರಾಜ್ ಸ್ಮಾರಕ ನಿರ್ಮಾಣಕ್ಕೆ ಏಪ್ರಿಲ್ 24ರಂದು ಚಾಲನೆ





ಡಾ॥ ರಾಜ್ ಸಮಾಧಿ ಇರುವ ಕಂಠೀರವ ಸ್ಟುಡಿಯೋ ಆವರಣದಲ್ಲಿ ಸ್ಮಾರಕ ನಿರ್ಮಿಸಲಾಗುವುದು. ಅಲ್ಲಿ ಮ್ಯೂಸಿಯಂ, ರಂಗಮಂದಿರ, ಉದ್ಯಾನವನ ಅಭಿವೃದ್ಧಿಪಡಿಸಲಾಗುವುದು. ಇದಕ್ಕಾಗಿ ಬಜೆಟ್‌ನಲ್ಲಿ 4 ಕೋಟಿ ರೂ ಒದಗಿಸಲಾಗಿದೆ. ಅಗತ್ಯ ಬಿದ್ದರೆ ಇನ್ನೂ ಹೆಚ್ಚಿನ ಹಣ ಒದಗಿಸಲಾಗುವುದು ಎಂದು ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ತಿಳಿಸಿದರು.

ಸ್ಮಾರಕ ನಿರ್ಮಾಣ ಕುರಿತು ಡಾ॥ ರಾಜ್ ಕುಟುಂಬದ ಸದಸ್ಯರು ಹಾಗೂ ಅಧಿಕಾರಿಗಳ ಜತೆ ಸಭೆ ನಡೆಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿ, ಡಾ॥ ರಾಜ್ ಸ್ಮಾರಕ ನಿರ್ಮಾಣವನ್ನು ಸರ್ಕಾರ ಕಡೆಗಣಿಸಿಲ್ಲ ಎಂದು ಹೇಳಿದರು.

ಸ್ಮಾರಕ ವಿನ್ಯಾಸ ಈಗಾಗಲೇ ಸಿದ್ಧಗೊಂಡಿದೆ. ನಿರ್ಮಾಣ ಮತ್ತು ನಿರ್ವಹಣೆ ಹೊಣೆ ಹೊರಲು ಟ್ರಸ್ಟ್ ರಚಿಸಲಾಗುವುದು. ಇದರಲ್ಲಿ ಪಾರ್ವತಮ್ಮ ರಾಜ್‌ಕುಮಾರ್ ಹಾಗೂ ಕುಟುಂಬದ ಇನ್ನಿಬ್ಬರು ಸೇರಿದಂತೆ ಒಟ್ಟು ಒಂಬತ್ತು ಸದಸ್ಯರು ಇರಲಿದ್ದಾರೆ ಎಂದು ತಿಳಿಸಿದರು.

ಪಾರ್ವತಮ್ಮ ರಾಜ್‌ಕುಮಾರ್ ಮಾತನಾಡಿ ಸಕಾಲದಲ್ಲಿ ಸ್ಮಾರಕ ನಿರ್ಮಾಣ ಮಾಡಬೇಕೆಂಬುದು ತಮ್ಮ ಪ್ರಯತ್ನವಾಗಿದೆ. ಇದಕ್ಕೆ ಎಲ್ಲ ಸಹಕಾರ ಸಿಗುತ್ತಿದೆ ಎಂದು ಹೇಳಿದರು.

ಟ್ರಸ್ಟ್ ರಚಿಸಿದ ಮೇಲೆ ಸ್ಮಾರಕ ಯಾವ ಮಾದರಿಯಲ್ಲಿ ಇರಬೇಕೆಂಬುದನ್ನು ನಿರ್ಧರಿಸಲಾಗುವುದು ಎಂದು ರಾಘವೇಂದ್ರ ರಾಜ್‌ಕುಮಾರ್ ತಿಳಿಸಿದರು.



'ಅಮರಜೀವಿ' ಅಲ್ಲವೇ!?

ರಾಜಣ್ಣನಿಗೊಂದು ಬೀಜಾಕ್ಷರಮಾಲೆ

– ಕೆ.ಎಸ್.ಎಲ್. ಸ್ವಾಮಿ

ಸಾವಿನಂತರದ ಜೀವನವೆಂದರೆ ಅದು ಆ ವ್ಯಕ್ತಿಯ ಕೃತಿ ಅಥವಾ ಅವನು ಬದುಕಿದ್ದಾಗ ಮಾಡಿದ ಕಾರ್ಯಗಳ ಫಲ, ಅವುಗಳ ಫಲಿತಾಂಶಗಳು ಕಾರಣವಾಗಿರುತ್ತವೆ.

ಸಾಮಾನ್ಯ ವ್ಯಕ್ತಿಗಳಾದರೆ ಅವರವರ ಬಂಧುಮಿತ್ರರ ನೆನಪಿನಲ್ಲಿ ಮಾತ್ರ ಬದುಕಿರುತ್ತಾರೆ.

ಆದರೆ ಸಮಾಜಕ್ಕೆ ವಿಶೇಷ ಸೇವೆ ಸಲ್ಲಿಸಿದವರು, ತಮ್ಮ ಅಂತಹ ಕಾರ್ಯಗಳಿಂದಾಗಿ ಬಹುಕಾಲ, ಬಹಳ ಜನಗಳ ಮನದಲ್ಲಿ ಬದುಕುಳಿದಿರುತ್ತಾರೆ. ಅಂತಹವರಿಗೆ ಸಾವು ಕೊನೆಯಲ್ಲ.

ಅವರು ಸ್ಮಾರಕ, ಸಮಾಧಿಗಳನ್ನು ಕಟ್ಟದಿದ್ದರೂ, ಕಾಲಾನುಕಾಲದಲ್ಲೂ ತಮ್ಮ ನಿಸ್ವಾರ್ಥ ಕಾರ್ಯದಿಂದಾಗಿ ಬದುಕಿರುತ್ತಾರೆ. ಜನತೆಯ ಹೃದಯದೇಗುಲದಲ್ಲಿ ನೂರಾರು, ಸಾವಿರಾರು ವರ್ಷಗಳು ಉಳಿದೇ ಉಳಿಯುತ್ತಾರೆ.

ಅವರ ಕಾರ್ಯಗಳು, ಅವರ ಸಾಧನೆಯಗಳೂ, ಪರಂಪರೆಯಿಂದ ಪರಂಪರೆವರೆಗೆ ಜನತೆಯನ್ನು, ವ್ಯಕ್ತಿಗಳನ್ನು ಹುರಿದುಂಬಿಸುತ್ತವೆ. ಅವರ ಆದರ್ಶ, ಧ್ಯೇಯ ಧೋರಣೆಗಳು ಮುಂತಾದವುಗಳ ಬಗ್ಗೆ ಅನೇಕರು ಬರೆಯುತ್ತಾರೆ. ಲಕ್ಷಾಂತರ ಮಂದಿ ಓದುತ್ತಾರೆ, ಕೆಲವರು ಮಾತ್ರ ಅವರಂತೆ ನಡೆಯಲು ಪ್ರಯತ್ನ ಮಾಡುತ್ತಾರೆ.

ಸಾವಿನಂತರದ ಬದುಕನ್ನು ಕೆಲವು ಹಿರಿಯ ಜೀವಗಳು ಬದುಕಿದ್ದಾಗಲೇ ಸಾಧಿಸಿ, ರೂಪಿಸಿಕೊಂಡಿರುತ್ತಾರೆ.

ಅಮರಜೀವಿ, ಚಿರಂಜೀವಿ ಎಂದರೆ ಅವರೇ ಅಲ್ಲವೇ ?

ಕರ್ನಾಟಕದ ಜನತೆಯ ಹೃದಯದೇಗುಲದಲ್ಲಿರುವ ಅಂತಹ ಮೂರ್ತಿ, ಭಾರತ ದೇಶದ ಹಿರಿಮೆಯ, ಕನ್ನಡ ನಾಡಿನ ಕೋಟಿ ಕೋಟಿ ಅಭಿಮಾನಿ ದೇವರುಗಳ ಹೃದಯ ಸಾಮ್ರಾಜ್ಯದ ಸಿಂಹಾಸನದಲ್ಲಿ ವಿರಾಜಿಸುತ್ತಿರುವ –


ಅಪೂರ್ವ ಚಿಂತಾಮಣಿ, ಅಭೂತಪೂರ್ವ ಕಲಾಪ್ರಪೂರ್ಣ ಸಜ್ಜನಿಕೆಯ ಸಾಕಾರಮೂರ್ತಿ, ಅಜಾತ ಶತ್ರು, ಆನಂದಕಂದ, ಇಳೆಯಗರ್ಭದ, ಈರ್ಷೆಯರಿದ ಉತ್ಸಾಹದ ಊಟೆ, ಋತುಕಾಲ ಮೀರಿದ ಎಲ್ಲರು, ಏಕಮೇವ ಐಶ್ವರ್ಯ, ಒಕ್ಕುತನದ ಓಜಸ್ಸು, ಔದಾರ್ಯ ಔರಸ, ಕರುನಾಡು ಬೆಳಗಿಸಿದ ಖದ್ಯೋತ, ಗಗನ ಗಂಭೀರ ಗಾಯಕ, ಘನತೆಯ ಘೃಣಿ, ಚಂದುಳ್ಳಿ ಚೆಲುವ, ಛಲದಂಕಮಲ್ಲ, ಜವನಿಕೆಯ ಜಾಣ, ಝೇಂಕಾರದ ಓಂಕಾರ, ಟೊಂಕ ಕಟ್ಟಿದ ಠೀವಿ, ಢೇಂಕಾರ, ಡೊಕ್ಕರ ಢಾಳ, ತಪೋಧನದ ತಾಳಾಡಿಯ ತಳವಾರ, ಥಳಥಳಿಸುವ ದಾರ್ಶನಿಕ, ದ್ರಷ್ಟಾರ, ದೃತಗತಿಯ ಧನಂಜಯ, ಧವಳಕಾಂತಿಯ ಧೀಮಂತ, ನಂಜುಂಡ ನಂದಾದೀಪ, ನವರಸನಟ, ನಾಡು, ನುಡಿ, ನಡೆಯ ನವನೀತ, ಪದವರಿಯ ಪದುಮಭೂಷಣ ಪರತತ್ತ್ವದ ಪರಶುರಾಮ, ಪೂಜನೀಯ (ಕಬೀರ) ಫಕೀರ, ಬೆಳ್ಳಿತೆರೆಯ ಭಾಗ್ಯದ ಬಾಗಿಲು, ಬಂಗಾರದ ಭಾಗವತ, ಭಾರತದ ಭಾಸುರ, ಭೂಭುಜ ಶೃಂಗಾರ, ಮನುಕುಲದ ಮಂದಾರ, ಮನರಂಜನೆಯ ಮಕರಂದ, ಯೋಗಯೋಗಿಯುಗಪುರುಷ, ರಂಗಭೂಮಿ ರಂಗವಲ್ಲಿ, ರಮಣೀಯ ರತುನ, ರಂಜನೆಯರಾಸಲೀಲೆಯ ರೂವಾರಿ, ರೂಪಧಾರಿ ಲಲಿತಕಲಾಲಲಾಮ, ಲೋಕಾಭಿರಾಮ, ವನವಾಸ ವಲನವಿಕ್ರೀಡಿತ ವಾಯುಜನವಾರಿಸು, ಶರತ್ಕಾಲದ ಶರಧಿಯಂತಹ ಶರಣ, ಶರೀರ ಶಾರೀರ ಸೌಂದರ್ಯ ಸಂಯೋಗ ಶಕಪುರುಷ,

ಷಡ್ಗುಣ, ಷಡ್ರಸ, ಷಟ್ಪದಿಯ ಷಣ್ಮುಖಿ, ಸಂಗೀತ ಸಂಜೀವಿನಿಯ ಸಂವೇದ್ಯ ಸಜ್ಜನ ಸಚೇತನ, ಹಳ್ಳಿಯೂರ ಹಮ್ಮೀರ, ಹನುಮಸೇವೆಯ ಹರಿಕಂಠ ಹೃದಯಿ, ಹೃದ್ಗೋಚರ, ಹೆಗ್ಗಡಲಾಚೆ, ಹೆದ್ದಾರಿಯಲಿ ಹೆಗ್ಗಾಳೆ ಊದಿಸಿದ ಹೇಮಂತ ಹೇರಂಬ. ನೀವು ನಮ್ಮೊಡನಿದ್ದುದು ಹೊಂಗನಸು, ಹೊನ್ನಕಾಲ, ಹೊತ್ತಿಗೆಯ ಪುಟಗಳಾಯ್ತು ಕನ್ನಡಮ್ಮಗೆ ಹೊನ್ನ ಹೊದಿಕೆಯ ಹೊದಿಸಿ ಹೊರಟಿರಿ, ಹೊರಟೇಬಿಟ್ಟಿರಿ.

ಹೌದು ಇನ್ನು ಆ ಹೊನ್ನಕಾಲದ ಹೋಳಿಗೆಯು ಹೊಂಗನಸೇನೋ!

♦♦♦♦♦






ಮಾದರಿ ಪುರುಷ

– ಪ್ರೊ. ಜಿ. ವೆಂಕಟಸುಬ್ಬಯ್ಯ

ನಾಡಿನ ಪ್ರಮುಖ ಪ್ರಕಾಶನ ಸಂಸ್ಥೆಯಾದ ಸುಂದರ ಪ್ರಕಾಶನವು ನಮ್ಮ ರಾಜ್ಯ ಪ್ರಸಿದ್ಧ ಡಾ॥ ರಾಜ್‌ಕುಮಾರ್ ಅವರ ಗೌರವಾರ್ಥವಾಗಿ "ನೆನಪಿನ ಅಂಗಳದಲ್ಲಿ ಡಾ॥ ರಾಜ್" ಎಂಬ ಶ್ರದ್ಧಾಂಜಲಿ ಗ್ರಂಥವನ್ನು ಪ್ರಕಟಿಸಲು ಮಾಡಿರುವ ಏರ್ಪಾಟು ಸುಸಂಸ್ಕೃತ ಕನ್ನಡಿಗರಿಗೆಲ್ಲ ಸಂತೋಷವನ್ನು ತರುವ ವಿಷಯ ಅರ್ಧ ಶತಮಾನದ ಕಾಲ ಕನ್ನಡ ಸಿನಿಮಾ ಪ್ರಪಂಚವನ್ನು ಆಳಿದ ಮತ್ತು ಆ ಪ್ರಪಂಚಕ್ಕೆ ಅಂತರರಾಷ್ಟ್ರೀಯ ಖ್ಯಾತಿಯನ್ನು ತಂದಿತ್ತ ಮಹಾಸಾಧ್ವಿ ಆ ಅಭಿನಯ ಚತುರ ವ್ಯಕ್ತಿ ಅನೇಕ ಸಂತರ ಜೀವನದಿಂದ ಮಾದರಿ ಪುರುಷ ಅವರು. ಅವರ ನೆನಪು ನಾಡಿನ ಜನರಲ್ಲಿ ಸದಾ ಹಸಿರಾಗಿರುವಂತೆ ಮಾಡುವ ಯಾವ ಕಾರ್ಯವಾದರೂ ಅದು ಸ್ತುತ್ಯ ತಮ್ಮ ಸಂಸ್ಥೆಯು ಕೈಗೊಂಡಿರುವ ಈ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಲಿ, ನಾಡಿನ ಈ ಗೌರವಗ್ರಂಥವು ಡಾ॥ ರಾಜ್‌ರ ಅಭಿಮಾನಿಗಳ ಮನೆಮನಗಳನ್ನು ಆಕ್ರಮಿಸಿ ಒಂದು ಶಾಶ್ವತ ಸ್ಥಾನವನ್ನು ಗಳಿಸಲಿ.

♦♦♦♦♦



ಕನ್ನಡದ ಶಕ್ತಿ

– ಪ್ರೊ. ಎಲ್.ಎಸ್. ಶೇಷಗಿರಿರಾವ್


ಯಾವುದೇ ಚಳುವಳಿ ಯಶಸ್ವಿಯಾಗಬೇಕಾದರೆ ಚಿಂತನೆ ಮಾತ್ರವಲ್ಲ, ಭಾವನೆ ಕೂಡಾ ಬಹಳ ಮುಖ್ಯ. ತಮಿಳುನಾಡಿನಲ್ಲಿ ಅಲ್ಲಿನ ಪ್ರಾದೇಶಿಕ ಪಕ್ಷಗಳಿಗೆ ಇರುವ ಬಹಳ ದೊಡ್ಡ ಬೆಂಬಲ ಅಂದರೆ, ಈ ಜನಸಾಮಾನ್ಯರ ಭಾವನಾತ್ಮಕ ಬೆಂಬಲ. ಇಂಥ ಚಿಂತನೆ, ಭಾವನೆಗಳೆರಡೂ ಬೆರೆತ ಬೆಂಬಲವನ್ನು ಜನಸಾಮಾನ್ಯರಿಂದ ಗಳಿಸಿಕೊಳ್ಳುವಲ್ಲಿ ಡಾ॥ ರಾಜ್‌ಕುಮಾರ್‌ರ ಪಾತ್ರ ಬಹಳ ದೊಡ್ಡದು.

ಡಾ॥ ರಾಜ್‌ಕುಮಾರ್‌ರಿಗೆ ಜನಸಾಮಾನ್ಯರೊಡನೆ ಸಂಪರ್ಕ ತುಂಬಾ ಚೆನ್ನಾಗಿದೆ. ಆದ್ದರಿಂದ ಯಾವ ವಿಷಯವನ್ನು ಹೇಳಬೇಕಾದರೂ ಸಹ ಆ ಜನಕ್ಕೆ ಅರ್ಥವಾಗುವ ಹಾಗೆ, ಮನಸ್ಸು ಮುಟ್ಟುವ ಹಾಗೆ ಅವರು ಹೇಳಬಲ್ಲರು. ಆದ್ದರಿಂದ ರಾಜ್‌ಕುಮಾರ್ ನಮ್ಮ ನೀರಿನ ಸಮಸ್ಯೆಯಾಗಲಿ, ನೆಲದ ಸಮಸ್ಯೆಯಾಗಲಿ, ವಲಸೆ ಸಮಸ್ಯೆಯಾಗಲಿ, ಉದ್ಯೋಗ ಸಮಸ್ಯೆಯಾಗಲಿ, ಯಾವುದೇ ಸಮಸ್ಯೆಯನ್ನಾಗಲಿ ಜನಕ್ಕೆ ಮುಟ್ಟಿಸಬಲ್ಲರು.

ಅವರು ಚಳವಳಿಗೆ ಬಂದು ಬಿಟ್ಟರೆ ನಿಜವಾಗಿಯೂ ಅದಕ್ಕೆ ದೊಡ್ಡ ಶಕ್ತಿ ಬಂದು ಬಿಡುತ್ತದೆ. ಅವರ ಅಭಿಮಾನಿಗಳು ಲಕ್ಷಾಂತರ ಜನ ಎಲ್ಲ ಕಡೆ ಇದ್ದಾರೆ. ಸಂಘಟನೆಗಳನ್ನು ಮಾಡಿ ಕೊಂಡಿದ್ದಾರೆ. ಇವುಗಳೆಲ್ಲದರ ಮೂಲಕ ಜನಸಾಮಾನ್ಯರನ್ನು ಮುಟ್ಟಿಸಬಲ್ಲ ಶಕ್ತಿ ರಾಜ್‌ಕುಮಾರ್ ಅವರಿಗಿದೆ.

ಅಕ್ಷರಸ್ಥರ ಸಂಖ್ಯೆ ಕಡಿಮೆ ಇರುವ ದೇಶದಲ್ಲಿ ದೃಶ್ಯ ಮಾಧ್ಯಮದ ಶಕ್ತಿ ಬಹಳ ಪ್ರಬಲವಾದ್ದರಿಂದ ಒಂದು ಚಲನಚಿತ್ರದ ಮೂಲಕ ಲಕ್ಷಾಂತರ ಜನರನ್ನು ರಾಜ್‌ಕುಮಾರ್‌ರಂಥ ಒಬ್ಬ ವರನಟ ಮುಟ್ಟಬಲ್ಲರು. ಈ ಸಮಾಜ ಸಾವಿರಾರು ವರ್ಷಗಳಿಂದ ಉಳಿಸಿಕೊಂಡು ಬಂದಿರುವ, ಗೌರವ ಕೊಟ್ಟಿರುವ ಮೌಲ್ಯಗಳನ್ನು ರಾಜ್‌ಕುಮಾರ್ ಜೀವಂತ ಮಾಡುತ್ತಾರೆ. ಅವರು ಸಾಮಾನ್ಯವಾಗಿ ವಹಿಸಿರುವ ಪಾತ್ರಗಳೆಲ್ಲ ಇಂಥಹುವೇ. 'ಮಯೂರ'ನಾಗಲಿ, 'ಕನಕದಾಸ'ನಾಗಲಿ, ಬೇರೆ ಯಾವುದೇ ಚಿತ್ರವಿರಲಿ, ಚಾರಿತ್ರಿಕ ಇರಲಿ, ಭಕ್ತಿಪ್ರಧಾನವಿರಲಿ ಅಥವಾ ಅವರು ಇಂದಿನ ಸಾಮಾಜಿಕ ಚಿತ್ರಗಳಲ್ಲಿ ಭಾಗವಹಿಸಲಿ, ಸಾಮಾನ್ಯವಾಗಿ ಅವರು ಆಯ್ದುಕೊಳ್ಳುವ ಪಾತ್ರ ಜನಸಾಮಾನ್ಯರ ಜೊತೆ ಬೆರೆತು ಅವರನ್ನು ಬೆಳೆಸುವ ಪಾತ್ರ, ಅಂತಃಕರಣಪೂರಿತವಾದ ಪಾತ್ರ.

♦♦♦♦♦






ಸರಳ ಸಜ್ಜನಿಕೆಯ ಮಹಾಪುರುಷ

– ವ್ಯಾಸರಾಯ ಬಲ್ಲಾಳ

ಸುಂದರ ಪ್ರಕಾಶನ ದಿ॥ ಡಾ॥ ರಾಜ್‌ಕುಮಾರ್ ಅವರ ಬಗ್ಗೆ ಒಂದು ನೆನಪಿನಂಗಳ ಹೊರತರಲಿದೆಯೆಂದು ತಿಳಿದು ತಂಬ ಸಂತೋಷವಾಯಿತು. ಅವರ ಬಗ್ಗೆ ಪ್ರಕಟವಾಗಿರುವ ಹಲವಾರು ಗ್ರಂಥಗಳಲ್ಲಿ ನಿಮ್ಮ ಪ್ರಕಟಣೆ ಎಲ್ಲರ ಮೆಚ್ಚುಗೆಗೆ ಪಾತ್ರವಾಗಲಿದೆ ಎಂದು ಹಾರೈಸುತ್ತೇನೆ.

ದೀರ್ಘಕಾಲ ನಾನು ಮುಂಬಯಿ ನಿವಾಸಿಯಾಗಿದ್ದುದರಿಂದ ನನಗೆ ಡಾ॥ ರಾಜ್‌ಕುಮಾರ್ ಅವರ ಹೆಚ್ಚಿನ ಸಂಪರ್ಕ ಬಂದಿರಲಿಲ್ಲ. ಆದರೆ ಒಮ್ಮೆ ಮಾತ್ರ ಮುಂಬಯಿಯಲ್ಲಿ ಅವರ ಜೊತೆ ಕುಳಿತು ಊಟಮಾಡುವ ಸಂದರ್ಭ ಬಂದೊದಗಿತ್ತು. ಅದಮಾರು ಮಠದ ಶ್ರೀಪಾದರು ಅವರುನ್ನು ಒಂದು ಸಂಗೀತ ಕಾರ್ಯಕ್ರಮಕ್ಕೆಂದು ಮುಂಬಯಿಗೆ ಕರೆಸಿದ್ದಾಗ ಜತೆಗೆ ಊಟ ಮಾಡುತ್ತ ಅವರೊಡನೆ ಮಾತನಾಡುವ ಸಂದರ್ಭ ಬಂದೊದಗಿತ್ತು. ಅವರ ಸರಳತೆ, ಸಜ್ಜನಿಕೆ, ವ್ಯಕ್ತಿತ್ವದಲ್ಲಿ ಪ್ರತಿಬಿಂಬಿಸುವಂತಿದ್ದ ವಿನಯ ಗಮನಾರ್ಹವೆನಿಸುವಂತಿತ್ತು. ನೀವು ಪ್ರಕಟಿಸಲಿರುವ ಗ್ರಂಥ ಅವರ ವ್ಯಕ್ತಿತ್ವ ಸಾಧನೆಗಳ ಸಮಗ್ರ ಚಿತ್ರ ನೀಡುವಂತೆ ಆಗಲಿ ಎಂದು ನನ್ನ ಹಾರೈಕೆ.



ಸರಳ–ಸಜ್ಜನ

– ಪಂ. ರಾಜೀವ್ ತಾರಾನಾಥ್

"ರಾಜೀವ್ ನೀವು ಇಲ್ಲಿ ಸರೋದ್ ನುಡಿಸ್ತಿದ್ದೀರಿ ಅಂತ ಗೊತ್ತಾಯ್ತು. ಅದಕ್ಕೇ ಒಳಕ್ಕೆ ಬಂದೆ. ನೀವು ನುಡಿಸೋದನ್ನು ಕೇಳಲೇಬೇಕು" ಎನ್ನುತ್ತಾ ಪಕ್ಕದಲ್ಲಿ ಬಂದು ಅವರು ಕುಳಿತೇ ಬಿಟ್ಟರು. ಮೂರು ದಶಕಗಳಿಗೂ ಹಿಂದಿನ ಆ ಘಟನೆಯನ್ನು ನೆನಪಿಸುತ್ತಿದ್ದರೆ ಅವರಲ್ಲಿ ಅದೇನೋ ಭಾವುಕತೆ. ಅಣ್ಣಾವ್ರ ಬಗ್ಗೆ ಒಂದಿಷ್ಟು ಹೇಳಲೇಬೇಕು ಅನ್ನೋ ತುಡಿತ.

ಅವರು ಪಂಡಿತ ರಾಜೀವ್ ತಾರಾನಾಥ್. ದೇಶದ ಹೆಸರಾಂತ ಸರೋದ್‌ವಾದಕ. ನೇರ ನಡೆನುಡಿ, ವಿದ್ವತ್ಪೂರ್ಣ ಮಾತಿನ ಗಾರುಡಿಗ. ವರನಟ ಡಾ. ರಾಜ್‌ಕುಮಾರ್ ಅವರೊಂದಿಗಿನ ಒಡನಾಟದ ಎರಡು ಪುಟ್ಟ ಘಟನೆಗಳನ್ನು ಅವರು ತಿಳಿಸಿದ್ದು ಹೀಗೆ. ಈ ಪುಟ್ಟ ಘಟನೆಗಳು ರಾಜ್ ಬದುಕಿಗೆ, ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ.

ಅದು ಮದರಾಸಿನ ತರಂಗಿಣಿ ಸ್ಟುಡಿಯೋ. ಹೆಸರಾಂತ ಗಾಯಕ ಏಸುದಾಸ್ ಅವರ ಒಡೆತನಕ್ಕೆ ಸೇರಿದ್ದು. ಸ್ಟುಡಿಯೋ ಹೊರಾಂಗಣದಲ್ಲಿ ಹಳ್ಳಿಯ ಸೆಟ್ ಹಾಕಲಾಗಿತ್ತು. ಯಾವುದೋ ಚಿತ್ರೀಕರಣ ನಡೆಯುತ್ತಿರಬೇಕು ಅಂದುಕೊಂಡಿದ್ದೆ. ಇತ್ತ ಸ್ಟುಡಿಯೋ

ಒಳಗೆ ಮಲಯಾಳದ ಹೆಸರಾಂತ ಚಿತ್ರ ನಿರ್ದೇಶಕ ಜಿ. ಅರವಿಂದನ್ ಅವರ ''ಪೊಕ್ಕುವೇಯಿಲ್'' ಚಿತ್ರದ ಸಂಗೀತದ ರೆಕಾರ್ಡಿಂಗ್ ನಡೆಯುತ್ತಿತ್ತು. ನಾನು ಮತ್ತು ಚೌರಾಸಿಯಾ ಒಂದು ರಾಗವನ್ನು ಜುಗಲ್ ಬಂದಿಯಲ್ಲಿ ಬಾರಿಸಿಟ್ವಿ. ನಂತರ ಉಳಿದ ಸಂಗೀತವನ್ನು ನಾನೊಬ್ಬನೇ ನೀಡುತ್ತಿದ್ದೆ. ಮೂರು, ಮೂರು ಸಲ ಕರೆಂಟ್ ಕೈಕೊಟ್ಟಿತ್ತು. ಸ್ಟುಡಿಯೋದಲ್ಲಂತೂ ಕೆಟ್ಟ ಸೆಕೆ. ಆ ಕ್ಷಣದಲ್ಲೇ ನೋಡಿ ದಿಢೀರ್ ಅಂತ ವರನಟ ರಾಜ್‌ಕುಮಾರ್ ಆಗಮನವಾದದ್ದು. ಹೊರಗಡೆ ಯಾವುದೋ ಪೌರಾಣಿಕ ಚಿತ್ರದ ಶೂಟಿಂಗ್ ನಡೆಯುತ್ತಿದ್ದಿರಬೇಕು. ಬಬ್ರುವಾಹನವೋ ಅಥವಾ ಇನ್ಯಾವುದೋ ನೆನಪಿಲ್ಲ. ಆದರೆ ಸ್ಟುಡಿಯೋಕ್ಕೆ ಥಟ್ ಅಂತ ಆಗಮಿಸಿದ ರಾಜ್ ಮೇಕಪ್‌ನಲ್ಲೇ ಇದ್ದರು. ಒಳಕ್ಕೆ ಬಂದವರೇ ಚಕ್ಕಳಮಕ್ಕಳ ಹಾಕಿ ನೆಲದಲ್ಲಿ ನನ್ನ ಪಕ್ಕದಲ್ಲಿ ಕೂತೂಬಿಟ್ಟರು.

ಆ ಕ್ಷಣದಲ್ಲಿ ನನಗೆ ದಿಗ್ಭ್ರಮೆ! ನೆಲದಲ್ಲಿ ಧೂಳೂ ... ನನ್ನಿಂದ ಮಾತು ಹೊರಟರೆ, 'ಹೇ ... ಪರವಾಗಿಲ್ಲ ಅದರಲ್ಲೇನಿದೆ. ನನಗೆ ರಾಜೀವ್ ಸರೋದ್ ನುಡಿಸ್ತಿರೋ ಬಗ್ಗೆ ತಿಳೀತು. ಸ್ವಲ್ಪ ಕೇಳ್ಕೊಂಡು ಹೋಗಾಣಾಂತ ಬಂದೆ. ಅಂದ ಹಾಗೆ ಹೇಗಿದ್ದೀರಾ?' ನನ್ನ ಕ್ಷೇಮದ ಬಗ್ಗೆ ವಿಚಾರಣೆ:

ಕರೆಂಟಿಲ್ಲ, ಸ್ವಲ್ಪ ಲೇಟಾಗ್ಬಹುದೂಂತ ಅನ್ನುತ್ತೆ ಅಂದ್ರೆ ಆ ಮಹಾನುಭಾವ ಏನು ಹೇಳಿದ್ರು ಗೊತ್ತಾ? ಜೀವನದಲ್ಲಿ ಅದೆಲ್ಲೆಲ್ಲೋ, ಯಾವ್ಯಾವುದಕ್ಕೆ, ಎಷ್ಟೆಷ್ಟುಬಾರಿಯೋ ಕಾದಿದ್ದೇನೆ. ನಿಮ್ಮ ಸಂಗೀತಾನಾ ಕೇಳೋದಿಕ್ಕೆ ಸ್ವಲ್ಪ ಕಾಯೋಕ್ಕಾಗಲ್ವಾ? ಅಂದರೆ ನನ್ನಿಂದ ಮಾತೇ ಹೊರಡಲಿಲ್ಲ. ನಿಜಕ್ಕೂ ಅವರು ದೊಡ್ಡವರು. ಮಾಣಿಕ್ಯದಂತಹ ಮಾತು, ಸರಳತೆಗೆ ಇನ್ನೊಂದು ಹೆಸರು ಡಾ. ರಾಜ್. ರಾಜೀವ್ ತಾರಾನಾಥ್ ನೆನಪಿಸಿಕೊಂಡರು. ಕೇವಲ ಒಂದೂವರೆ ನಿಮಿಷಗಳ ರೆಕಾರ್ಡಿಂಗ್ ಕೇಳಿಯೇ ಅವರು ಅಲ್ಲಿಂದ ನಿರ್ಗಮಿಸಿದ್ದು.


ಅಂದು ಬೆಂಗಳೂರಿನ ಗ್ಲಾಸ್ ಹೌಸ್ನಲ್ಲಿ ಪಲ್ಲವಿ ಚಿತ್ರದ ಪ್ರಶಸ್ತಿ ವಿತರಣಾ ಸಮಾರಂಭ. ಆಗ ದೇವರಾಜ ಅರಸು ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ಕೆ.ಎಚ್. ಶ್ರೀನಿವಾಸ್ ರಾಜ್ಯದ ಶಿಕ್ಷಣ ಸಚಿವರು. ಇಂದಿನ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಎ.ಎನ್. ಸುಬ್ಬರಾವ್ ಸಮಾರಂಭದಲ್ಲಿದ್ದರು ಎಂಬುದು ನೆನಪು. ಪ್ರಶಸ್ತಿ ಸ್ವೀಕರಿಸಬೇಕಿತ್ತಲ್ಲ. ಜಯನಗರದ ಮನೆಯಿಂದ ಲಗುಬಗನೆ ಹೊರಡುತ್ತಿದ್ದೆ. ಮನೆಯ ಬಾಗಿಲಿನ ರಿಂಗ್ ವರಾಂಡದಾಟುವ ಗಡಿಬಡಿಯಲ್ಲಿ ನನ್ನ ಕಾಲಿನ ಕಿರುಬೆರಳಿಗೆ ತೀರಾ ಘಾಸಿಯುಂಟು

ಮಾಡಿತ್ತು ನೋವಿನಿಂದಲೇ ಸಮಾರಂಭಕ್ಕೆ ಹೋದೆ. ವೇದಿಕೆಯಲ್ಲಿ ಪ್ರಶಸ್ತಿ ವಿಜೇತರನ್ನು ಕರೆದು ನಿಲ್ಲಿಸುತ್ತಿದ್ದರೆ ನಿಲ್ಲಲ್ಲೂ ಆಗದಂತಹ ಪರಿಸ್ಥಿತಿ.

ಕಾಲುನೋವು ಉಲ್ಬಣಿಸುತ್ತಿತ್ತು. ನಿಲ್ಲಲು ಸಾಧ್ಯವೇ ಆಗಿರಲಿಲ್ಲ. ವೇದಿಕೆ ತೀರಾ ಕಿರಿದು. ಆದರೂ ಹೆಚ್ಚಿನ ಗಣ್ಯರಿಂದ ವೇದಿಕೆ ಕಿಕ್ಕಿರಿದು ತುಂಬಿತ್ತು. ಕುಳಿತುಕೊಳ್ಳಲು ಜಾಗವೂ ಇರಲಿಲ್ಲವೆನ್ನಿ. ವೇದಿಕೆಗೆ ಬಂದೆ. ಕಾಲು ನೋವನ್ನು ಅರಿತ ಯಾರೋ ಕೂಡ್ರಿ ಎಂದು ಕುಳಿತು ಕೊಳ್ಳಲೂ ಅವಕಾಶ ಮಾಡಿಕೊಟ್ರು. ಪುಟಾಣಿ ವೇದಿಕೆಯಲ್ಲವೇ? ಕೂತಿರುವ ಕುರ್ಚಿಯ ಎರಡೂ ಕಾಲುಗಳು ಅಂಚಿನಲ್ಲಿದ್ದವು. ಏನೂ ಪರವಾಗಿಲ್ಲ ಕೂತ್ಕೊಳಿ ಅಂದ್ರು ಹಿಂದಿದ್ದ ಮಹಾನುಭಾವರು. ಹಿಂತಿರುಗಿ ನೋಡಿರಲಿಲ್ಲ. ಸುಮಾರು 20 ನಿಮಿಷಗಳಷ್ಟು ಸಮಯ ಅಲ್ಲಿ ಕೂತುಕೊಂಡೇ ಇದ್ದೆ. ಆ ನಂತರ ನನಗೆ ಅರಿವಿಗೆ ಬಂದಿದ್ದು, ಈವರೆಗೆ ಕುಳಿತಿದ್ದ ಕುರ್ಚಿಯ ಹಿಂಗಾಲುಗಳು ವೇದಿಕೆಯ ಅಂಚಿನಲ್ಲಿದ್ದವು ಎಂಬುದು. ಆದರೆ ಬೀಳದಂತೆ ಹಿಡಕೊಂಡಿದ್ದವರು ಡಾ. ರಾಜ್ ಎಂದು ತಿಳಿದು ಊಹಿಸುವುದಕ್ಕೂ ಕಷ್ಟವಾಯಿತು.

ಅವರೆಲ್ಲಾ ''ಕಲ್ಚರಲ್ ಐಕಾನ್ಸ್'': ಯಾವನೋ ಒಬ್ಬ ಭಾಷಣಕಾರ ಅದೊಮ್ಮೆ ಅಣ್ಣಾವ್ರ ಕಟೌಟ್ಸ್ ಕಲ್ಚರ್ ಬಗ್ಗೆ ಟೀಕೆ ಮಾಡಿದನಂತೆ. ಕಂಠೀರವ ಸ್ಟೇಡಿಯಂ ಹತ್ರ ಆ ದಿನಗಳಲ್ಲಿ ಹಾಕಿದ್ದ ದೊಡ್ಡ ಕಟೌಟ್ ಬಗ್ಗೆ ಆತನ ಟೀಕೆಯಾಗಿತ್ತು. ಈ ರೀತಿಯ ಟೀಕಾಕಾರರಿಗೆ ಚಿತ್ರರಂಗದ ದಿಗ್ಗಜರಿದ್ದ ಕಮ್ಮಟದಲ್ಲಿ ನಾನು ಉತ್ತರಿಸಿದೆ. ''ಮೋಡ ಬಾ ಅಂದ್ರೆ ಬರಲ್ಲ, ಹೋಗು ಅಂದ್ರೆ ಹೋಗಲ್ಲ'' ಹಾಗೇನೇ ರಾಜ್‌ರಂತಹ ವ್ಯಕ್ತಿತ್ವಗಳು ನಮ್ಮ ಕಲ್ಚರಲ್ ಐಕಾನ್ಸ್ ಬೇಕು ಅನ್ನೋವಾಗ ಸಿಕ್ಕಿ, ಬೇಡ ಅನ್ನೋವಾಗ ಮಾಯವಾಗೋರಲ್ಲ. ಮಹಾತ್ಮಾಗಾಂಧಿ, ಎಂ.ಜಿ.ಆರ್, ಶಿವಾಜಿ ಗಣೇಶನ್ ಅವರದ್ದೂ ಕೂಡಾ ಇಂಥಹುದೇ ವ್ಯಕ್ತಿತ್ವ. ಸಮಾಜದಲ್ಲಿ ನಮ್ಮ ಜನಮಾನಸದಲ್ಲಿ ಇಂಥವರು ಶಾಶ್ವತ ಸ್ಥಾನ ಪಡೆಯುತ್ತಾರೆ.

♦♦♦♦♦



ಕನ್ನಡಿಗರ ಹೃದಯದ ಅರಸು

– ಸಿ.ಆರ್. ಸಿಂಹ

ಹೇಗೆ ಅಷ್ಟೆಲ್ಲ ಕಲಿತರು ಇವರು? ತಂದೆ ಪುಟ್ಟಸ್ವಾಮಯ್ಯ ಅವರು ಗುಬ್ಬಿ ಕಂಪನಿಯಲ್ಲಿ ನಟರು. ಮೂರು ಮಕ್ಕಳು ಅವರಿಗೆ. ಮುತ್ತುರಾಜ್, ವರದರಾಜ್ ಮತ್ತು ಶಾರದಮ್ಮ ಕೂಡ ನಾಟಕ ಕಂಪನಿಯಲ್ಲಿ ಆಡಾಡಿಕೊಂಡಿದ್ದವರು. ಬಾಲಪಾತ್ರಗಳನ್ನು ಮಾಡುತ್ತಿದ್ದರು. ಇದು ಸಾಧಾರಣವಾಗಿ ಎಲ್ಲಕಂಪನಿಗಳ ವಾತಾವರಣ. ಕ್ಯಾಂಪಿನಿಂದ ಕ್ಯಾಂಪಿಗೆ, ಅಂದರೆ ಊರಿಂದ ಊರಿಗೆ ತಿರುಗುವ ಲಕ್ಷಣ ಆದ್ದರಿಂದ ಶಾಲಾ ಕಲಿಕೆ ಕಷ್ಟವೂ ಕೂಡ. ಆದರೆ ಬಾಲಕ ಮುತ್ತುರಾಜ್ ನಟನೆ, ಸಂಗೀತ ಎಲ್ಲವನ್ನೂ ಏಕಾಗ್ರತೆಯಿಂದ ಕಲಿಯುತ್ತಾ, ಎಲ್ಲ ಶಕ್ತಿಗಳನ್ನೂ ಗಟ್ಟಿಯಾಗಿ ಹೀರಿಕೊಳ್ಳುತ್ತ ಬೆಳೆದಿದ್ದರಿಂದಲೇ ಆ ಸಸಿ ಮುಂದೆ ಹೆಮ್ಮರವಾಗಲು ಕಾರಣವಾಯಿತು.

ಜತೆಗೆ ಪ್ರಕೃತಿಯ ಕೊಡುಗೆಯೂ ಸೇರಿತು. ಶರೀರ ಮತ್ತು ಶಾರೀರ, ಎರಡೂ ಸಹ ಉತ್ತಮ ಮಟ್ಟದ್ದು. ನಟನೆಯ ವೃತ್ತಿಯಲ್ಲಿ ಇವು ಎರಡೂ ನಿರ್ಣಾಯಕ ಅಂಶಗಳು. ಇವುಗಳ ರೀತಿ ನೀತಿಯೇ ಯಾವಯಾವ ರೀತಿಯ ಪಾತ್ರಕ್ಕೆ ಹೊಂದುವುದು ಎಂಬುದನ್ನು ನಿರ್ಧರಿಸುತ್ತದೆ. ಪ್ರಕೃತಿಯ ಕೃಪೆ ಎನ್ನಿ, ದೈವ ಕೃಪೆ ಎನ್ನಿ ಇವೆರಡೂ

''ಹಾ... ಏನ್ ಶಿವರಾಮಣ್ಣ.. ಇಷ್ಟು ದೂರ'' ಅಂದೆ.

''ನೀನು ಒಂದು ಪಾರ್ಟ್ ಮಾಡ್ಬೇಕಪ್ಪ.. ನಮ್ದೇ ಸಿನಿಮಾ ...''

''ಹಾ... ಸಿನಿಮಾದಲ್ಲಿ ಮಾಡ್ಬೇಕ... ಏಯ್... ಶಿವರಾಂ... ನನಗೆ ಅಭ್ಯಾಸ ಇಲ್ಲಪ್ಪ.. ನಾನ್ ಏನಿದ್ರೂ ನಾಟ್ಕ-ಪಾಟ್ಕ ಅಂತ ಇರೋನು...''

''ಅದನ್ನೇ ಹೇಳ್ತಿರೋದು, ಸೋಮು ... ನಾಟ್ಕ-ಪಾಟ್ಕದೋರೆ ಎಲ್ಲಿದ್ರೂ ಗೆಲ್ತಾರೆ ... ನಾವಿಲ್ಲವಾ ... ಬಾರಯ್ಯ ....''

''ಏನ್ ಪಾರ್ಟ್ಸು, ಶಿವರಾಮಣ್ಣ?''

''ಡಾಕ್ಟರ್ ಪಾರ್ಟು, ಎರಡು ಸೀನಿದೆ .... ನಿನ್ಹತ್ರ ಸೂಟ್ ಇದೆ ಅಲ್ವಾ ...''

''ಅದೆಲ್ಲಾ ಸರಿಯಪ್ಪಾ... ಯಾವಾಗ ಬರ್ಬೇಕು ...''

''ಈಗ್ಲೇ ಬರಬೇಕು ಸೋಮು. ಮಧ್ಯಾಹ್ನಶೂಟಿಂಗ್ ಇದೆ... ಮುಂದಕ್ಕೆ ಹಾಕಕ್ಕೆ ಆಗಲ್ಲ..''

''ಅಂದ್ರೆ... ಈಗ್ಲೇನಾ ....''

''ಹ್ಞೂ.. ಕಾರು ತಂದಿದೀನಿ... ನನ್ನ ಜೊತೇಲಿ ಬಂದ್ಬಿಡು....''

ಆದರೆ ಕೂಡಲೇ ಹೊರಡಲು ಸಾಧ್ಯವಾಗಲಿಲ್ಲ, ಮೇಲಧಿಕಾರಿಗಳಿಗೆ ಹೇಳಿ ಹೋಗಬೇಕಲ್ಲ? ಆಗ ಗೆಳೆಯ ಗೌರಿಸುಂದರ್‌ಗೆ ಫೋನ್ ಮಾಡಿದೆ. ಸ್ವಲ್ಪ ಹೊತ್ತಿನಲ್ಲಿಯೇ ಒಂದು ದೊಡ್ಡ ಊಟ್ಟಭ ಕಾರು ತಂದು ನಿಲ್ಲಿಸಿದ. ಕಂಠೀರವ ಸ್ಟುಡಿಯೋಗೆ ಅದರಲ್ಲಿ ಹೋಗಿ 'ಜಮ್' ಅಂತ ಇಳಿದೆ.

ಸಿನಿಮಾದಲ್ಲಿ ಮೊದಲನೇ ಛಾನ್ಸು ಇಲ್ಲ ಅನ್ನೋದು ಅಷ್ಟು ಸುಲಭವಲ್ಲ. ಇದರ ಮೇಲೆ ಸಿನಿಮಾನೋ ನಾಟಕಾನೋ ಬಣ್ಣ ಹಚ್ಚಿಕೊಳ್ಳುವ ಕಾಲ ಬಂದಾಗ ಕಣ್ಣು ಮುಚ್ಚಿಕೂಡುವುದು ಬಣ್ಣದ ವಾಸನೆಯನ್ನ ಅನುಭವಿಸಿರುವ ಯಾವ ಕಲಾವಿದನಿಗೂ ಸಾಧ್ಯವಿಲ್ಲ. ನೇರವಾಗಿ ಕಂಠೀರವ ಸ್ಟುಡಿಯೋ ತಲುಪಿದ್ದಾಯಿತು. ಅಲ್ಲಿಗೆ ಹೋದಕೂಡಲೇ ನನಗೆ ಆಗಲೇ ಪರಿಚಯವಿದ್ದ ಶಿವರಾಂ ಅವರ ಹಿರಿಯ ಸಹೋದರ ರಾಮನಾಥ್ ಅವರನ್ನು ಕಂಡೆ. ಮೇಕಪ್ ಮಾಡಿಸಿಕೊಳ್ಳಲು ಹೇಳಿದರು. ಅದೂ ಆಯಿತು ಸೂಟು ಧರಿಸಿದೆ. ಬೂಟು ಹಾಕಿದೆ. ಟೈ ಏರಿಸಿದೆ. ಕೊರಳಲ್ಲಿ ಸ್ಟೆತೋಸ್ಕೋಪ್ ನೇತುಹಾಕಿದೆ. ಕೈಯಲ್ಲಿ ವೈದ್ಯರ ಡಬ್ಬ ಹಿಡಿದೆ. ಕನ್ನಡಿಯಲ್ಲಿ

ನೋಡಿಕೊಂಡೆ... ಎಂಬಿಬಿಎಸ್ ಏಕೆ? ಎಫ್ಆರ್‌ಸಿಎಸ್ ಮುಗಿಸಿಬಂದಿರುವ ತಜ್ಞನ ಕಳೆ ಬಂದಿದೆ. ಅದೆಲ್ಲಾ ಸರಿ. ನಾನು ಡಾಕ್ಟರು! ಆದರೆ ನಾನು ಮಾಡಬೇಕಾದ್ದು ಏನು ? ಹ್ಞೂ.... ಏನಾದರೂ ಇರಲಿ. ಎರಡು ಕಿವಿಗಳಿಗೂ ಸ್ಟೆತೋಸ್ಕೋಪ್‌ನ ಕೊಳವೆಗಳನ್ನು ಇಟ್ಟುಕೊಂಡು, ನನ್ನ ಎದೆಯ ಮೇಲೆ ಅದರ ದುಂಡುಬಿಲ್ಲೆಯಲ್ಲಿ ತಾಕಿಸಿದೆ. ಕರ-ಕರ ಅಂತ ಶಬ್ದ ಮಾಡಿತೇ ವಿನಃ ನನ್ನ ಎದೆ ಬಡಿತ ಕೇಳಿಸಲಿಲ್ಲ. ಆ ಬಿಲೆಯನ್ನು ತಿರುವುಮುರುವು ಮಾಡಿ ಮತ್ತೆ ಪರೀಕ್ಷಿಸಿಕೊಂಡೆ. ಊಹೂ... ಡವಡವ ಎದೆಯ ಹೊಡೆತ ಕೇಳಿಸುತ್ತಿಲ್ಲ... ಆ ಹೊತ್ತು ನನ್ನ ಬದುಕಿನಲ್ಲಿ ಸ್ಮರಣೀಯವಾದದ್ದು ಎಂದು ಹೇಳುವಾಗಲೇ ಮತ್ತೊಂದು ಮಾತು ಹೇಳಬೇಕು. ಆಗ ನಾನು ಮೈಯೆಲ್ಲಾ ಒಮ್ಮೆಲೇ ಬಿಳಚಿಕೊಂಡಷ್ಟು ಬೆದರಿದೆ. ಕಾರಣವಿಷ್ಟೆ, ಯಾರ ಹೆಸರನ್ನು ಹೇಳಿದರಷ್ಟೆ ಎಂಥವರಿಗೂ ರೋಮಾಂಚನವಾಗುವುದೋ ಅಂತಹ ಮಹಾನಟ

ಡಾ. ರಾಜ್‌ಕುಮಾರ್ ಜೊತೆ ನಾನು ಅಭಿನಯಿಸಬೇಕಿದೆ. ಆ ದೃಶ್ಯದಲ್ಲಿ ನಡೆಯಬೇಕಾದ ಸಂಗತಿಗಳೆಂದರೆ -

ಡಾ. ರಾಜ್‌ಕುಮಾರ್ ಆ ಚಿತ್ರದ ನಾಯಕರಾಗಿ ಒಂದು ರೈಲ್ವೇ ಅಪಘಾತದಲ್ಲಿ ಗಾಯಗೊಂಡು ಮಿದುಳಿಗೆ ಪೆಟ್ಟಾಗಿ ಮರೆವಿನ ರೋಗಕ್ಕೆ ತುತ್ತಾಗಿರುತ್ತಾರೆ. ನಾಯಕನ ತಂದೆ- ತಾಯಿಯಾಗಿ ಕೆ.ಎಸ್. ಅಶ್ವತ್ಥ್ ಮತ್ತು ಪಂಢರಿಬಾಯಿ ಪಾತ್ರ ಮಾಡಿದ್ದರು. ತಾಯಿಯ ಕಣ್ಣೀರ ಕೋಡಿ ನಿಂತಿಲ್ಲ. ನಮಗೆ ಯಾರು ಗತಿ ಎಂದು ತಹತಹಿಸುತ್ತಿದ್ದಂತೆ ಡಾಕ್ಟರ್ ಆಗಿ ನನ್ನ ಪ್ರವೇಶ.

ಮೊದಲ ಸಾರಿ ಚಲನಚಿತ್ರದಲ್ಲಿ ಪಾತ್ರ ... ಅವತ್ತೇ ಕ್ಯಾಮರಾ ಹೇಗಿರುತ್ತೆ ಅಂತ ಕಂಡದ್ದು. ನಾಲ್ಕು ನಿಟ್ಟಿನಿಂದಲೂ ಕಣ್ಣು ಕೋರೈಸುವ ಹಾಗೆ, ಬೆವತು ಹೋಗುವಷ್ಟು ಹತ್ತಿರದಲ್ಲಿ ದೀಪಗಳನ್ನು ಹತ್ತಿಸಿದ್ದಾರೆ. ಪಾತ್ರಧಾರಿಗಳಿಗೆ ಯಾರು, ಎಲ್ಲಿಂದ, ಹೇಗೆ ಪ್ರವೇಶ ಮತ್ತು ನಿರ್ಗಮನ ಅನ್ನುವುದನ್ನು ನಿರ್ದೇಶಕರು ಹೇಳುತ್ತಿದ್ದಾರೆ. ಸಂಭಾಷಣೆ-ಮಾತುಗಳನ್ನು ಹೇಳಿಸುತ್ತಾ ತಿದ್ದುತ್ತಿದ್ದಾರೆ. ಮೊದಲೇ ಹೆದರಿಹೋಗಿರುವ ನಾಯಿಮರಿ ಆಗಿದ್ದೇನೆ. ಕೈಕಾಲು ನಡುಗುತ್ತಿರುವುದನ್ನು ಗಮನಿಸುತ್ತಿದ್ದೇನೆ. ಒಂದು ಎರಡು ... ಮೂರು ...

ಡಾ. ರಾಜ್‌ಕುಮಾರ್ ಬಂದರು. ಮಂಚದ ಮೇಲೆ ಮಲಗುವ ಮುನ್ನ ನಿರ್ದೇಶಕರು ನನ್ನನ್ನು ಪರಿಚಯಿಸಿದರು. ಅವರನ್ನು ಮೊದಲ ಬಾರಿಗೆ ಕಣ್ತುಂಬ ನೋಡಿದೆ. ಅಬ್ಬ ಅಂಥ ಮಹಾನ್ ನಟನ ಇಷ್ಟೊಂದು ಸಮೀಪದಲ್ಲಿದ್ದೇನೆ. ಪಕ್ಕಕ್ಕೆ ತಿರುಗಿದರೆ

ನಿಂತಿದ್ದಾರೆ - ಇನ್ನಿಬ್ಬರು, ಮೇರು ನಟ, ನಟಿ, ಕೆ.ಎಸ್. ಅಶ್ವತ್ಥ್ ಮತ್ತು ಪಂಢರಿಬಾಯಿ.

ಇದು ದೊಡ್ಡ ಸೀನು, ಕರಾರುವಾಕ್ಕಾಗಿ ನಡೀಬೇಕು. ನಿಮ್ಮ ಪೊಸಿಶನ್ (ನಿಲ್ಲುವ-ಓಡಾಡುವ ಸ್ಥಳಗಳನ್ನು) ಸರಿಯಾಗಿ ನೋಡಿಕೊಳ್ಳಿ ಅಂತ ನಿರ್ದೇಶಕರು ಹೇಳುತ್ತಿದ್ದಂತೆ ಛಾಯಾಗ್ರಾಹಕರು ಆಲ್‌ಲೈಟ್ಸ್ (ಎಲ್ಲಾ ದೀಪಗಳನ್ನು ಹಾಕಿ) ಅಂತ ಕೂಗಿದರು.

ಅವರವರ ಜಾಗದಲ್ಲಿ ಅವರದು ಸಿದ್ಧ, ನಿರ್ದೇಶಕರು ಸೈಲೆನ್ಸ್ ಅಂದರು, ಆಲ್‌ಲೈಟ್ಸ್ ಬರ್ನಿಂಗ್? (ಎಲ್ಲಾ ದೀಪಗಳನ್ನು ಹಚ್ಚಿದ್ದೀರಾ?) ಆರ್ಟಿಸ್ಟ್ ರೆಡಿ? (ಕಲಾವಿದರು ಸನ್ನದ್ಧರಾಗಿದ್ದೀರಾ?) ಎಂದು ಕೇಳುತ್ತಾ(ಸ್ಟಾರ್ಟ್ ಕೆಮರ) ಕ್ಯಾಮರಾ ಚಾಲೂ ಮಾಡಿರಿ. ಎಷ್ಟನೇ ಸೀನು ಇತ್ಯಾದಿ. ಬರೆದಿರುವ ಒಂದು ಹಲಗೆಯನ್ನು ಅಡ್ಡ ಇಡುವುದು. 'ಆ್ಯಕ್ಷನ್' ಎಂದು ದೊಡ್ಡ ದನಿಯಲ್ಲಿ ಕೂಗಿದರು. ಮೊದಲಿಗೆ ನನ್ನದೇ ಅಭಿನಯ ....

ಎರಡು ಹೆಜ್ಜೆ ಮುಂದೆ ಹೋಗಿ, ಮಂಚದ ಮೇಲೆ ಮಲಗಿರುವ ಚಿತ್ರದ ನಾಯಕನ (ಡಾ. ರಾಜ್‌ಕುಮಾರ್) ಪಕ್ಕಕ್ಕೆ ಕುಳಿತು, ಹಣೆ ಮುಟ್ಟಿ, ಕಣ್ಣಿನ ಕೆಳರೆಪ್ಪೆಯನ್ನು ಹಿಗ್ಗಿಸಿ ಪರೀಕ್ಷೆ ಮಾಡಿ, ನಾಡಿ ಹಿಡಿದು, ಬಿಟ್ಟು, ಸ್ಟೆತಾಸ್ಕೋಪ್ ಕತ್ತಿನ ಮೂಲಕ ತೆಗೆದು ನಾಯಕನ ಎದೆಭಾಗವನ್ನು ಪರೀಕ್ಷಿಸುವಂತೆ ನಟಿಸಿ, ಮೆಲ್ಲಗೆ ಮೇಲೆದ್ದು, ನನ್ನ ಡಾಕ್ಟರ್ ಪೆಟ್ಟಿಗೆಯಿಂದ ಸಿರಿಂಜ್ ತೆಗೆದು, ಚಿಕ್ಕ ಹತ್ತಿ ತುಂಡಿನಿಂದ ಡಾ. ರಾಜ್ ಅವರ ಕೈಗಳನ್ನು ಟಿಂಕ್ಚರ್‌ನಿಂದ ಸವರಿಸಿದ ಹಾಗೆ ಮಾಡಿ ಮೇಲೆಕ್ಕೆತ್ತಿ ನಾಯಕ ಮಹಾಶಯನಿಗೆ ಇಂಜೆಕ್ಷನ್ ಚುಚ್ಚಿದೆ. ತಾಳಿ, ತಾಳಿ... ಅವಸರಬೇಡ.... ಚುಚ್ಚಿದ ಹಾಗೆ ನಟಿಸಿದೆ.

ಎದ್ದು ನಿಂತೆ. ನಾಲ್ಕು ಹೆಜ್ಜೆ ಇಟ್ಟು, ಕರ್ಚೀಫ್‌ನಿಂದ ಕೈ ಒರೆಸಿಕೊಳ್ಳುತ್ತಿದ್ದಂತೆ ತಂದೆಯ ಪಾತ್ರಧಾರಿ ಅಶ್ವತ್ಥ್ ಹತ್ತಿರ ಬರುತ್ತಾರೆ.

''ಡಾಕ್ಟರ್ ನನ್ನ ಮಗನಿಗೆ ಏನಾಗಿದೆ... ಜೀವಕ್ಕೆ ಅಪಾಯವಿಲ್ಲತಾನೆ?'' ಅಂತ ಕೇಳುತ್ತಾರೆ.

''ಅಪಘಾತದಲ್ಲಿ ಅವರ ಮಿದುಳಿಗೆ ಪೆಟ್ಟು ಬಿದ್ದಿದೆ. ಅದರಿಂದಾಗಿ ಸ್ಮರಣಶಕ್ತಿಯೂ ಹೋಗಿದೆ ಹೆದರಬೇಡಿ. ಜೀವಕ್ಕೆ ಅಪಾಯವಿಲ್ಲ..'' ಅಂತ ನಾನು ಮಾತಾಡಿದ್ದೇನೆ.

ಕಟ್, ಕ್ಯಾಮರಾ ಚಾಲನೆ ನಿಲ್ಲುತ್ತದೆ.

''ಓ.ಕೆ. ಬಹಳ ಚೆನ್ನಾಗಿ ಮಾಡಿದಿರಿ'' ಶಹಬ್ಬಾಸ್‌ಗಿರಿ ... ಡಾ. ರಾಜ್‌ಕುಮಾರ್ ನಿಧಾನವಾಗಿ ಎದ್ದು ನನ್ನನ್ನು ನೋಡುತ್ತಾ.... ''ನೀವು ನಿಜವಾಗ್ಲೂ ಡಾಕ್ಟರಾ?'' ಅಂತ ಕೇಳಿದರು. ''ಇಲ್ಲಾ ಸಾರ್, ನಾನು ಬ್ಯಾಂಕಿನಲ್ಲಿ ಕೆಲಸ ಮಾಡ್ತೀನಿ...''

''ಹೌದಾ... ನೀವು ಅಭಿನಯಿಸಿದ್ದು, ನಿಮ್ಮ ಮಾತು ಎಲ್ಲಾ ನೋಡಿ, ಕೇಳಿ ನನಗೆ ಹಾಗೆನಿಸಿತು. ಚೆನ್ನಾಗಿ ಮಾಡಿದಿರಿ...''

''ದೊಡ್ಡವರ ದೊಡ್ಡತನ ಇದು. ಎಲ್ಲಿ ಪ್ರತಿಭೆ ಇದೆಯೊ ಅಲ್ಲಿ ಮನಸಾರೆ ಪ್ರಶಂಸೆ, ಪ್ರೋತ್ಸಾಹ; ಅದರಿಂದಾಗಿ ಕಿರಿಯರಿಗೆ ಭೀಮಶಕ್ತಿ.''

ನನ್ನ ಎದೆ ಉಬ್ಬಿತು. ತುಂಬಾ ಸಂತೋಷವಾಯಿತು. ಇಷ್ಟೇ ಸಾಲದು ಅನ್ನುವ ಹಾಗೆ ಕೆ.ಎಸ್. ಅಶ್ವತ್ಥ್‌ರವರೂ ಮೆಚ್ಚುಗೆ ಸೂಚಿಸಿದಾಗ ನನ್ನ ಆನಂದ ಅಸದಳ. ಈ ಮೆಚ್ಚುಗೆಯಲ್ಲಿ ಕೊಂಚವೂ ಕೃತ್ರಿಮತೆ ಇರಲಿಲ್ಲ. ಶುದ್ಧ ನಿರ್ಮಲ ಪ್ರೀತಿ. ಇಂಥ ಗುಣಗಳೂ ಇತ್ತೀಚೆಗೆ ಮಾರಾಟದ ವಸ್ತುವಾಗಿರುವುದು ಸಾಂಸ್ಕೃತಿಕ ರಂಗದ ದುರ್ದೈವ.

ಡಾ|| ರಾಜ್‌ಕುಮಾರ್ ರಂಗಭೂಮಿಯ ಮೇಲೆ ಅದ್ಭುತವಾಗಿ ನಟಿಸುವುದನ್ನು ಕಂಡಿರುವ ಭಾಗ್ಯ ನನ್ನದು. ಮುತ್ತುರಾಜ್ ಆಗಿದ್ದ ಅವರ ಕಾಲದಲ್ಲಿ ಜನಮನವನ್ನು ಗೆದ್ದವರು. ಇತರ ಅದ್ಭುತ ನಟರ ಜೊತೆಜೊತೆಗಿದ್ದೂ ತಮ್ಮ ಪಾತ್ರಾಭಿನಯದಿಂದ ಹೆಸರಾಗಿದ್ದರು. ಆಗ ಗುಬ್ಬಿವೀರಣ್ಣ ಕಂಪೆನಿಯಲ್ಲಿ ಮತ್ತು ಇನ್ನಿತರ ಪ್ರಖ್ಯಾತ ನಾಟಕ ಕಂಪೆನಿಗಳಲ್ಲಿ ಜನಾದರಣೀಯರಾಗಿದ್ದ ಅನೇಕ ಪ್ರಸಿದ್ಧ ಹಿರಿಯ ನಟರಿದ್ದರು. ಅವರ ಸರಿಸಮಕ್ಕೆ ನಿಂತು ತಮ್ಮ ಕಲಾಪ್ರತಿಭೆಯಿಂದ ಬೆಳಗಿದ್ದು ರಾಜ್ ಅವರಿಗಿದ್ದ ಕಲಾಪ್ರತಿಭೆಗೆ ಸಾಕ್ಷಿ. ಅಲ್ಲಿಂದ ಮುಂದೆ ಚಲನಚಿತ್ರ ಜಗತ್ತಿಗೆ ಪದಾರ್ಪಣೆ ಮಾಡಿದ್ದು, ಅಲ್ಲಿಯೂ ತಮ್ಮ ನಟನಾ ಸಾಮರ್ಥ್ಯದಿಂದ ಬೆಳಗಿದ್ದು ಕನ್ನಡ ಚಲನಚಿತ್ರ ಇತಿಹಾಸದ ಪುಟಗಳಲ್ಲಿ ದಾಖಲಿಸುವಂಥದ್ದು. ಅವರ ನಿಧನದಿಂದ ನಾಡಿನ ಕಲಾಜೀವನ ಬಡವಾಗಿದೆ.

ಡಾ|| ರಾಜ್‌ಕುಮಾರ್ ಬಗ್ಗೆ ಏನೇನೂ ಬರೆದರೂ, ಎಷ್ಟು ಬರೆದರೂ ಅವರ ಪೂರ್ಣ ವ್ಯಕ್ತಿತ್ವವನ್ನು ಹಿಡಿಯುವುದು ಅಸಾಧ್ಯ.

1954ರಲ್ಲಿ ಅಂದರೆ 50 ವರ್ಷಗಳ ಹಿಂದೆ ಬೇಡರಕಣ್ಣಪ್ಪ ಚಿತ್ರದ ಮೂಲಕ ಒಮ್ಮೆಲೇ ಪ್ರಖ್ಯಾತರಾದ ಕೀರ್ತಿ ಅವರದು. ಅಲ್ಲಿಂದ ಮುಂದೆ 205ಕ್ಕೂ ಮಿಕ್ಕ ಭಕ್ತಿಪ್ರಧಾನ, ಐತಿಹಾಸಿಕ ಮತ್ತು ಸಾಮಾಜಿಕ ಚಿತ್ರಗಳಲ್ಲಿ ಅಭಿನಯಿಸಿ 'ನಭೂತೋ ನಭವಿಷ್ಯತಿ' ಎಂಬ ಕೀರ್ತಿಗೆ ಭಾಜನರಾದವರು.

ಆಕಾಶದ ಎತ್ತರಕ್ಕೆ ಬೆಳೆದರೂ ಕಾಲಡಿಯ ನೆಲವನ್ನು ಮರೆತವರಲ್ಲ. ಗ್ರಾಮೀಣ ಬದುಕಿಗೆ ವಿಮುಖರಾಗದೆ ತಾವು ಬೆಳೆದು ಬಂದ ಜನಸಾಮಾನ್ಯರ ಒಡನಾಟದಲ್ಲಿದ್ದವರು. ಎಲ್ಲರನ್ನು ಪ್ರೀತ್ಯಾದರಗಳಿಂದ ಮಾತಾಡಿಸುತ್ತಿದ್ದರು. ಸಂಗೀತ

ಸಾಮ್ರಾಜ್ಞೆ ಡಾ|| ಗಂಗು ಬಾಯಿ ಹಾನಗಲ್ ಹೇಳಿದ್ದು ಸತ್ಯ : ''ಎಲ್ಲರಿಗೂ ಮಾನಕೊಟ್ಟು ಮಾತಾಡುವ ವ್ಯಕ್ತಿ''

ಅವರ ಕಲಾಜೀವನದಲ್ಲಿ ಅಭಿನಯಿಸಿದ ಪಾತ್ರಗಳು ವೈವಿಧ್ಯಪೂರ್ಣ, ಅಪೂರ್ವ ಮತ್ತು ಅಮರ. ತಾನೊಬ್ಬ Super Star ಎಂಬ 'ಅಹಂ'ನಿಂದ ಬೀಗಲಿಲ್ಲ; ಟನ್‌ಗಟ್ಟಲೆ ಹಣಳಿಸಬಹುದಾಗಿದ್ದೂ ಪರಭಾಷಾ ಚಿತ್ರಗಳ ಕಡೆ ವಾಲಲಿಲ್ಲ. 'ಕನ್ನಡವೇ ಸತ್ಯ, ಕನ್ನಡವೇ ನಿತ್ಯ' ಎಂಬ ಜಪ ಅವರ ನಾಲಿಗೆಯ ಮೇಲೆ ನಿರಂತರವಾಗಿತ್ತು. ರಂಗಭೂಮಿಯಲ್ಲಾಗಲೀ, ಚಲನಚಿತ್ರದಲ್ಲಾಗಲೀ ಒದಗಿಬಂದ ಪಾತ್ರಗಳನ್ನು ಮಾಡುವಾಗ ಅವರ 'ಕನ್ನಡ' ಅಸ್ಖಲಿತ, ನಿಚ್ಚಳ, ಸ್ವಚ್ಛ. ಕನ್ನಡ ಭಾಷೆಯ ಸೊಗಸು, ಸೊಗಡು, ಸೊಬಗನ್ನು ತಮ್ಮ ನಟನೆಗೆ ಪೂರಕವಾದ ಸಂಭಾಷಣೆಯ ಮೂಲಕ ತೋರಿಸಿಕೊಟ್ಟ ಅಭಿಜಾತ ನಟ. ಸಾರ್ವಜನಿಕವಾಗಿ ಎಂದೂ 'ಸಿನೀಮಾ ಸ್ಟಾರ್' ಆಗಿ ಕಾಣಿಸಿಕೊಳ್ಳಲಿಲ್ಲ. ಸರಳ ಉಡುಪಿನ ಸಾಮಾನ್ಯನಂತೆ ಎಲ್ಲರೊಳೊಬ್ಬರಾಗಿ ಜೀವಿಸಿದರು. ಒಂದು ಪಂಚೆ, ಬಿಳಿ ಷರಟು - ಇಷ್ಟೇ ಅವರ ನಿತ್ಯದ ಉಡುಪು. ಇನ್ನು ಅಭಿನಯಿಸಿದ ಪಾತ್ರಗಳನ್ನು ವಿಶ್ಲೇಷಿಸಿದಾಗ ಸ್ಪಷ್ಟವಾಗಿ ತಿಳಿಯುವ ಸಂಗತಿಯೆಂದರೆ ಅವೆಲ್ಲಾ ಆದರ್ಶವಾದ ಪಾತ್ರಗಳೇ. ಕಲೆಯ ಕಡಲಲ್ಲಿ ಸಲೀಸಾಗಿ ಈ ಸುತ್ತ, ಏಳುವ ಅಬ್ಬರದ ಅಲೆಗಳನ್ನು ನಿಭಾಯಿಸುತ್ತ ತಮ್ಮ ಅದಮ್ಯ ಶಕ್ತಿ ಸಾಮರ್ಥ್ಯಗಳನ್ನು ಅರಿತವರಾಗಿದ್ದೂ ದೂರ ತೀರದ ಮರಳರಾಶಿಯ ಮೇಲಣ ರಾಜಕಾರಣವೆಂಬ ಮಹಲನ್ನು ಪ್ರವೇಶಿಸಲಿಲ್ಲ. ತಾನೊಬ್ಬ ನಟ, ತಿಳಿನೀರಿನ ಕಲಾ ಕೊಳದಲ್ಲಾಡುವ ಹಂಸ ಎಂಬುದನ್ನು ತೋರಿಸುತ್ತ, ರಾಜಕೀಯದ ಕಾಲುಜಾರುವ ಕೆಸರಲ್ಲಿ ಕಾಲುಹಾಕಲಿಲ್ಲ. ಕಲಾಲೋಕದ ಚಕ್ರವರ್ತಿಗೆ ಏಕೆ ಮುರಿದಕೋಟೆಯ ಪಾಳೆಗಾರಿಕೆ?

ಡಾ|| ರಾಜ್ ಅವರೊಡನೆ ಲೋಕಾಭಿರಾಮವಾದ ಮಾತಾಗಲಿ ಅಥವ ಸಾರ್ವಜನಿಕ ಸಭೆಗಳಲ್ಲಿ ಅವರು 'ಭಾಷಣ' ಮಾಡುವುದಾಗಲಿ ಎಲ್ಲೂ ಯಾವ ಕೃತಿಮತೆಯನ್ನು ಕಾಣುವುದು ಸಾಧ್ಯವಿರಲಿಲ್ಲ. ಅದಕ್ಕೇ ಅವರು ರಾಜಕೀಯ ಪ್ರವೇಶ ಮಾಡಲಿಲ್ಲ. 'ಕೃತಕತೆ' ಎಂಬುದು ರಾಜಕಾರಣಿಗಳ ಸ್ವತ್ತು!

ಡಾ|| ರಾಜ್ ಮಾತಿನಲ್ಲಿಯೂ ಸರಳತೆ ತುಂಬಿರುತ್ತಿತ್ತು. ಅವರದು ಮಗುವಿನಂಥ ಮನಸು. ಎಷ್ಟೇ ಸರಳವಾದ ವಿಷಯವಾಗಿದ್ದರೂ ತಮಗೆ ಸಂಪೂರ್ಣವಾಗಿ ತಿಳಿಯದಿದ್ದಾಗ ಮಗುವಿನ ಹಾಗೆ ಮುಗ್ಧವಾದ ಪ್ರಶ್ನೆಗಳನ್ನು ಕೇಳುತ್ತಿದ್ದವರು. ತಮ್ಮ ಮಾತು, ನಡೆ, ನುಡಿಗಳಿಂದ ಸಾಮಾನ್ಯರಿಗೂ - ಮಧ್ಯಮ ವರ್ಗದವರಿಗೂ - ಅವರು ಆದರ್ಶಪ್ರಾಯ ರಾದರು - ಅವರೆಲ್ಲರ ಅಭಿಮಾನಧನರಾದರು. ಅವರ ಕನ್ನಡ ಭಾಷೆಯ ಉಚ್ಚಾರ, ಕೃತಕವಲ್ಲದ ಬದುಕಿನಿಂದಾಗಿ ರಂಗಭೂಮಿ - ಚಲನಚಿತ್ರಗಳಲ್ಲಿ


ಅವರ ಸಂಭಾಷಣೆಗೆ ಒಂದು ಮೆರುಗಿತ್ತು. ಹಾಗೆಯೇ ಸಾಮಾಜಿಕ, ಪೌರಾಣಿಕ ಅಥವ ಐತಿಹಾಸಿಕ ಚಿತ್ರಗಳ ಮೂಲಕ ಡಾ॥ ರಾಜ್ ತಮ್ಮ ಸಾಮಾಜಿಕ ಕಳಕಳಿಯನ್ನು ಹೊರಗೆಡವಿದ್ದಾರೆ. ಅಷ್ಟೇ ಅಲ್ಲ ತನ್ಮೂಲಕ ಬದುಕಿನ ನಿಜ ಮೌಲ್ಯಗಳನ್ನು ಎತ್ತಿ ಹಿಡಿದು ಜನಸಾಮಾನ್ಯರ ಹೃದಯ ಸಿಂಹಾಸನವನ್ನೇರಿದ್ದಾರೆ. ಹೀಗಾಗಿ ನಮ್ಮ ಸಾಂಸ್ಕೃತಿಕ ಸಮೃದ್ಧತೆಗೆ ಅವರದು ಅಪಾರ ಕೊಡುಗೆ.

ನಟನೆ ಒಂದು ಆಧ್ಯಾತ್ಮಿಕ ಅನುಭವ ಎಂದು ಸಾಧಕರು ಅಭಿಪ್ರಾಯಪಟ್ಟಿದ್ದಾರೆ. ನಟ, ಸಾಧನೆಯಿಂದ ಏನನ್ನಾದರೂ ಸಾಧಿಸಬಹುದಾಗಿದೆ, ಊರ್ಧ್ವಮುಖಿಯಾಗ ಬಹುದಾಗಿದೆ. ಡಾ॥ ರಾಜ್ ಅವರು ತಮ್ಮ ಯೋಗ, ಅಧ್ಯಾತ್ಮ ವಿಚಾರಗಳನ್ನು ನಟನೆಗೆ ಅಳವಡಿಸಿಕೊಂಡು ಎತ್ತರಕ್ಕೆ ಏರಿದರು. ನಮ್ಮ ಸಂದರ್ಭದಲ್ಲಿ ಕನ್ನಡ ಸಂಸ್ಕೃತಿಯ ಸ್ವಚ್ಛ ಪ್ರತೀಕವಾಗಿ ಬೆಳೆದರು. ವರ್ತಮಾನದಲ್ಲಿದ್ದು ಹಳೆಯದನ್ನು ಮರೆಯದೆ ಭವಿಷ್ಯದ ಕಡೆ ನೋಡುತ್ತಲೇ ಮೇಲೇರಿದವರು. ಅಂತಹ ಎಚ್ಚರದ ಬದುಕು ಕಲಾವಿದನಿಗೆ ವಜ್ರಕವಚ. ಆಗಲೇ ''ಆಡಿಸಿ ನೋಡಲಿ, ಬೀಳಿಸಿ ನೋಡಲಿ'' ಕಲಾ ಬದುಕು ಉರುಳಿಹೋಗದಂತೆ ನೋಡಿಕೊಳ್ಳಲು, ''ಏನೇ ಬರಲಿ, ಯಾರಿಗೂ ಸೋತು, ತಲೆಯ ಬಾಗದಂತೆ'' ಇರಲು ಸಾಧ್ಯ.

ಈ ಸಾಂಸ್ಕೃತಿಕ ನಾಯಕರಾದ ಡಾ॥ ರಾಜ್ ಅವರನ್ನು ಒಬ್ಬ Legendary ವ್ಯಕ್ತಿಯನ್ನಾಗಿ ಕಾಣುವುದು ಈ ದೃಷ್ಟಿಯಿಂದ ಕ್ಲೀಶೆಯಲ್ಲ. ಕನ್ನಡ ಚಲನಚಿತ್ರ ಇತಿಹಾಸದ ರೂವಾರಿಯಾಗಿದ್ದ ಡಾ॥ ರಾಜ್, ಕಾಡುಗಳ್ಳ ವೀರಪ್ಪನ್ ಹಿಡಿತದಲ್ಲಿದ್ದು - ಸಾವಿನ ಅಂಚಿನಲಿದ್ದಾಗ - ಆ ಕಳೆದ ಕರಾಳ ದಿನಗಳಲ್ಲಿ ಅವರು ತೋರಿದ ಧೈರ್ಯ, ಸ್ಥೈರ್ಯ, ನಿರ್ಭಾವ ಮನೋಭಾವ ಅದ್ಭುತವಲ್ಲದೆ ಮತ್ತೇನು? ಕನ್ನಡ ನಾಡು-ನುಡಿ ರಕ್ಷಣೆಗಾಗಿ ಬೇಕೆಂದಾಗಲೆಲ್ಲಾ ಕೈ ಎತ್ತಿ ಮುಂದಾಳತ್ವ ವಹಿಸಿದವರು ಡಾ॥ ರಾಜ್ ಸೊಗಸಾದ ಗಾಯಕರೂ ಆಗಿದ್ದು ರಾಷ್ಟ್ರಮಟ್ಟದಲ್ಲಿ ಮನ್ನಣೆ ಪಡೆದರು. ಅವರನ್ನು ಪ್ರೀತಿಸದವರೇ ಇಲ್ಲ ಜನಪರ ಕಾಳಜಿ, ಜನಪರ ಸಂಸ್ಕೃತಿಯ ಪ್ರತೀಕರಾಗಿದ್ದ ಸಿಂಗಾನಲ್ಲೂರ್ ಮುತ್ತುರಾಜ್ - ಡಾ॥ ರಾಜ್‌ಕುಮಾರ್ ನಿಧನ ಒಂದು ಶಕೆಯ ಅಂತ್ಯ.

''ನಾಟಕದೊಳನುವಿಂದ ಬೆರೆತದನು ಮೆಚ್ಚೆನಿಸಿ।
ನೋಟಕನುಮಾಗಿ ತಾಂ ನಲಿದು ನಲಿಯಿಸುವಾ॥
ಪಾಠವನು ಕಲಿತವನೆ ಬಾಳನಾಳುವ ಯೋಗಿ।
ಆಟಕಂ ನಯವುಂಟು - ಮಂಕುತಿಮ್ಮ॥''

◆◆◆◆◆



ನಾಡೋಜ – ಡಾ॥ ರಾಜ್‌ಕುಮಾರ್

– ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

'ರಾಜ್‌ಕುಮಾರ್' ಎಂಬ ಹೆಸರು ಕನ್ನಡದ ಮಂತ್ರವಾಗಿದ್ದು ಈಗ ಒಂದು ಇತಿಹಾಸ. ಮಂತ್ರ ಎಂದರೆ 'ಮನಸ್ಸನ್ನು ರಕ್ಷಿಸುವ ಶಕ್ತಿ' ಎಂದು ಅರ್ಥ. ಮಂತ್ರ ಎಂಬುದು ಅಲೌಕಿಕವಾದುದೇನೂ ಅಲ್ಲ. ಅದೊಂದು ನಿರಂತರ ಸಾಧನೆಯಿಂದ ದತ್ತವಾಗುವ ಶಕ್ತಿ. ರಾಜ್‌ಕುಮಾರ್ ಹೀಗೆ ಒಂದು ರಕ್ಷಿಸುವ ಶಕ್ತಿಯಾಗಿದ್ದು ಈ ನಾಡಿನ ಸೌಜನ್ಯ. ನಾನು ಕಣ್ತೆರೆಯುವ ಕಾಲಕ್ಕೆ ರಾಜ್‌ಕುಮಾರ್ ನಟನೆ ಪ್ರತಿಭೆಯ ಉನ್ನತ ಶಿಖರವಾಗಿದ್ದರು. ಅವರು ತಮ್ಮ ಬದುಕಿನ ಕಾಲಕ್ಕೆ ಲೆಜೆಂಡ್ ಆಗಿದ್ದರು. ಇಂಥವರು ಯುಗಯುಗದಲ್ಲೂ ವಿರಳಾತಿವಿರಳವೆಂದೇ ನನ್ನ ಭಾವನೆ!

ಇಂಥ ವಿರಳಾತಿವಿರಳ ದೈವ ಮಾನವನನ್ನು ನಾನು ಕಂಡದ್ದು - ಕನ್ನಡ ವಿಶ್ವವಿದ್ಯಾಲಯದ ಕುಲಸಚಿವನಾಗಿ ಕಾರ್ಯ ನಿರ್ವಹಿಸುತ್ತಿರುವಾಗ. ಕನ್ನಡ ವಿಶ್ವವಿದ್ಯಾಲಯವು ಪ್ರತಿವರ್ಷ ಗಣ್ಯರಿಗೆ 'ನಾಡೋಜ' ಪ್ರಶಸ್ತಿಯನ್ನು ನೀಡುತ್ತಿತ್ತು. 1998ರಲ್ಲಿ ಅವರಿಗೆ 'ನಾಡೋಜ' ನೀಡಬೇಕೆಂದು ನಿರ್ಧರಿಸಿ ಅವರಿಗೆ ಪ್ರಶಸ್ತಿ ನೀಡುವ ಸಂಬಂಧ ಪತ್ರ ವ್ಯವಹಾರ ಮಾಡಲಾಯಿತು. ದೂರವಾಣಿ ಮೂಲಕ

ಅವರನ್ನು ಸಂಪರ್ಕಿಸಲಾಯಿತು. ಆಗ ವಿಶ್ವವಿದ್ಯಾಲಯದ ಕುಲಪತಿಯಾಗಿದ್ದ ಡಾ. ಎಂ.ಎಂ. ಕಲಬುರ್ಗಿ ರಾಜ್‌ಕುಮಾರ್ ಅವರನ್ನು ಕಂಡು ಬಂದರು. ನನಗೆ ಅವರ ಮನೆಗೊಮ್ಮೆ ಹೋಗಿ ಬರಬೇಕೆಂಬ ಆಸೆ. ನಾನು ನೇರವಾಗಿ ದೂರವಾಣಿ ಮಾಡಿದೆ. ಅವರ ಸಹಾಯಕ 'ಚೆನ್ನ' ತೆಗೆದುಕೊಂಡರು. ಆನಂತರ ಶ್ರೀಮತಿ ಪಾರ್ವತಮ್ಮನವರು ದೂರವಾಣಿ ಪಡೆದು - ಮಾತಾಡಿದರು. ಅಭಿನಂದನೆಯ ಮಾತುಗಳನ್ನು ಆಡಿದೆ. ನನ್ನ ಹೆಸರನ್ನು ಹೇಳಿಕೊಂಡೆ. ಅವರು ಅಕ್ಕರೆಯಿಂದ ಮಾತಾಡಿದರು. ಆನಂತರ ರಾಜ್‌ಕುಮಾರ್ ಪಡೆದು ಅದೇ 'ದೈವವಾಣಿ'ಯಿಂದ ಮಾತನಾಡಿದರೂ ಅವರ ಮನೆಗೊಮ್ಮೆ ಬರುವ ವಿಷಯ ತಿಳಿಸಿದೆ, ಅವರು ನಾಡೋಜ ಪ್ರಶಸ್ತಿ ಪಡೆಯಲು ಬಂದು ಹೋಗುವ ವ್ಯವಸ್ಥೆಮಾಡಬೇಕಿತ್ತು ಆ ಸಂಬಂಧವಾಗಿ ಮಾತಾಡಿದೆ. 'ಅಯ್ಯೋ ಅದೆಲ್ಲನನಗೊತ್ತಾಗೊಲ್ಲ ಎಲ್ಲ ಪಾರ್ವತಿಗೆ ಸೇರಿದ್ದು ಅವರೊಡನೆ ಮಾತಾಡಿ' ಎಂದು ಬಿಟ್ಟರು. ಮನೆಗೆ ಬರಲು ಮರೆಯದೆ ಆಹ್ವಾನಕೊಟ್ಟರು. ನಾನು ಆನಂದ ತುಂದಿಲನಾದೆ! ಬರುವ ದಿನಾಂಕ ಮತ್ತು ಸಮಯ ತಿಳಿಸಿದೆ!

ನಾನು ತಿಳಿಸಿದ ದಿನ ಅವರ ಮನೆಗೆ ಹೋದೆ. ನನ್ನ ಎದೆ ಢವಗುಟ್ಟುತ್ತಿತ್ತು. ಚಲನಚಿತ್ರ ಪರದೆಯ ಮೇಲೆ ನೋಡಿದ್ದ ಆ 'ಮಹಾನಟ'ನನ್ನು ಪ್ರತ್ಯಕ್ಷ ಕಾಣುತ್ತಿರುವ ಹೊತ್ತು. ನಾನೊಬ್ಬನೇ ಮನೆಯ ಒಳಹೋದೆ. ನನ್ನ ಹೆಸರನ್ನೂ ಹೇಳಿದೆ. ಒಳಗೆ ಹೋದೆ. ವರಾಂಡದಲ್ಲಿ ಕೂತವರು ಎದ್ದು ನಿಂತು ನಮಸ್ಕರಿಸಿದರು. ಅಂಥ ಮಹಾನಟ ನಮಸ್ಕಾರ ಮಾಡಿದಾಗ ನಾನು ಕುಗ್ಗಿಹೋದೆ. ಅವರ ಸದುಹೃದಯ, ಸದ್ವಿನಯ, ಸದ್ವರ್ತನೆ ಎಂಬ ಮಾತುಗಳು ಕೇವಲ ಉಪಚಾರದ ಮಾತುಗಳಲ್ಲ, ಅದಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿ ಡಾ. ರಾಜ್‌ಕುಮಾರ್ ನನ್ನ ಎದುರಿಗಿದ್ದರು. ನಾನು ಅವರ ಜತೆ ಅರ್ಧಗಂಟೆ ಇದ್ದೆ. ಅವರು ಬಂದು ಹೋಗವ ಬಗೆಗೆ ಎಲ್ಲ ವಿವರಗಳನ್ನು ನೀಡಿದೆ. ಅನಂತರ ನಮ್ಮ ಮಾತು 'ಕನ್ನಡ'ದ ಕಡೆ ತಿರುಗಿತು. ಕನ್ನಡ ಎಂದಾಗ ಅದೊಂದು ಭಾಷೆ ಎಂಬ ಸೀಮಿತಾರ್ಥದಲ್ಲಿ

ಮಾತಾಡದೆ ಒಟ್ಟು 'ಜೀವನಕ್ರಮ'ವೆಂದೇ ಅವರು ತಿಳಿದು ಮಾತಾಡಿದರು. ಕನ್ನಡ ಎಂಬುದರಲ್ಲಿ ನಮ್ಮ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ---- ಹೀಗೆ ಹಲವು ಸ್ತರಗಳ 'ಕೂಡಾಟ' ಎಂಬ ನಂಬಿಗೆ ಅವರಲ್ಲಿತ್ತು. ನಾನು ಅವರು ಮಾತುಗಳನ್ನೂ ಕೇಳುತ್ತ ವಿಸ್ಮಿತನಾದೆ. 'ಭಾಷೆ', 'ಕನ್ನಡ ಭಾಷೆ' ಎಂಬ ಮಾತುಗಳನ್ನು ಅದರ ಸಮಸ್ತವಸ್ತು

ಪರಿಸರದಲ್ಲಿ ಮಾತಾಡಿದ್ದಕ್ಕೆ ನಾನು ಬೆರಗಾದೆ. ಅವರು ನಾಟಕ, ಚಲನಚಿತ್ರಗಳಲ್ಲಿ ಕನ್ನಡ ಭಾಷೆ - ಕನ್ನಡ ಸಂಸ್ಕೃತಿಯು ಪ್ರತಿಬಿಂಬಿತವಾಗುತ್ತಿರುವ ನೆಲೆಗಳನ್ನು ಬಹು ಎಚ್ಚರದಿಂದಲೇ ಮಾತನಾಡಿದರು.

ನಾವು ಮಾತಾಡುತ್ತಿರುವಾಗ ತಮ್ಮ ತಂದೆಯ ಬಗೆಗೂ ಹಿರಿಯ ನಟರ ಬಗೆಗೂ ಆಗಾಗ್ಗೆ ಮಾತಿನ ನಡುವೆ ಪ್ರಸ್ತಾಪಿಸುತ್ತಲೇ ಇದ್ದರು. ಇದು ನನಗೆ ಬೆರಗನ್ನು ತರುತ್ತಿತ್ತು. ತಂದ ಕಾಫಿ ಸವಿದು ಅವರಿಗೆ ನಮಸ್ಕಾರ ಹೇಳಿ ಮರಳಿದೆ. ನಾನು ರಾಜ್‌ಕುಮಾರ್ ಜತೆ ಮಾತಾಡಿದ ಆ ದಿನ ಒಂದು ಮಹಾಸುದಿನವೇ.

ಅವರು ನಾಡೋಜ ಪ್ರಶಸ್ತಿ ಪಡೆಯಲು ಹಂಪಿಗೆ ಬಂದರು. ಅವರು ರೈಲಿನಲ್ಲಿ ಬಂದರು. ಬೆಳಿಗ್ಗೆ ನಾನೂ ಕುಲಪತಿ ಡಾ. ಎಂ.ಎಂ. ಕಲ್ಬುರ್ಗಿ ರೈಲ್ವೆ ನಿಲ್ದಾಣದಲ್ಲಿ ಕಾಯುತ್ತಿದ್ದೆವು. ಹೊಸಪೇಟೆ ರೈಲ್ವೆ ನಿಲ್ದಾಣದ ಬಳಿ ಜನಸಾಗರವೇ ನೆರೆದಿತ್ತು. ಹಂಪಿ ಎಕ್ಸ್‌ಪ್ರೆಸ್ ಬಂದಿತು. ಜನರ ಜೈಕಾರ ಮುಗಿಲು ಮುಟ್ಟಿತು. ನಾನೂ ಕುಲಪತಿ ಕಲ್ಬುರ್ಗಿ ಬಹುಪ್ರಯಾಸ ಪಟ್ಟು ಅವರಿದ್ದ ಬೋಗಿಯ ಒಳಗೆ ಪೊಲೀಸರ ನೆರವಿನಿಂದ ಹೋದೆವು. ಬೋಗಿಯಿಂದ ಇಳಿದರು. ಅವರ ಮೈಗಾವಲಿನ ಸಹಚರ 'ಚೆನ್ನ' ಅವರ ನೆರವಿಗೆ ನಿಂತಿದ್ದರು. ಜನರ ನೂಕಾಟ, ಹೆಚ್ಚುತ್ತಲೇ ಇತ್ತು. ಕಲ್ಬುರ್ಗಿ ಹೂ ಹಾರ ಹಾಕಿ ಶುಭ ಕೋರಿದರು. ನಾನೂ ಕಾಣಿಸಿಕೊಂಡೆ ರಾಜ್‌ಕುಮಾರ್ ಮುಗ್ಧ ಮುಗುಳ್ನಗೆ ಬೀರಿ ಕೈ ಹಿಡಿದು ಕೈಮುಟ್ಟಿದರು. ನೂಕಾಟ, ಹೆಚ್ಚು ತ್ತಲೇ ಇತ್ತು. ನಾನೂ ನಮ್ಮ ಕುಲಪತಿ ಹೇಗೊ ಆ ಜನಸಾಗರದಿಂದ ನುಸುಳಿ ಕೊಂಡು ಹೊರಬಂದೆವು. ಅವರು ಉಳಿದು ಕೊಳ್ಳಲು ಮುನಿರಾಬಾದ್ ಅತಿಥಿಗೃಹವನ್ನು ವ್ಯವಸ್ಥೆ ಮಾಡಲಾಗಿತ್ತು. ನಾನು ಬೆಳಗ್ಗೆ 11ರ ಸುಮಾರಿಗೆ ಹೋದೆ. ಅಲ್ಲಿ ಕೆಲವು ಅಗತ್ಯ ಸೌಕರ್ಯಗಳನ್ನು ವ್ಯವಸ್ಥೆಗೊಳಿಸಿದೆ. ರಾಜ್ ಕುಮಾರ್ ಉಳಿದಿರುವ ಕಡೆ ಪೊಲೀಸ್ ಸೆಕ್ಯೂರಿಟಿ ಕೊಡಲಾಗಿತ್ತು. ಅವರು ಇರುವ ಜಾಗಕ್ಕೆ ತಕ್ಷಣವೇ ಬರಲು ಯಾರಿಗೂ ಸಾಧ್ಯವಾಗುತ್ತಿರಲಿಲ್ಲ. 'ನಾಡೋಜ'ದ ಬಗೆಗೆ ಮಾತು ಬಂತು. 'ನಾಡೋಜ ಎಂದರೆ ಪಂಪ ಅಲ್ಲವೆ?' ಹೌದು ಎಂದೆ. 'ಅದರ ಅರ್ಥ ಏನು?' ಎಂದರು. 'ನಾಡಿಗೆ ಗುರು' ಎಂದೆ. ಅವರು ಕೈಮುಗಿದು ತಲೆ ಎತ್ತಿ ಆಕಾಶ ದಿಟ್ಟಿಸಿದರು. ಇಂಥ ದೊಡ್ಡ ಪ್ರಶಸ್ತಿ ಪಡೆಯುತಿರುವ ಭಾವ ಅವರ ಮನಸ್ಸಿನಲ್ಲಿ ಮೂಡುತ್ತಿತ್ತು ಎಂದೇ ತೋರುತ್ತದೆ!

ರಾಜ್‌ಕುಮಾರ್ ಬಂದು ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ ಪಡೆದರು. ಅದೊಂದು ಚರಿತ್ರಾರ್ಹ ದಿನ. ಅವರು ಪ್ರಶಸ್ತಿ ಪಡೆಯುವ ಮೊದಲು ಅವರ ಬಗೆಗೆ ನಾನೇ ಟಿಪ್ಪಣಿಸಿದ್ದ ಮಾತುಗಳನ್ನು ಆಡಿದೆ. ಕೆಲವು ಸಾಲುಗಳನ್ನೂ ಓದುವಾಗ ನಾನು ಸಹಜವಾಗಿ ಭಾವುಕನಾದೆ! ಜನ ಆ ಸಾಲುಗಳಿಗೆ ಹೃದಯಾರೆ ಸ್ಪಂದಿಸುತ್ತಿದ್ದರು. ರಾಜ್‌ಕುಮಾರ್ ಒಬ್ಬ ಯೋಗಿಯಂತೆ ಸಹಜವಾಗಿ ಕುಳಿತಿದ್ದರು. ರಾಜ್ಯಪಾಲರಿಂದ ನಾಡೋಜ ಪದವಿ ಪಡೆಯುವಾಗ ಜನರಿಂದ ಪಡೆದು - ಜನರಿಗೇ ಇದು ಅರ್ಪಿತ ವಾಗುತ್ತಿದೆ ಎಂಬ ಉದಾತ್ತ ಭಾವದ ಕೃತಿ ಅವರ ಮನಸ್ಸಿನಲ್ಲಿ ಮನೆ ಮಾಡುತ್ತಿತ್ತು. ವಿಶ್ವವಿದ್ಯಾಲಯದ ಭವ್ಯವಿಸ್ತಾರದ ಜಾಗದಲ್ಲಿ ಇಪ್ಪತ್ತು ಸಾವಿರಕ್ಕಿಂತ ಹೆಚ್ಚಾದ ಜನ ಸಾಗರವೇ ನೆರೆದು ಈ ದೃಶ್ಯವನ್ನು ಕಣ್ತುಂಬಿ ಕೊಳ್ಳುತ್ತಿತ್ತು. ಎಲ್ಲಿ ನೋಡಿದರೂ ಜನವೇ. ಎತ್ತ ತಿರುಗಿದರೂ ಜನಸಾಗರವೇ. ವಿಶ್ವವಿದ್ಯಾಲಯದ 'ಹಳ್ಳಿಕೆರೆ'ಯ ಹಾದಿ ಕಂದು ಆದರೆ, ಅದರ ತುಂಬೆಲ್ಲ ಜನರೇ ನೆರೆದು ತುಂಬಿದ್ದರು.

ರಾಜ್‌ಕುಮಾರ್ convocation ಕ್ರಮದಂತೆ ಸ್ವೀಕರಿಸಿ, ಕುಳಿತರು. ಜನ ರಾಜ್‌ಕುಮಾರ್ ಹಾಡ ಬೇಕೆಂದರು. ಆಗ ಜನ ಸಿಟ್ಟಿಗೆದ್ದರು. ಇದು ಅನಿವಾರ್ಯ ಆಗಿತ್ತು. ಆಗ ಸಣ್ಣ ಪ್ರಮಾಣದ ಕಹಿ ಘಟನೆ ನಡೆಯಿತು. ರಾಜ್‌ಕುಮಾರ್ ಹಾಡುವುದು ಕಾರ್ಯಕ್ರಮದಲ್ಲಿ ಇರಲಿಲ್ಲ. ಇದೊಂದು ವಿಶ್ವವಿದ್ಯಾಲಯದ ಕ್ಲುಪ್ತಕ್ರಮ. ಒಂದು ಶಾಸ್ತ್ರವಿಧಿ. ಇದೊಂದು ವಿಶಿಷ್ಟವಾದ ನುಡಿಹಬ್ಬ.


ಅಂದು ರಾತ್ರಿ ನಾನೂ ನನ್ನ ಗೆಳೆಯರೊಬ್ಬರು ಅವರಿದ್ದ ಅತಿಥಿಗೃಹಕ್ಕೆ ಹೊರಟೆವು. ಆಗ ರಾತ್ರಿ 11 ಗಂಟೆ ಆಗಿತ್ತು. ರಾಜ್‌ಕುಮಾರ್ ಊಟ ಮಾಡಿ ಕುಳಿತಿದ್ದರು. ನಾವು ಹೋಗಿ ಮಾತಾಡಿಸಿದೆವು. ಅವರು ನಮ್ಮ ಕೈಹಿಡಿದು ಅಪ್ಪಿದರು, ನಮಸ್ಕರಿಸಿದೆವು. 'ಎಷ್ಟೊಂದು ದೊಡ್ಡ ಪ್ರಶಸ್ತಿ ನೀಡಿದಿರಿ', ಇದು ಕನ್ನಡದ ಋಣ ಎಂದು ಭಾವುಕರಾದರು. ಆಗ ನಾನು 'voice culture' ಬಗೆಗೆ ಒಂದಿಷ್ಟು ಮಾತಾಡಿದೆ. ಈಚೆಗೆ ಚಲನಚಿತ್ರದಲ್ಲಿ 'ವಾಯ್ಸ್ ಕಲ್ಚರ್' ಕಣ್ಮರೆ ಆಗುತ್ತಿರುವ ಬಗೆಗೆ ವಿಷಾದಿಸಿದರು. ಇದು ರಂಗಭೂಮಿಯ ಕೊಡುಗೆ ಎಂಬುದನ್ನು ಅವರು ಮರೆಯದೆ ಹೇಳಿದರು. ಆಗ ನಾನು ನಟನೆಯಲ್ಲಿ ಪ್ರಥಮ ಸ್ಥಾನ ಆಂಗಿಕವಾದರೆ, ಇದನ್ನು ಅನುಸರಿಸಿ ವಾಚಿಕ ಬರುತ್ತದೆಂದೂ ಇವೆರಡಕ್ಕೆ ಪೂರಕವಾಗಿ 'ಆಹಾರ್ಯ'ವೂ ಸೇರಿಕೊಳ್ಳುತ್ತದೆಂದೂ ಶ್ಲೋಕ ಸಹಿತ ಹೇಳಿದೆ. ಅವರು ನಾನು ಹೇಳಿದ ಶ್ಲೋಕವನ್ನು ಎರಡು-ಮೂರು

ಬಾರಿ ಹೇಳಿಸಿ ಒಂದೊಂದು ಪದವನ್ನೂ ಗ್ರಹಿಸಿಕೊಳ್ಳುತ್ತ ವಿಸ್ಮಿತರಾದರು. ಸುಮಾರು ಅರ್ಧ ಗಂಟೆ ಕಾಲ ಮಾತಾಡಿದೆವು.

ಅವರು 'ನೀವು ನಮ್ಮ ಮನೆಗೆ ಬರಬೇಕು' ಎಂದು ಕೈಹಿಡಿದು ಹೇಳಿ ನಮಸ್ಕರಿಸಿದರು. ನಾವು ಹಿಂದಿರುಗಿದೆವು. ನಾವು ಹಿಂದಿರುಗುವ ಮೊದಲು ಅವರಿಗೆ 15,000/- ರೂಗಳ ಗೌರವ ಸಂಭಾವನೆ ನೀಡಲು ಹೋದೆ. 'ಅವೆಲ್ಲ ಪಾರ್ವತಿಗೆ ಸೇರಿದ್ದು. ಆಕೆಯ ಜತೆ ಮಾತಾಡಿಕೊಳ್ಳಿ. ಆ ಸುದ್ದಿ ನನಗೆ ಬೇಡ' ಎಂದರು. ಮೊತ್ತವನ್ನು ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್ ಪಡೆದುಕೊಂಡರು. ಪತ್ರಕ್ಕೆ ರಾಜ್‌ಕುಮಾರ್ ಅವರಿಂದ ಸಹಿ ಮಾಡಿಸಿಕೊಂಡೆ. ತಾಂತ್ರಿಕವಿಧಿ ಮುಗಿಯಿತು. ಬೆಳಿಗ್ಗೆ ಕಾರಿನಲ್ಲಿ ಬೆಂಗಳೂರಿಗೆ ಹೊರಡುವ ಸೂಚನೆ ನೀಡಿದರು. ಅದಕ್ಕೆ ವ್ಯವಸ್ಥೆಗೊಳಿಸಲಾಗು ವುದೆಂದು ಅವರಿಗೆ ಹೇಳಿದೆ.

♦♦♦♦♦





ನಿಜದ ಸಂಸ್ಕೃತಿಯ ಉಸಿರು

– ಪ್ರೊ. ಕೆ.ಇ. ರಾಧಾಕೃಷ್ಣ

'ಮುತ್ತುರಾಜ್, ರಾಜಕುಮಾರ್' - ಹೆಸರಿನಲ್ಲೇ ಏನೋ ಒಂದು ವಿಶಿಷ್ಟ ಆಕರ್ಷಣೆ. 'ಹೆಸರಿನಲ್ಲೇನಿದೆ?' ಅಂತ ಕೇಳಿದ್ದು ಖ್ಯಾತ ನಾಟಕಕಾರ ಶೇಕ್ಸ್‌ಪಿಯರ್. ಅಂತ ಎಲ್ಲ ಹೆಸರಿಗರಿಗೆ ಸವಾಲು ಹಾಕಿದ್ದ ಈ ಮಹಾನುಭಾವ. ಆದರೆ ಹೆಸರೇ ಒಂದು ವಿಶಿಷ್ಟ ವ್ಯಕ್ತಿತ್ವವನ್ನು ಮೇಲೆತ್ತಿ ತೋರಿಸುವುದರಲ್ಲಿ ಪೂರಕವಾಗುತ್ತದೆ ಅನ್ನುವುದು ನಮಗೆಲ್ಲಾ ಗೊತ್ತಿರುವ ವಿಚಾರ. ಆದರೆ ಕೆಲವು ಹೆಸರುಗಳಿಗೆ ಅದೇನೋ ಮಿಂಚಿನ ಶಕ್ತಿ. ಮೇಲೆದ್ದು ವ್ಯಕ್ತಿತ್ವವನ್ನು ತೋರಿಸುವ ಶಕ್ತಿ. ಈ ಶಕ್ತಿಗೆ ಬರೇ ಪದಪುಂಜದಲ್ಲಿ ಸಿಕ್ಕಿಕೊಳ್ಳುವ ವಾಚಿಕತೆಗಿಂತ, ಓರ್ವ ವ್ಯಕ್ತಿಯ ವ್ಯಕ್ತಿತ್ವವೂ ಸಂಮಿಲನಗೊಂಡಾಗ ಆ ಹೆಸರು ಜನಜನಿತವಾಗುವುದರ ಜತೆಗೆ, ಚಾರಿತ್ರಿಕವೂ ಆಗಬಲ್ಲದು. ಅಂತಹ ಒಂದು ಹೆಸರು ಮುತ್ತುರಾಜ್ ರಾಜಕುಮಾರ್ ಅವರದ್ದು.

ದುರ್ದಿನಗಳವು. ಕನ್ನಡ ನಾಡು ತಲ್ಲಣಗೊಂಡಿದ್ದ ದಿನಗಳು. ನಮ್ಮ ಭೋಗ ಸಂಸ್ಕೃತಿಯ ಪರಾಕಾಷ್ಠತೆ, ಮಾನವೀಯ ಮೌಲ್ಯಗಳ ಅದಃಪತನ, ಸರ್ಕಾರೀ ಆಡಳಿತ ವ್ಯವಸ್ಥೆಯ ವೈಫಲ್ಯ, ಸಮಾಜವನ್ನು ಕಿತ್ತು ಕೊಳೆಸುತ್ತಿರುವ ಭ್ರಷ್ಟಾಚಾರಗಳೆಲ್ಲ ಒಟ್ಟು

ಸೇರಿ, 'ವೀರಪ್ಪ ರಾಕ್ಷಸನ' ಕೈಯಿಂದ ನಮ್ಮ ಸುಜನ ಸಜ್ಜನ ಸಂಸ್ಕೃತಿಯ ತಾಜಾರೂಪ ರಾಜಕುಮಾರರನ್ನು ಅಪಹರಿಸಿ, ಕಾಡಿನಲ್ಲಿ ಕೂಡಿಹಾಕಿದ್ದ ಕಾಲ. ಕನ್ನಡದ ಮನೆಯಲ್ಲಿ ಆದ ಈ ದುರಂತದಲ್ಲಿ ಅನೇಕ ಮಂದಿ ತಲ್ಲಣಗೊಂಡಿದ್ದು ಈ ತಲ್ಲಣಕಾಲದಲ್ಲಿ ಅನೇಕ ಸಹೃದಯಿಗಳು, ಇನ್ನೂ ಅನೇಕ ಪ್ರಚಾರಪ್ರಿಯ ರಾಜಕಾರಣ ಇತ್ಯಾದಿ ಮುಖಗಳು. 'ರಾಜಣ್ಣ ಪಾರ್ವತಮ್ಮ'ನವರ ಮನೆಮುಂದೆ ಟಿವಿ ಕ್ಯಾಮರಾಗಳಿಗೆ ಮುಖಗಳನ್ನು ಒಡ್ಡುತ್ತಿದ್ದ ಕಾಲ. ಒಳಗಡೆ ರಾಜಕುಮಾರ್ ಮನೆತನವನ್ನು ನೋವು ಸಂಕಟ ಹಿಂಡುತ್ತಿದ್ದ ಕಾಲ.

ಈ ಸಂದರ್ಭ ಕರ್ನಾಟಕ ಮತ್ತು ತಮಿಳುನಾಡುಗಳ ಬಾಂಧವ್ಯವನ್ನು ಕೆಡಿಸುವುದರ ಜತೆಗೆ ಒಂದು ಅಂತರ್ಯುದ್ಧವನ್ನೇ ಸೃಷ್ಟಿ ಮಾಡಬಹುದಿತ್ತು. 'ಕನ್ನಡದ ಮಣಿಯನ್ನು ಓರ್ವ ತಮಿಳ ಅಪಹರಿಸಿದ' ಅನ್ನುವ ಸರಳೀಕರಣದ ಸಿದ್ಧಾಂತ ಬೆಂಕಿ ಹಚ್ಚಿಬಿಡಬಹುದಿತ್ತು. ಆಗ ರಾಜಕುಮಾರವರ ಇಡೀ ಮನೆ ನಡೆದುಕೊಂಡ ರೀತಿ ಸಂತ ಪರಂಪರೆಯ ನಡವಳಿಕೆಗೆ ಸಮಾನವಾದದ್ದು. ಋಷಿ ನಡವಳಿಕೆಗಳಿಗೆ ಸದೃಷವಾದದ್ದು. ಪಾರ್ವತಮ್ಮ, ಶಿವರಾಜ್, ರಾಘವೇಂದ್ರ ಮತ್ತು ಪುನೀತರು ತೋರಿಸಿದ ಯಮ, ನಿಯಮ, ಸಂಯಮಗಳು, ಅನೇಕ ಅಮಾಯಕ ಜೀವಗಳನ್ನು ಉಳಿಸಿದ್ದವು. ತಮ್ಮನ್ನು ಹಿಂಡಿ ಹಿಪ್ಪೆ ಮಾಡಿ ಕೊರಗಿಸಬಲ್ಲ ಸಂಕಟವನ್ನು ತಾವೇ ನುಂಗಿದ ನಂಜುಂಡ ಸಂಯಮ ತೋರಿಸಿದ ಪಾರ್ವತಮ್ಮನವರ ನಡವಳಿಕೆಯಿಂದ ಬಹು ದೊಡ್ಡ ದುರಂತ ತಪ್ಪಿತು. ಈ ಮನೆಯ ಜನ ತಮ್ಮ ಕನ್ನಡದವರ ಮನೆಯನ್ನು ಹಿಂಸೆಯಿಂದ ಉಳಿಸಿದ್ದು ರಾಜಕುಮಾರ್ ತಮ್ಮ ಜೀವಿತದುದ್ದಕ್ಕೂ ನಡೆಸಿಕೊಂಡ ಸಂಸ್ಕಾರದ ಫಲ. ಇಂತಹ ಸಂದರ್ಭದಲ್ಲಿ ರಾಜಕುಮಾರ್ ಮನೆಮುಂದೆ ಜನಜಂಗುಳಿಯ ಒತ್ತಡ ಕಮ್ಮಿಯಾದ ದಿನಗಳಲ್ಲಿ ಪಾರ್ವತಮ್ಮನವರನ್ನು ಭೇಟಿ ಮಾಡಿದ್ದೆ. ಬೆಳಿಗ್ಗೆ ಹತ್ತು ಗಂಟೆಯಿಂದ ಮಧ್ಯಾಹ್ನ ಮೂರು ಗಂಟೆಯವರೆಗೆ ಮಾತಾಡಿದ್ದು ಅನ್ನುವುದಕ್ಕಿಂತ ಪಾರ್ವತಮ್ಮ ತಮ್ಮ ಅಂತರಂಗದ ಅನೇಕ ವಿಷಯಗಳನ್ನು ನನ್ನಲ್ಲಿ ಹೇಳಿದ್ದುಂಟು. ಸಿನಿಮಾ ಜಗತ್ತಿನ ನಿಜ ಪ್ರಪಂಚದ ಅರಿವು ನನಗಾದದ್ದು ಆಗ. ರಮ್ಯ ಚಿತ್ರ ಪ್ರಪಂಚದ ಒಳಗಡೆ ನಡೆಯುವ ಶೋಷಣೆಯ ಚಿತ್ರ ಕಣ್ಣಮುಂದೆ.

ರಾಜಕುಮಾರ್ ಬಹುಶಃ ಭಾರತೀಯ ಚಿತ್ರ ಪ್ರಪಂಚದಲ್ಲಿ ಅತ್ಯಂತ ಶೋಷಣೆಗೆ ಒಳಗಾದ ಮೇರುನಟ. ಲೋಕವ್ಯವಹಾರದಲ್ಲಿ ಮುಗ್ಧರಾಗಿದ್ದ ರಾಜಕುಮಾರ್ ಅವರನ್ನು ಆರಂಭದ ದಿನಗಳಲ್ಲಿ ಮಾತ್ರವಲ್ಲ, ನಟನೆಯ ಮೇರು ಪರ್ವತದ

ಶಿಖರದಲ್ಲಿದ್ದಾಗಲೂ ಚಲನ ಚಿತ್ರೋದ್ಯಮ ದುರುಪಯೋಗ ಪಡಿಸಿಕೊಂಡದ್ದು ಅನೇಕರಿಗೆ ಗೊತ್ತಿರಲಾರದು. ಭಾರತೀಯ ಚಲನಚಿತ್ರ ಪ್ರಪಂಚದಲ್ಲಿ 'ಭೀಮಶಕ್ತಿ'ಯ ನಟನೊಬ್ಬ ಎಂದೂ 'ಸಂಪತ್ತಿಗೆ ಸವಾಲು' ಹಾಕದ ಕಾರಣ, ಸಾಂಸ್ಕೃತಿಕ ಪ್ರಪಂಚದಲ್ಲಿ ಬರೇ ಭಕ್ತ ಕುಂಬಾರನಾಗಿ, ಬೇಡರ ಕಣ್ಣಪ್ಪನಾಗಿ, ಶ್ರೀ ರಾಘವೇಂದ್ರ, ತುಕಾರಾಮುನಾಗೇ ಉಳಿದುಬಿಟ್ಟದ್ದು ಇತಿಹಾಸ. ಇಂತಹ ಸಂದರ್ಭದಲ್ಲಿ ಅನಿವಾರ್ಯವಾಗಿ ಪಾರ್ವತಮ್ಮನವರು ರಾಜಕುಮಾರರ ರಕ್ಷಕರಾಗಿ ಮೂಡಬೇಕಾಯಿತು. ರಾಜಕುಮಾರ್ ಮೇರುನಟನಾಗಿ, ಭಾರತೀಯ ಸಂಸ್ಕೃತಿಯ ಮುಖವಾಗಿ ಹೊರಹೊಮ್ಮಬೇಕಾದರೆ, ಅದನ್ನು ಪೋಷಿಸಿ ಬೆಳೆಸಿದವರು ನಮ್ಮ ಪಾರ್ವತಮ್ಮ. ನಿಜವಾದ ಅಂತರಂಗದಲ್ಲಿ ಅನೇಕ ನೋವುಗಳನ್ನುಂಡು ಸಮಾಜದ ಆರೋಗ್ಯವನ್ನು ಕಾಪಾಡಲು ಶ್ರಮಿಸಿದ ಕನ್ನಡದಮ್ಮ.

ರಾಜಕುಮಾರ್ ವಾಪಸ್ಸು ಬಂದರು. ಮತ್ತೊಮ್ಮೆ ಅವರ ಮನೆ ಹೊಸಲು ತುಳಿದೆ. ಅಂದೂ ಜನಜಾತ್ರೆ. ಅದರ ಮಧ್ಯದಲ್ಲೂ ನನ್ನನ್ನು ಗುರುತಿಸಿದ ಪಾರ್ವತಮ್ಮ, ಪಕ್ಕಕ್ಕೆ ಸೆಳೆದು ಕೊಂಡು ರಾಜಕುಮಾರ್ ಅವರಿಗೆ 'ನೀವು ಕಾಡಿನಲ್ಲಿದ್ದಾಗ, ಮನೆಯಲ್ಲಿ ಹೆಚ್ಚು ಜನರಿಲ್ಲದಾಗ, ಪ್ರೊಫೆಸರ್ ಆಗಾಗ ಬರುತ್ತಿದ್ದರು. ನಮ್ಮ ಮಕ್ಕಳ ಮೇಸ್ಟ್ರು' ಅನ್ನುತ್ತಾರೆ. ರಾಜಕುಮಾರ್ ನನ್ನ ಕೈಹಿಡಿಕೊಂಡು 'ದಯವಟ್ಟು ಆರಾಮವಾಗಿ ಬನ್ನಿ, ಒಂದು ಸಲ ಊಟಕ್ಕೇ ಬರಬೇಕು' ಅಂತ ಹೇಳುತ್ತಾರೆ. ಇದು ಅವರ ನವನೀತ ಸಂಸ್ಕೃತಿಯನ್ನು ತೋರಿಸಿತು. ಇದೇ ಜೀವಿತ ಕಾಲದಲ್ಲಿ ವಿದ್ಯಾರ್ಥಿಗಳನ್ನು ಸಂಸ್ಕೃತಿ ಮುಖಿಗಳನ್ನಾಗಿ ಮಾಡಲು ಶ್ರಮಿಸಿದ ನನಗೆ ಅಂದು ನಿಜವಾದ ಸಂಸ್ಕೃತಿಯ ಸಾಂಗತ್ಯ, ರಾಜಕುಮಾರರ ಮನೆಯಲ್ಲಿ ಗೋಚರವಾದವು. ಅವರು ಮಾತುಗಳು ಬರೇ ಶುಷ್ಕ ಮಾತುಗಳಾಗಿರಲಿಲ್ಲ. ಸದ್ದುಗದ್ದಲ ಮುಗಿದ ಬಳಿಕ ನನಗೆ ಮತ್ತೊಮ್ಮೆ ಈ ದಂಪತಿಗಳ ಸಹಸಾಂಗತ್ಯ ಸಿಕ್ಕಿದ್ದು ಮತ್ತೊಂದು ಅಮೂಲ್ಯ ಕ್ಷಣ.

ರಾಜಕುಮಾರ್ ಅಳಿಯ, ಪಾರ್ವತಮ್ಮನವರ ತಮ್ಮ ಗೋವಿಂದರಾಜು ನನ್ನ ಗೆಳೆಯ ಮಾತ್ರವಲ್ಲ, ಅವರ ಮಕ್ಕಳು ನನ್ನ ವಿದ್ಯಾರ್ಥಿಗಳು. ಆ ಸಂದರ್ಭ ರಾಜಕುಮಾರ್ ಬಿಡುಗಡೆಯಾಗಿ ಕೇವಲ ಒಂದು ವಾರವಾಗಿತ್ತು. ನನ್ನ ಮಗಳು ಅಶ್ವಿನಿಯ ಮತ್ತು ವಿವೇಕನ ವಿವಾಹದ ಒಪ್ಪಂದ ನಮ್ಮ ಮನೆಯಲ್ಲಿ. ನನ್ನ ಆಪ್ತವಲಯದ ಗೆಳೆಯರಾದ ಸಾ.ರಾ. ಗೋವಿಂದು ಮತ್ತು ಕೆ.ಸಿ.ಎನ್. ಚಂದ್ರಶೇಖರ್‌ರವರನ್ನು ದೂರವಾಣಿಯ ಮೂಲಕ ಆಮಂತ್ರಿಸಿದ್ದೆ. ಕನ್ನಡನಾಡು ಬೇಯಬಹುದಾಗಿದ್ದ ಸಂದರ್ಭದಲ್ಲಿ ಈ

ಈರ್ವರು ಗೆಳೆಯರು ಚಲನಚಿತ್ರ ವಾಣಿಜ್ಯ ಮಂಡಳಿಯ ಸಾರಥಿಗಳಾಗಿದ್ದರು. ಅವರೀರ್ವರೂ ತೋರಿಸಿದ ಮುತ್ಸದ್ದಿ ನಾಯಕತ್ವವೂ ನಮ್ಮ ಸಾಮಾಜಿಕ ಚರಿತ್ರೆಯಲ್ಲಿ ಉಲ್ಲೇಖಾರ್ಹವಾದದ್ದೇ. ಅವರೀರ್ವರೂ ಮನೆಗೆ ಬಂದರು. ಜತೆಗೆ ನಮ್ಮ ಗೋವಿಂದ ರಾಜು. ಏನೇನೂ ಆಗದ ಹಾಗೆ, 'ನಮ್ಮ ಮೇಸ್ಟರ ಮನೆಗೆ ಬರಲು ಆಮಂತ್ರಣ ಬೇಕೆ? ಅಕ್ಕ ಬೇರೆ ಅಣತಿ ಮಾಡಿದ್ದಾರೆ' ಅಂದವರು ಗೋವಿಂದರಾಜು. ರಾಜಕುಮಾರ್ ಸ್ಪರ್ಶ ವಲಯದಲ್ಲಿ ಬಂದ ಎಲ್ಲರಲ್ಲೂ ಇದ್ದ ಸಂಸ್ಕೃತಿ ನಮಗೆಲ್ಲ ಮಾದರಿಯಾಗಬೇಕು ಅಂದುಕೊಂಡೆ.


ರಾಜಕುಮಾರ್ ಮನೆತನ ನನಗೆ ಸನಿಹವಾಗಲು ಮತ್ತೋರ್ವರು ಕಾರಣ. ಪಾರ್ವತಮ್ಮನವರ ತಮ್ಮ ಚಿನ್ನೇಗೌಡರು. 'ರಾಘವೇಂದ್ರ' ಚಿನ್ನೇಗೌಡರು. ಅವರ ಮಗಳು ಮತ್ತು ಮಿಂಚುತ್ತಿರುವ ತಾರೆಗಳು ವಿಜಯ ರಾಘವೇಂದ್ರ ಮತ್ತು ಮುರಳಿ ಎಲ್ಲರೂ ನನ್ನ ಪ್ರೀತಿಯ ವಿದ್ಯಾರ್ಥಿಗಳು. ಹೀಗೆ ಇಡೀ ಕುಟುಂಬದ ಜತೆ ಆಪ್ತತೆ.

ನಾನು ಈ ಲೇಖನದಲ್ಲಿ ರಾಜಕುಮಾರ್ ಚಲನಚಿತ್ರ ಪ್ರಪಂಚದ ಮೂಲಕ ಭಾರತೀಯ ಸಂಸ್ಕೃತಿಗೆ ಕೊಟ್ಟ ಅಪಾರ ಮೌಲಿಕ ಕೊಡುಗೆಯ ಬಗ್ಗೆ ವಿಶ್ಲೇಷಿಸಿಲ್ಲ. ಅದಕ್ಕೆ ಒಂದು ಉದ್ಗ್ರಂಥದ ರಚನೆಯೇ ಆಗಬೇಕೇನೋ. ಆದರೆ ಮನೆ ಮಂದಿ ಒಟ್ಟಿಗೆ ಕೂತು ನೋಡಿ, ನಿಜದ ಅರ್ಥದಲ್ಲಿ 'ಶಿಕ್ಷಿತ' ರಾಗಬಲ್ಲ ಚಿತ್ರಗಳ ರೂವಾರಿ ರಾಜಕುಮಾರ್. ಅವರ ಭಕ್ತಿಪ್ರಧಾನ ಚಿತ್ರಗಳನ್ನು ನೋಡಿ ಯಾರು ಗದ್ಗತಿತರಾಗಿಲ್ಲ? ಪಾತ್ರಗಳ ಜತೆ 'ಪರಕಾಯ' ಅಲ್ಲ 'ಪರಮನ' ಪ್ರವೇಶ ಮಾಡಬಲ್ಲ ಶಕ್ತಿ ರಾಜಕುಮಾರ್ ಬಿಟ್ಟರೆ ಬೇರೆ ಯಾರಿಗುಂಟು? ಸಾಮಾಜಿಕ ಚಿತ್ರಗಳನ್ನು ಕಸ್ತೂರಿನಿವಾಸವನ್ನಾಗಿ ಪರಿವರ್ತಿಸಿದವರು ರಾಜಕುಮಾರ್. ಸಿ.ಐ.ಡಿ. ಯಾಗಲೀ, ತಾನೊಬ್ಬ ಕಳ್ಳನಾಗಲೀ, ಪತ್ತೇದಾರನಾಗಲೀ, ಖಳನಾಯಕನಾಗಲೀ ತನ್ನ ಪಾತ್ರಗಳ ಮೂಲಕ 'ಸಾಮಾಜಿಕ ಶಿಕ್ಷಣ' ವನ್ನು ಮಾಡಿದವರು ರಾಜಕುಮಾರ್. ಅನೇಕ ಶಿಕ್ಷಕರು ಮಾಡದ ಮಾಡಲಾಗದ ಶಿಕ್ಷಣದ ಸೇವೆಯನ್ನು ಮಾಡಿದವರು ರಾಜಕುಮಾರ್. ಅಕ್ಷರಗಳ ಚೌಕಟ್ಟಿನೊಳಗೆ, 'ಓದುವಿಕೆ' ಯ ಜೈಲಿನೊಳಗೆ ಬಂಧಿತವಾಗಿ, ಚರ್ಚೆ, ವಾದ, ವಿವಾದ, ಸಂವಾದ, ಜಿಜ್ಞಾಸೆಗಳಲ್ಲಿ ತಗಲುಹಾಕಿಕೊಂಡು, ಶುಷ್ಕ ನಿಷ್ಪ್ರಯೋಜಕವಾಗುವ ಪಾಂಡಿತ್ಯ ಪರಂಪರೆಯ ಶಿಕ್ಷಣಕ್ಕಿಂತ, ಮುಕ್ತವಾಗಿ, ಕಾಂತಾಸಮ್ಮಿತೆಯಂತೆ, ಮನಸ್ಸು ಪರಿವರ್ತನೆ ಮಾಡಬಲ್ಲ ಸಂಸ್ಕೃತಿಯ ಬೀಜಗಳನ್ನು ತನ್ನ ಪ್ರೇಕ್ಷಕರ ಹೃದಯದಲ್ಲಿ ಬಿತ್ತಿ ಬೆಳೆಸಲು

ಶ್ರಮಿಸಿದವರು ರಾಜಕುಮಾರ್. ಇಂತಹ ನಿಃಸ್ವಾರ್ಥಿ, ಸಮಾಜಮುಖಿ, ಸಂಸ್ಕೃತಿ ಪುರುಷ ಭಾರತದಲ್ಲಿ ಮಾತ್ರವಲ್ಲ, ಜಗತ್ತಿನ 'ಸಾಂಸ್ಕೃತಿಕ' ಇತಿಹಾಸದಲ್ಲೂ ಅಪರೂಪ. ಬಹುಶಃ ಇದ್ದರೆ ನಮ್ಮ ನೆರೆನಾಡಿನ ತಮಿಳು ಚಿತ್ರ ಪ್ರಪಂಚದ ಸಾರ್ವಭೌಮ 'ಶಿವಾಜಿ ಗಣೇಶನ್'. ಅಂದ ಹಾಗೆ ಶಿವಾಜಿ ಒಂದೊಮ್ಮೆ ರಾಜಕೀಯ ಪಕ್ಷಕ್ಕೆ ಸೇರಿಕೊಂಡದ್ದುಂಟು. ರಾಜಕುಮಾರ್ ಸೇರಿದ್ದು ಉಳಿದದ್ದು ಉಸಿರಾಡಿದ್ದು ಒಂದೇ ಸಂಸ್ಕೃತಿ ಪಕ್ಷದಲ್ಲಿ ಮಾತ್ರ, ಅಲ್ಲವೇ?

◆◆◆◆◆







ಸೌಜನ್ಯಮೂರ್ತಿ – ಮುತ್ತುರಾಜ್

– ಮಂ.ಅ. ವೆಂಕಟೇಶ್

ಡಾ॥ ರಾಜ್‌ಕುಮಾರ್ ನಡೆ-ನುಡಿ ತುಂಬ ಸರಳ. ಸರಳತೆಗೆ ಇನ್ನೊಂದು ಹೆಸರೇ ಡಾ. ರಾಜ್. ಈ ಸರಳ ಸಜ್ಜನಿಕೆ ಅವರ ಉಡಿಗೆತೊಡುಗೆಗಳಲ್ಲಿಯೂ ವ್ಯಕ್ತವಾಗುತ್ತಿತ್ತು. ನಮ್ಮ ಸಂಸ್ಕೃತಿಯನ್ನು ಬಿಂಬಿಸುವ ಪಂಚೆ ಮತ್ತು ಶರ್ಟ್ ಧರಿಸಿ ಶ್ವೇತ ವಸ್ತ್ರಧಾರಿಯಾಗಿ ಕಾಣಿಸುತ್ತಿದ್ದರು. ''ಜೀವನದಲ್ಲಿ ಸತ್ಸಂಗ ಮುಖ್ಯ; ಎಲ್ಲದರಲ್ಲಿ ದೇವರನ್ನು ಕಾಣುವ ಪ್ರಯತ್ನ ಮಾಡಬೇಕು'' ಎಂದು ಹೇಳುತ್ತಿದ್ದರು.

ರಾಜ್ ಸದ್ಗುಣಗಳ ಪಟ್ಟಿ ಮಾಡುವುದು ಸುಲಭವಲ್ಲ. ಅವರ ವಿನಯ, ಸರಳತೆ, ಸಂಕೋಚ, ತಮ್ಮ ವೃತ್ತಿಯೊಂದೇ ತಮ್ಮ ಪಾಲಿನ ದೈವವೆಂದು ಬಗೆವ ನಿಷ್ಠೆ, ವೈವಿಧ್ಯಮಯ ಪಾತ್ರಗಳಲ್ಲಿ ಅವರು ಸಾಧಿಸಿದ್ದ ತಲ್ಲೀನತೆ, ಇವೇ ಮೊದಲಾದವು ಕೆಲವು ಮಾತ್ರ. ಕೇವಲ ನಾಲ್ಕನೆ ತರಗತಿ ಕಲಿತ ಮುತ್ತುರಾಜ್ ಎಂಬ ಹಳ್ಳಿ ಹೈದ ತನಗಿತ್ತ ಪಾತ್ರಗಳಲ್ಲೇ ಐಕ್ಯಗೊಂಡಿದ್ದು, ತನ್ನನ್ನೇ ಪಣಕ್ಕಿಟ್ಟು ಸೆಣಸಿ, ಕನ್ನಡ ಹೃದಯ ಸಿಂಹಾಸನವನ್ನೇರಿದ್ದು ಸುಲಭ ಸಾಧನೆಯಲ್ಲ.

ಅಂದಿನ ರಂಗಭೂಮಿಯ ವಿಖ್ಯಾತ ನಟ ಸಿಂಗಾನಲ್ಲೂರು ಪುಟ್ಟಸ್ವಾಮಯ್ಯನವರ ಮಗನಾಗಿ, ತಂದೆಯವರ ಹೆಜ್ಜೆಯನ್ನೇ ಅನುಸರಿಸಿದ 'ಮುತ್ತುರಾಜ್', ಬಾಲ್ಯದಲ್ಲೆ 1942ರಲ್ಲಿ ಭಕ್ತಪ್ರಹ್ಲಾದ ನಾಟಕದಲ್ಲಿ ಮೊದಲ ಬಾರಿಗೆ ರಂಗದ ಮೇಲೆ ಪ್ರವೇಶ ಪಡೆದರು. ಹೆಚ್.ಎಲ್.ಎನ್. ಸಿಂಹರವರ ಮೂಲಕ 1954ರಲ್ಲಿ 'ಬೇಡರ ಕಣ್ಣಪ್ಪ' ಚಿತ್ರದಿಂದ, ಚಲನಚಿತ್ರ ರಂಗಕ್ಕೆ ಪಾದಾರ್ಪಣೆ ಮಾಡಿದ ಮುತ್ತುರಾಜ್; ರಾಜಕುಮಾರ್ ಆಗಿ ಇನ್ನೂರು ಚಿತ್ರಗಳಲ್ಲಿ ಚಿತ್ರಲೋಕದ ಸಹಸ್ರಮುಖಗಳನ್ನು ಪರಿಚಯಿಸಿದ ವ್ಯಕ್ತಿ. ಬಾಲ್ಯದಿಂದಲೂ ''ಕನ್ನಡ ಏಳಿಗೆಯೇ ನನ್ನ ಜೀವನ, ಸರ್ವಸ್ವ'' ಎಂದು ಹೇಳುತ್ತಾ ನಾಡು ನುಡಿಗೆ ಏನಾದರೂ ಮಾಡಬೇಕೆಂಬ ಹಂಬಲವಿದ್ದವರು. 1961ರಲ್ಲಿ ಪ್ರವಾಹ ಪರಿಹಾರ ನಿಧಿಗಾಗಿ ಪಾದಯಾತ್ರೆಯ ಮೂಲಕ ನಿಧಿ ಸಂಗ್ರಹಣೆ, 1980ರಲ್ಲಿ ಗೋಕಾಕ್ ವರದಿ ಚಳುವಳಿಯ, ಕನ್ನಡ-ನಾಡು-ನುಡಿಯ ಏಳಿಗೆಗಾಗಿ ನಡೆಸಿದ ಐತಿಹಾಸಿಕ ಯಾತ್ರೆ, ರೀಮೇಕ್ ವಿರುದ್ಧ ನಡೆದ ಪ್ರದರ್ಶನ, ಇವೆಲ್ಲಕ್ಕಿಂತಲೂ ಮಿಗಿಲಾಗಿ, ತಾವು ಕನ್ನಡ ಚಿತ್ರರಂಗವನ್ನು ಬಿಟ್ಟು ಅನ್ಯ ಚಿತ್ರಗಳಲ್ಲಿ ನಟಿಸುವುದಿಲ್ಲವೆಂಬ ಧೃಡ ನಿರ್ಧಾರ ಮೊದಲಾದವು ಅವರ ಹಂಬಲ ಪೂರೈಸಲು ಕಾರಣವಾದವು.

''ಇಂದು ನಾನೇನಾದರೂ ಆಗಿದ್ದರೆ, ನನಗೇನಾದರೂ ಗೌರವ ಬಂದಿದ್ದರೆ ಅದೆಲ್ಲ ದೇವರ ಕೃಪೆ, ನಮ್ಮ ತಂದೆಯವರ ಅನುಗ್ರಹ'' ಎಂದು ಹೇಳುತ್ತಾ ಕಗ್ಗತ್ತಲೆಯಲ್ಲಿದ್ದ ಕನ್ನಡ ಚಿತ್ರರಂಗದಲ್ಲಿ ಕಲಾಜ್ಯೋತಿಯ ಕಿರಣಗಳನ್ನು ಅರಳಿಸಿದ ಶಕ್ತಿ ರಾಜ್: ನಟನೆಯಲ್ಲಿ ಉತ್ತುಂಗ ಮುಟ್ಟಿದ ಮಹಾನ್ ಸಾಧಕರು. ಒಂದು ಪಾತ್ರವಲ್ಲ, ಒಂದು ರಸವಲ್ಲ, ಒಂದು ಶೈಲಿಯಲ್ಲ, ಐತಿಹಾಸಿಕ, ಸಾಮಾಜಿಕ, ಪೌರಾಣಿಕ, ಭಕ್ತಿಪ್ರಧಾನ, ಸಂಗೀತ ಪ್ರಧಾನ, ಹಾಸ್ಯ ಪ್ರಧಾನ ಪಾತ್ರಗಳಾಗಲೀ ಅಥವಾ ಖಳನಾಯಕ, ರಾಕ್ಷಸ, ಮಣ್ಣಿನ ಮಗ, ಬಾಂಡ್, ಹೀರೋ ಹೀಗೆ ಯಾವುದೇ ಪಾತ್ರದಲ್ಲಿಯೂ ಸೈ ಎನಿಸಿಕೊಂಡವರು.

1975ರಲ್ಲಿ ರಾಜ್‌ರವರ 150 ಚಿತ್ರಗಳ ಪೂರೈಕೆಯ ಉತ್ಸವ ನಡೆದಾಗ, ಅ.ನ.ಕೃ. ಹೇಳಿದ್ದು - ''ರಾಜಕುಮಾರ್‌ರವರು ಇಷ್ಟೊಂದು ಚಿತ್ರಗಳಲ್ಲಿ ವಿವಿಧ ರೀತಿಯ ಪಾತ್ರಗಳಲ್ಲಿ ಅಭಿನಯಿಸಿ ಚಿತ್ರಪ್ರೇಮಿಗಳ ಅಪಾರ ಪ್ರೀತಿ ವಿಶ್ವಾಸಗಳನ್ನು ಗಳಿಸಿದ್ದಾರೆ. ಮುಂದೆಯೂ ಅವರು ಅಭಿನಯಿಸುವ ಒಂದೊಂದು ಚಿತ್ರವೂ ಅಮೂಲ್ಯ ರತ್ನದಂತಿರಬೇಕು. ಪ್ರೇಕ್ಷಕನಿಗೆ ಆನಂದ ನೀಡುವಂತಿರಬೇಕು, ಒಂದೊಂದು ಕಥಾ ವಸ್ತುವನ್ನೂ ಒರೆ ಹಚ್ಚಿ ಆರಿಸಿಕೊಳ್ಳಬೇಕು''. ಅದೇ ರೀತಿ ನಡೆದುಕೊಂಡ

ರಾಜ್‌ಕುಮಾರ್ ರವರ ಚಿತ್ರಗಳಿಂದ ಸಾಮಾಜಿಕ ಪರಿವರ್ತನೆ ಆದ ನಿದರ್ಶನಗಳಿವೆ. ಪದವೀಧರರೊಬ್ಬರು 'ಬಂಗಾರದ ಮನುಷ್ಯ' ನೋಡಿದ ನಂತರ ಹಳ್ಳಿಗೆ ಹಿಂತಿರುಗಿ ಗ್ರಾಮೀಣ ಬದುಕಿಗೆ ತಮ್ಮನ್ನು ಮುಡುಪಾಗಿಸಿಕೊಂಡರು. 'ಜೀವನ ಚೈತ್ರ' ದಿಂದ ಮದ್ಯವ್ಯಸನಿಗಳಾಗಿದ್ದವರು ಅದನ್ನು ತ್ಯಜಿಸಿ ಮದ್ಯ ಪಾನವಿರೋಧಿಗಳಾಗಿದ್ದಾರೆ. 'ಆಕಸ್ಮಿಕ' ಚಿತ್ರದ 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು...' ಎಂಬ ಗೀತೆಯಿಂದ ದೇಶದಲ್ಲೆಡೆ ಕನ್ನಡಾಭಿಮಾನ ಬೆಳೆಯಲು ಕಾರಣವಾಯಿತು.

''ಸಾಧನೆಗೆ ಕೊನೆ ಇಲ್ಲ, ನಾನು ಸಾಧಿಸಬೇಕಾಗಿರುವುದು ಇನ್ನೂ ಬೇಕಾದಷ್ಟಿದೆ, ಬಂಗಾರಕ್ಕಾಗಿ ಸಾವಿರಾರು ಅಡಿ ಭೂಮಿ ಅಗೆಯುವಂತೆ ಇನ್ನೂ ಸಾಧಿಸಬೇಕಿದೆ. ಆದರೆ ಮುಂದೆ ಏನು ನಡೆಯುತ್ತದೆಯೋ ಗೊತ್ತಿಲ್ಲ'' ಎಂದು ಹೇಳುತ್ತಾ ನಾನು ಜೀವನದಲ್ಲಿ ಏನನ್ನೂ ನಿರೀಕ್ಷಿಸಿದವನಲ್ಲ ಎನ್ನುತ್ತಿದ್ದ ಈ ಮೇರು ಸಾಧಕ ಸೌಜನ್ಯ ಮೂರ್ತಿಗೆ ಸಂದಪ್ರಶಸ್ತಿ ಹೆಗ್ಗಳಿಕೆ ಅಪಾರ.

'ಶಬ್ದವೇದಿ' ಚಿತ್ರದಲ್ಲಿ 'ಜನರಿಂದ ನಾನು ಮೇಲೆ ಬಂದೆ ...' ಎಂದು ಹಾಡಿರುವ ರಾಜ್ ತಮ್ಮ ಪ್ರೇಕ್ಷಕರನ್ನು 'ಅಭಿಮಾನಿ ದೇವರುಗಳೆಂದೇ' ಸಂಭೋದಿಸಿ ತಮ್ಮ ಸೌಜನ್ಯವನ್ನು ಮೆರೆದಿದ್ದಾರೆ. 'ಕರ್ನಾಟಕ ನನ್ನನ್ನು ಧನ್ಯನನ್ನಾಗಿ ಮಾಡಿದೆ' ಎಂದು ಅನೇಕ ಸಲ ಸ್ಮರಿಸಿದ್ದಾರೆ.

ಯೋಗ ಮತ್ತು ಪ್ರಾಣಾಯಾಮಗಳಿಂದ ಉತ್ತಮ ದೇಹದಾರ್ಢ್ಯವನ್ನು ಕಾಪಾಡಿಕೊಂಡು 70ರ ಹರೆಯದಲ್ಲೂ 20ರ ಯುವಕನಂತೆ ಸುಂದರ ತೇಜೋಮಯ ವಾದ ಶರೀರವನ್ನು ಪಡೆದಿದ್ದವರು. ಉತ್ತಮ ಶರೀರದಂತೆಯೇ, ಉತ್ತಮ ಶಾರೀರವನ್ನೂ ಹೊಂದಿದ್ದ ಮುತ್ತುರಾಜ್ ನಾಟಕರಂಗದಿಂದಲೂ ಹಾಡುತ್ತಾ ಮುಂದೆ ರಾಜಕುಮಾರ್ ಆದ ನಂತರ, ಚಿತ್ರರಂಗದಲ್ಲಿಯೂ ಮಹೋನ್ನತ ಗಾಯಕರೆನಿಸಿಕೊಂಡರು. 'ಭಕ್ತಿಯೇ ನನ್ನ ಅಂತಃಶಕ್ತಿಯ ಸೆಲೆ ಆನಂದದ ನೆಲೆ' ಎನ್ನುತ್ತಾ ಅನೇಕ ದಾಸವರೇಣ್ಯರ, ಕವಿಗಳ ಭಕ್ತಿರಸ ಪ್ರಧಾನ ಗೀತೆಗಳಿಗೆ ತಮ್ಮ ಕಂಠಸಿರಿಯನ್ನಿತ್ತು ಧ್ವನಿಸುರಳಿಗಳ ಮೂಲಕ ಕನ್ನಡನಾಡಿನ ಮನೆ -ಮನಗಳನ್ನು ತುಂಬಿದ್ದಾರೆ.

ಈ ಲೇಖನದ ಲೇಖಕನಾದ ನಾನು ಓರ್ವ ರಾಜಕುಮಾರ್ ಅಭಿಮಾನಿ. ನಾನು ನೋಡಿದ ಕನ್ನಡ ಚಿತ್ರಗಳಲ್ಲಿ ಬಹುಪಾಲು ರಾಜಕುಮಾರ್ ಚಿತ್ರಗಳೇ ಆಗಿವೆ. ಅವರ ಮೊದಲಿನ ಶತ ಚಿತ್ರಗಳಲ್ಲಿ ಸುಮಾರು 90 ಚಿತ್ರಗಳನ್ನು ನೋಡಿದ್ದೇನು. 31.5.1968 ರಲ್ಲಿ 100ನೇ ಚಿತ್ರ 'ಭಾಗ್ಯದ ಬಾಗಿಲು' ಬಿಡುಗಡೆಯಾದ ಸಂದರ್ಭದಲ್ಲಿ, ಮೈಸೂರು

ಬ್ಯಾಂಕ್ ಚೌಕದಿಂದ, ಕಂಠೀರವ ಕ್ರೀಡಾಂಗಣಕ್ಕೆ ನಡೆದ ರಾಜ್ ಮೆರವಣಿಗೆಯಲ್ಲಿ ಭಾಗವಹಿಸಿ, ಕಂಠೀರವ ಕ್ರೀಡಾಂಗಣದಲ್ಲಿ ಅವರಿಗೆ ನಾನು ಮಾಲಾರ್ಪಣೆ ಮಾಡಿದ್ದು ಅದರ ಛಾಯಾ ಚಿತ್ರ ಈಗಲೂ ನನ್ನ ಬಳಿ ಇದೆ.

ನಾನು ಬಿ.ಇ.ಎಲ್ ಕನ್ನಡ ಸಾಹಿತ್ಯ ಕೂಟದ ಸದಸ್ಯನಾಗಿ, ಮೇ 1970ರಲ್ಲಿ ಕನ್ನಡ ಚಿತ್ರರಂಗದಲ್ಲಿ ಶತಚಿತ್ರಗಳಲ್ಲಿ ಅಭಿನಯಿಸಿ ಅಪಾರ ಯಶಸ್ಸು ಗಳಿಸಿರುವ 'ನಟಸಾರ್ವಭೌಮ - ರಾಜಕುಮಾರ್', 'ನಟರತ್ನ - ಅಶ್ವಥ್, 'ಹಾಸ್ಯ ಚಕ್ರವರ್ತಿ - ನರಸಿಂಹರಾಜು', 'ಹಾಸ್ಯ ಬ್ರಹ್ಮ - ಬಾಲಕೃಷ್ಣ'ರವರನ್ನು ಒಂದೇ ವೇದಿಕೆಯ ಮೇಲೆ ಒಂದೇ ಕಡೆ ಸೇರಿಸಿ ಸನ್ಮಾನ ಪತ್ರ ಮತ್ತು ಗಂಧದ ಕರಂಡಗಳನ್ನು ನೀಡಿ ಸನ್ಮಾನಿಸಿದ ಸಂದರ್ಭ ನನಗೆ 'ನಭೂತೋ ನ ಭವಿಷ್ಯತಿ' ಎನಿಸಿದೆ. ಅಂದಿನ ದಿನಗಳಲ್ಲಿ ಈ ರೀತಿಯಾಗಿ ಒಂದೇ ವೇದಿಕೆಯಲ್ಲಿ ನಡೆದ ಸಮಾರಂಭ ಮತ್ತೆಂದೂ ನಡೆದಿಲ್ಲ.

70ರ ದಶಕದಲ್ಲಿ ಕನ್ನಡ ಚಿತ್ರಪ್ರೇಮಿಗಳ ಸಂಘದ ಸದಸ್ಯನಾಗಿ, ಕಾರ್ಯಕರ್ತನಾಗಿ ಅದರ ವಾರ್ಷಿಕ ಪ್ರಶಸ್ತಿ ಸಮಾರಂಭಗಳಲ್ಲಿ ರಾಜಕುಮಾರ್‌ರವರನ್ನು ಭೇಟಿಯಾಗಿ ಮಾತನಾಡುವ ಅವಕಾಶ ನನಗೂ, ನನ್ನ ಶ್ರೀಮತಿಯವರಿಗೂ ಒದಗಿ ಬಂದಿತ್ತು. ರಾಜಕುಮಾರ್‌ರವರು ಗೌರವಯುತವಾಗಿ, ಸೌಜನ್ಯದಿಂದ ಮಾತನಾಡಿದ್ದನ್ನು ಈಗಲೂ ಸ್ಮರಿಸುತ್ತಿದ್ದೇವೆ.

ನಾನು ಬಿ.ಇ.ಎಲ್. ಸಂಸ್ಥೆಯ ಕನ್ನಡ ಸಾಹಿತ್ಯ ಕೂಟದ ಉಪಾಧ್ಯಕ್ಷನಾಗಿ ಅದರ ರಜತ ಮಹೋತ್ಸವವನ್ನು 15.12.1982ರಲ್ಲಿ ವಿಶೇಷವಾಗಿ ನಿರ್ಮಿಸಿದ್ದ ವೇದಿಕೆಯಲ್ಲಿ ವರ್ಣರಂಜಿತ ಹತ್ತು ದಿನಗಳ ಸಮಾರಂಭವನ್ನು ಡಾ|| ರಾಜ್‌ಕುಮಾರ್ ಜ್ಯೋತಿ ಬೆಳಗಿಸಿ ಉದ್ಘಾಟಿಸಿದರೆ ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್‌ರವರು ಅಂತರ ವಿಭಾಗ ನಾಟಕೋತ್ಸವಕ್ಕೆ ಚಾಲನೆ ನೀಡಿದರು. ಆ ಸಂದರ್ಭದಲ್ಲಿ ಇವರೀರ್ವರನ್ನು ಸನ್ಮಾನಿಸಿದ ಹಿರಿಮೆ ನನ್ನದಾಗಿದೆ.

ಜೂನ್ 2004ರಲ್ಲಿ ಕನ್ನಡ ಜನ ಶಕ್ತಿ ಸಂಘಟನೆ ನಯನ ಸಭಾಂಗಣದಲ್ಲಿ ಏರ್ಪಡಿಸಿದ್ದ 'ಡಾ| ರಾಜ್ ಚಿತ್ರರಂಗದ ಅರ್ಧ ಶತಮಾನ - ಒಂದು ವೈಚಾರಿಕ ನೋಟ' ಕಾರ್ಯಕ್ರಮದಲ್ಲಿ ನಾನು ಸಂಗ್ರಹಿಸಿ ಪ್ರದರ್ಶಿಸಿದ ರಾಜ್ ಅಭಿನಯಿಸಿದ ಚಿತ್ರಗಳ ಮತ್ತು ಅಪೂರ್ವ ಘಟನೆಗಳ ಸ್ಥಿರ ಚಿತ್ರ ಪ್ರದರ್ಶನ ಇಂದಿಗೂ ಒಂದು ದಾಖಲೆಯಾಗಿದೆ.

♦♦♦♦♦



ನವರಸಗಳ ನಿಧಿ – ನಮ್ಮ ರಾಜಣ್ಣ

– ಎಸ್. ಶಿವರಾಂ

ನಟಸಾರ್ವಭೌಮನೆಂದು ಘೋಷಿಸಿ, ರಸಿಕರ ರಾಜರೆಂದು ಕರೆಯಿರಿ, ಗಾನ ಗಂಧರ್ವನೆಂದು ಹಾಡಿ, ಪದ್ಮಭೂಷಣರೆಂದು ಘೋಷಿಸಿ, ದಾದಾಸಾಹೇಬ ಫಾಲ್ಕೆ- ಉದ್ಯಮದ ಉತ್ತುಂಗದ ಪ್ರಶಸ್ತಿಯನ್ನು ನೀಡಿ, ಡಾಕ್ಟರೇಟ್ ನೀಡಿ ಹೆಮ್ಮೆ ಪಡಿ, ಕರ್ನಾಟಕ ರತ್ನವೆಂದು ಪರಿಗಣಿಸಿ ಕಲಾಕೌಸ್ತುಭವೆಂದು ಆರಾಧಿಸಿ ಆದರೆ ಅಣ್ಣ ರಾಜಣ್ಣ ರಾಜಕುಮಾರರಾದ ಮುತ್ತುರಾಜ ಎಲ್ಲವನ್ನೂ ಮೀರಿದ ವ್ಯಕ್ತಿ ವ್ಯಕ್ತಿಮಾತ್ರವಲ್ಲ ಒಂದು ವಿಶೇಷ ಶಕ್ತಿ ಕಲಾವಿದರ ಕಲಾವಿದ, ವೃತ್ತಿಯಲ್ಲಿ ಎಲ್ಲವನ್ನೂ, ಎಲ್ಲರನ್ನೂ ಮೀರಿ ದಿಗಂತದೆತ್ತರಕ್ಕೆ ಏರಿದ ಒಬ್ಬ ಮಹಾನ್ ಮೇರುನಟ, ಕಲಾಜಗತ್ತಿನಲ್ಲಿ ಒದೊಂದು ಭಾಗದಲ್ಲಿ ಒಬ್ಬಿಬ್ಬರು ಖ್ಯಾತಿ ಪಡೆದಿದ್ದಾರೆ. ಇವರು ಎಲ್ಲವನ್ನು ಮೈಗೂಡಿಸಿಕೊಂಡು

ಒಬ್ಬ ಪರಿಪೂರ್ಣ ಕಲಾವಿದನಾಗಿ ಕನ್ನಡದ ಕಣ್ಮಣಿಯಾಗಿ ಅದ್ವಿತೀಯ ಪ್ರಖ್ಯಾತಿಯನ್ನು ಪಡೆದ ಪ್ರಬುದ್ಧಮಾನನಾದ ಪ್ರಸಿದ್ಧ ಅಗ್ರಗಣ್ಯ, ಅಪರೂಪವಾದ ಅಮೂಲ್ಯವಾದ ಮಾಣಿಕ್ಯವಾಗಿ ಮೆರೆದರು.

ಡಾ॥ ರಾಜ್ ಇದುವರೆಗೂ, ಈಗ ಇಲ್ಲ ಅಂತಲ್ಲ ಎಲ್ಲರ ಮನಸ್ಸಿನಲ್ಲಿಯು ನಿರಂತರವಾಗಿ ಆಸಿನರಾಗಿರುವ ಸರ್ವಕಾಲಿಕ ಸಾರ್ವಭೌಮರೆಂದರೆ ಅದು ರಾಜ್ ಅವರು. ಅವರ ಆತ್ಮ ಮುತ್ತು ರಾಜ ಎನ್ನುವ ಶಾರೀರಾ ಆಕರದಲ್ಲಿ 24-04-1929 ರಂದ ಕಂಡು ಅದು 1954 ರಿಂದ ರಾಜಕುಮಾರಾಗಿ, ಎಲ್ಲರಿಗೂ ಹಲವಾರು ವಿಭಿನ್ನ ವಿವಿಧ ವಿಶಿಷ್ಟ ಪೌರಾಣಿಕ, ಐತಿಹಾಸಿಕ, ಜಾನಪದ, ಸಾಮಾಜಿಕ ಪಾತ್ರಗಳಲ್ಲಿ ಪರಕಾಯ ಪ್ರವೇಶ ಮಾಡಿ ಕರ್ನಾಟಕ ಜನಸ್ತೋಮದ ಅನಭಿಷಕ್ತ ದೊರೆಯಾಗಿ, ಆರಾಧ್ಯ ದೈವವಾಗಿ ನಿರಂತರ, ಸುಭದ್ರ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಡಾ॥ ರಾಜ್‌ರು ಒಂದು ವಿಶ್ವವಿದ್ಯಾಲಯದಂತೆ, ಏನು ಕಲಿಯದೆ ಹಲವಾರು ಕಲಿತವರಿಗೆ ಉದಾಹರಣೆಯಾಗಿ ನಿಂತವರು.

ಡಾ॥ ರಾಜ್ ತನ್ನ 78ನೇ ಹುಟ್ಟಿದ ಹಬ್ಬ ಆಚರಿಸಲು ಕೇವಲ 12 ದಿನ ಉಳಿದಿತ್ತು. ಈ 77 ವರ್ಷಗಳಲ್ಲಿ ಅವರನ್ನ ಬಲ್ಲವರು, ಹತ್ತಿರದಿಂದ ಕಂಡವರು, ಸಾಮಿಪ್ಯವನ್ನು ಬೆಳೆಸಿಕೊಂಡವರು, ಆಪ್ತರಾದವರು, ಆತ್ಮೀಯರಾದವರು, ಆಪ್ತಬಾಂಧವರು ಸಮ್ಮೂಹ ಅಪಾರ, ಎಲ್ಲರೂ ರಾಜಕುಮಾರರು ನಮಗೆ ಹತ್ತಿರ, ರಾಜಕುಮಾರ್ ಅವರಿಗೆ ನಾವು ಹತ್ತಿರ ಎಂದು ಭಾವಿಸುವುದು ಸಹಜ ಆದರೆ ಆ ಹತ್ತಿರದ ಅಂತರದಲ್ಲಿ ಸಾಕಷ್ಟು ವ್ಯತ್ಯಾಸ ಇದೆ ಅದು ಇಂಚುಗಳಿರಬಹುದು, ಅಡಿಗಳಿರಬಹುದು, ಮೈಲಿಗಳಿರಬಹುದು- ಆದರೆ ರಾಜಕುಮಾರ ಅವರು ಮಾತ್ರ ಒಬ್ಬ ವ್ಯಕ್ತಿ ಮನಸ್ಸಿನ ಮೇಲೆ ಪರಿಣಾಮ ಬೀರುವ ಹಾಗೆ ಪರಿಚಯ ಆಗಿಬಿಟ್ಟರೆ ಎಲ್ಲರಿಗೂ ಒಂದೇ ಪ್ರಮಾಣವಾಗಿ ಹತ್ತಿರ ಆಗಿಬಿಡುತ್ತಾರೆ. ಅದಕ್ಕೆ ಅವರು ಅಷ್ಟು ಎತ್ತರ.

ನನ್ನ ಅವರ ಪರಿಚಯದ ಇತಿಹಾಸದ ಪುಟ ತೆಗೆದರೆ ಅದು ಸುಮಾರು 1956ಕ್ಕೆ ಹೋಗುತ್ತೆ ಅಲ್ಲಿಂದ 12-04-2006 ವರೆಗೂ ಸೇರಿದ್ದು ಕಲೆತದ್ದು ಬೆರೆತದ್ದು ಅದೆಲ್ಲ ಎಂಥಹ ಅನುಭವ, ಎಂಥ ಅನುಭವಾಮೃತ, ಎಂಥಹ ಸೊಗಸಾದ ಸನ್ನಿವೇಶ, ಮಧುರ ವಾದ ಮಾತುಗಳು, ಉಪಯುಕ್ತವಾದ ಚರ್ಚೆ.

ನಾನು ಒಬ್ಬ ಸಹಕಲಾವಿದನಾಗಿ, ನಿರ್ದೇಶಕನಾಗಿ, ನಿರ್ಮಾಪಕನಾಗಿ, ರಂಗಕರ್ಮಿ ಯಾಗಿ, ಸಂಘಟಕನಾಗಿ, ದೈವಭಕ್ತನಾಗಿ ಅವರಲ್ಲಿ ಕಂಡ ಆತ್ಮೀಯತೆ, ವಿಶ್ವಾಸ, ಕುತೂಹಲ, ಸಲಹೆ, ಮಾರ್ಗದರ್ಶನ, ಉತ್ತೇಜನ, ಉತ್ಸಾಹ, ಪ್ರೋತ್ಸಾಹ, ವಿಚಾರ ವಿನಿಮಯ, ಎಲ್ಲವು ಸಹ ಗಣನೀಯವಾದ ಗಮನಾರ್ಹವಾದ ಘಳಿಗೆಗಳು. ಮೇಲಿಂದ ಮೇಲೆ ಮೆಲುಕು ಹಾಕುತ್ತಾ ಇದ್ದರೆ, ಇಂದಿಗೂ, ಅವರು ಎಲ್ಲೆ ಇದ್ದರು ಮುಂದೆ ಬಂದು ನಿಂತು ಹೇಳಿದ ಹಾಗೆ ಭಾಸವಾಗುತ್ತೆ.

ಅವರು ಒಬ್ಬ ಪರಿಪೂರ್ಣವಾದ ಕಲಾವಿದ, ಯಾವುದೇ ಪಾತ್ರವಾಗಲಿ, ಪಾತ್ರವೇ ಅವರು ಆಗುವ ಹಾಗೆ ತನ್ಮಯತೆ, ತಲ್ಲೀನತೆ ಅವರಲ್ಲಿ ಅಡಕವಾಗಿರುವ ಅಪ್ರತಿಮವಾದ ಮೌಲ್ಯ. ಅವರು ಸರಳ ಸಜ್ಜನಿಕೆಯ ಸೌಜನ್ಯದ ಸಾಕಾರಮೂರ್ತಿ. ಹಾಗಾಗಿ ಅವರ ಕೀರ್ತಿ ದಿಗಂತಕ್ಕೆ ಅವರಿಗೇ ಅರಿವಿಲ್ಲದೆ ಏರಿದ್ದು. ವೃತ್ತಿಯಲ್ಲಿ ಅವರಿಗಿದ್ದ ತಾಳ್ಮೆ, ಸಮಯಪ್ರಜ್ಞೆ, ಸಹಜತೆ, ಪ್ರಶಂಸನೀಯ. ಒಬ್ಬ ಕಲಾವಿದನ ಕರ್ತವ್ಯವೇನು, ಆತ ಹೇಗಿದ್ದರೆ, ಒಂದು ಪಾತ್ರಕ್ಕೆ, ಒಂದು ಚಿತ್ರಕ್ಕೆ, ಒಬ್ಬ ನಿರ್ಮಾಪಕನಿಗೆ ಒಬ್ಬ ನಿರ್ದೇಶಕನಿಗೆ ಅನುಕೂಲವಾಗುತ್ತೆ ಆತನ ಕೆಲಸ ಹಗುರವಾಗುತ್ತೆ ಎನ್ನುವ ಅಂಶಗಳು ಬಲ್ಲಂತ ಒಬ್ಬ ನುರಿತ ಕಲಾವಿದ.

ನಿರ್ಮಾಪಕನ ದೃಷ್ಟಿಯಲ್ಲಿ :

ರಾಜಕುಮಾರ್ ಅವರು ನಿರ್ಮಾಪಕರ ಕಷ್ಟನಷ್ಟಗಳನ್ನು ಬಲ್ಲವರು. ವ್ಯವಹಾರಕ್ಕೆ ಅಂಟಿಕೊಳ್ಳದೆ ನಿರ್ಮಾಪಕರ ನೆಂಟನ್ನ ಬೆಳೆಸಿಕೊಂಡವರು. ವ್ಯವಹಾರವನ್ನ ಪ್ರಾರಂಭದಲ್ಲಿ ಅವರ ಸಹೋದರರಾದ ವರದರಾಜ್ ಅವರು ನೋಡಿಕೊಳ್ಳುತ್ತಿದ್ದರು. ನಂತರ ಕೆಲವಾರು ಹಿತೈಷಿಗಳು ಗಮನಿಸುತ್ತಿದ್ದರು, ಕಾಲಕ್ರಮೇಣ ಅಂತ್ಯದವರೆಗೂ ಅವರ ಶ್ರೀಮತಿಯವರಾದ ಪಾರ್ವತಮ್ಮನವರೆ ಅವರಿಗೆ ಎಲ್ಲವೂ ಆಗಿ ನಿಂತವರು. ಕಾರ್ಯೇಶು ದಾಸಿ, ಕರಣೇಶು ಮಂತ್ರಿ, ಭೋಜ್ಯೇಶು ಮಾತಾ, ಶಯನೇಶು ರಂಭ, ರೂಪೇಶು ಲಕ್ಷ್ಮಿ, ಕ್ಷಮಯಾ ಧರೀತ್ರಿ, ಸತ್ಕರ್ಮಯುಕ್ತ ಕುಲಧರ್ಮಪತ್ನಿ ಹಾಗಾಗಿ ರಾಜರದು ಏನಿದ್ದರು ತಮ್ಮ ಅಭಿನಯವೃತ್ತಿ ಕಲಾವಿದನಾಗಿ ಕಾಣೋಕೆ, ಉಳಿಯೋಕೆ ಬೇಕಾದ ವ್ಯಾಯಾಮ, ಕಸರತ್ತು ಪರಿಶ್ರಮ, ನಿರ್ಮಾಪಕರು ರಾಜಕುಮಾರಂತ ಸೂಪರ್‌ಸ್ಟಾರ್‌ನ ಒಂದು ಸ್ಟಾರ್ ಹೋಟಲ್‌ನಲ್ಲಿ ಉಳಿಸಿದರೆ, ಏನಾದರೂ ಸಬೂಬು ಹೇಳಿ ರಾತ್ರೋರಾತ್ರಿ ಅಲ್ಲಿಂದ ಪಲಾಯನ ಮಾಡಿ ನಮ್ಮ ಮಾಮೂಲಿ ಹೈಲ್ಯಾಂಡ್ ಹೋಟೆಲ್‌ಗೆ ಬಂದುಬಿಡುತ್ತಿದ್ದರು. ಮದರಾಸಿನಲ್ಲಿ ಚಿತ್ರೀಕರಣ ನಡೆಯುತ್ತಿದ್ದಾಗ, ಸಂಸ್ಥೆಯ ವ್ಯಾನ್‌ನಲ್ಲಿ 4.15 ಗಂಟೆಗೆ ಎಲ್ಲರ ಜೊತೆಯಲ್ಲೆ ಕರೆದುಕೊಂಡು ಹೊರಡೋರು, ಸ್ವಲ್ಪ ಅನುಕೂಲವಾದ ಮೇಲೆ ನಮ್ಮದೆ ಆದ ಅಂಬಾಸಿಡರ್ ವಾಹನದಲ್ಲಿ ಹೋಗೋದು, ಯಾವುದನ್ನು ಗಣನೆಗೆ ತೆಗೆದುಕೊಳ್ಳುತ್ತಿರಲಿಲ್ಲ. ತಾವು ಬಾಲ್ಯದಲ್ಲಿ ಕ್ಷೌರ ಮಾಡಿಸಿಕೊಳ್ಳುತ್ತಿದ್ದ ವ್ಯಕ್ತಿ ಎಂದರೆ ರಾಜುವನ್ನೆ ಚಿತ್ರೀಕರಣ ಎಲ್ಲೆ ಇದ್ದರು ಅಲ್ಲಿಗೆ ಕರೆಸಿಕೊಂಡು ಚಿತ್ರದ ಪಾತ್ರಕ್ಕೆ ಹೇಗೆ ಬೇಕೋ ಹಾಗೆ ಸಿದ್ಧರಾಗುತ್ತಿದ್ದರು. ಹಳ್ಳಿಯಲ್ಲಿ ಚಿತ್ರೀಕರಣ ಎಂದರೆ ಹಳ್ಳಿಯಲ್ಲೇ ಉಳಿದು ಬಿಡುತ್ತಿದ್ದರು. ಸಾಮಾನ್ಯವಾಗಿ ನಿರ್ಮಾಪಕರಿಗೆ ಹೊರಾಂಗಣ ಚಿತ್ರೀಕರಣ ಎಂದರೆ ನಾಯಕ ನಾಯಕಿಯರನ್ನ ಎಲ್ಲಿ

ಉಳಿಸುವುದು ಎಂಬ ಪ್ರಶ್ನೆ ಬರುತ್ತೆ ರಾಜಕುಮಾರ ಅವರು ಎಲ್ಲಿ ಉಳಿಯಲು ಸಿದ್ದರು ಎಂದ ಮೇಲೆ ಇನ್ನು ನಾಯಕಿಯಾಗಲಿ, ಇತರರಾಗಲಿ ಪ್ರಶ್ನೆ ಬರುವುದೇ ಇಲ್ಲ. ಇಂಥಹದೆಲ್ಲ ಮೇಲುನೋಟಕ್ಕೆ ಸಾಧಾರಣ ವಿಷಯಗಾಳದರು ಚಿತ್ರನಿರ್ಮಾಣದಲ್ಲಿ ನಿರ್ಮಾಪಕನಿಗೆ ವಿನಾಕಾರಣ ತಲೆ ತಿನ್ನುವ ಪರಿಸ್ಥಿತಿ. ಇಂತಹ ಪರಿಸ್ಥಿತಿಗಳು ರಾಜಕುಮಾರ ಇರುವ ಚಿತ್ರಗಳಲ್ಲಿ ಬರುತ್ತಲೇ ಇರಲಿಲ್ಲ. ನಿರ್ಮಾಪಕರಿಗೆ ರಾಜಕುಮಾರ ಅವರು ಒಂದು ಚಿತ್ರ ಒಪ್ಪಿಕೊಳ್ಳುವ ರೀತಿ ನಿಜಕ್ಕೂ ವಿಸ್ಮಯ, ಮುಂಗಡ ಹಣ ಇತ್ಯಾದಿಗಳಿಗಿಂತ ಬರಿ ಒಂದು ಮಾತಿನಿಂದ ನಡೆಯುತ್ತಿದ್ದದ್ದು ಒಂದು ಆಶ್ಚರ್ಯ.

ನಿರ್ದೇಶಕರ ದೃಷ್ಟಿಯಲ್ಲಿ :

ರಾಜಕುಮಾರ ಅವರು ಒಬ್ಬ ನಿರ್ದೇಶಕರ ಕಲಾವಿದ. ಒಂದು ಸಲ ಅವರಿಗೆ ಕಥೆ ಏನು, ಅದರಲ್ಲಿ ತಮ್ಮ ಪಾತ್ರವೇನು ಎಬುದು ಮನದಟ್ಟಾಗಿ ಬಿಟ್ಟರೆ, ಲೀಲಾಜಾಲವಾಗಿ ಪಾತ್ರದಲ್ಲಿ ಮಗ್ನರಾಗಿ, ಅದಕ್ಕೆ ಬೇಕಾದ ಪೂರ್ವ ಸಿದ್ಧತೆಗಳನ್ನು ಮಾಡಿಕೊಂಡು ಸದಾ ಸಿದ್ಧರಾಗಿಬಿಡುತ್ತಿದ್ದರು. ಪಾತ್ರಕ್ಕೆ ತಕ್ಕ ಪೋಷಾಕು, ನಡೆನುಡಿ ಅದಕ್ಕೆ ಹೊಂದಿಕೊಳ್ಳುತ್ತಿದ್ದದ್ದು, ತಯಾರಾಗುತ್ತಿದ್ದುದು ಗಮನಾರ್ಹ.

ರಾಜಕುಮಾರ ಅವರ ಯಾವುದೇ ಚಿತ್ರವಾಗಲಿ ಇಡೀ ಕುಟುಂಬ ನಿಸ್ಸಂಕೋಚವಾಗಿ ಕೂತು ನೋಡಿ ಸಂತೋಷಪಡುವ ಹಾಗಿತ್ತು. ಒಂದು ದ್ವಂದ್ವ ಇಲ್ಲ, ಅಶ್ಲೀಲ ಇಲ್ಲ, ಅಭಿನಯದಲ್ಲಿ ನವರಸಗಳು ತುಂಬಿ ತುಳುಕಾಡುತ್ತಿತ್ತು. ಮೊಟ್ಟಮೊದಲಿಗೆ ನಿರ್ದೇಶನ ಮಾಡುತ್ತಿದ್ದವರು ಸಹ ರಾಜಕುಮಾರ ಅಂತಹ ಮೇರು ನಟ ಎನ್ನುವ ಭಯವನ್ನು ಹೋಗಲಾಡಿಸಿ, ತಮಗೆ ನೀಡುವ ಪ್ರೋತ್ಸಾಹವನ್ನು ಕಂಡು ಬೆರಗಾಗುತ್ತಿದ್ದರು. ಕಥೆಯನ್ನು ಆರಿಸಿದ ಮೇಲೆ ಚರ್ಚೆಯಲ್ಲಿ ಸಹ ಭಾಗವಹಿಸುವಾಗ ಎಲ್ಲ ಪಾತ್ರಗಳ ಬೆಳವಣಿಗೆಗೆ ಪುಷ್ಟಿ ನೀಡುವಲ್ಲಿ ಕಥೆಯ ಮುನ್ನಡೆಯಲ್ಲಿ ಅವರು ನೀಡುತ್ತಿದ್ದ ಸಲಹೆಗಳು ಸ್ಮರಣೀಯ.

ಸಹ ಕಲಾವಿದನ ದೃಷ್ಟಿಯಲ್ಲಿ :

ಹಳೆಯ ನುರಿತ ಕಲಾವಿದರಾಗಲಿ, ಹೊಸ ಕಲಾವಿದರಾಗಲಿ ಎಲ್ಲರಲ್ಲೂ ಬೆರೆಯುವ ರೀತಿ ಶ್ಲಾಘನೀಯ. ಸಹಜವಾಗಿಯೆ ಹೊಸ ಕಲಾವಿದರು ತಪ್ಪುಗಳೇನಾದರು ಮಾಡಿದರೆ, ಮಾತಿನಲ್ಲಿ, ಅಭಿನಯದಲ್ಲಿ, ಆಗ ರಾಜಕುಮಾರ ಅವರು 'ನಾನು ಸಹ ಹೀಗೆ ತಪ್ಪು ಮಾಡುತ್ತಿದ್ದೆ, ತಪ್ಪು ಮಾಡ್ತೀನಿ, ಪರವಾಗಿಲ್ಲ ನೀವು ಚೆನ್ನಾಗಿ ಮಾಡ್ತಾ ಇದ್ದೀರಿ' ಅಂತ ಉತ್ತೇಜನ ನೀಡಿ, ನಮ್ಮ ಮಟ್ಟಕ್ಕೆ ಹಾಗೂ ಆ ಸನ್ನಿವೇಶ ಎದುರು

ನೋಡುತ್ತಿದ್ದ ಮಟ್ಟಕ್ಕೆ ತರುತ್ತಿದ್ದರು. ರಾಜಕುಮಾರ ಅವರ ಮತ್ತೊಂದು ಉತ್ತಮವಾದ ಗುಣ ಎಂದರೆ ಯಾರನ್ನೇ ಆಗಲಿ, ಒಬ್ಬ ನಿರ್ಮಾಣದ ಸಹಾಯಕ ಆಗಲಿ, ಹುಡುಗ ಆಗಲಿ ಅವರನ್ನು ಏಕವಚನದಲ್ಲಿ ಸಂಬೋಧಿಸುತ್ತಿರಲಿಲ್ಲ. ಇನ್ನೊಬ್ಬ ಕಲಾವಿದ ಉತ್ತಮವಾದ ಅಭಿನಯ ನೀಡಿದಾಗ ತುಂಬು ಹೃದಯದಿಂದ ಪ್ರಶಂಸೆ ಮಾಡುತ್ತಿದ್ದರು. ಒಬ್ಬ ಉತ್ತಮ ಕಲಾವಿದನಿಗೆ ಬೇಕಾದ ಶರೀರ, ಶಾರೀರ, ಭಾಷೆ, ಧ್ವನಿ ಎಲ್ಲವು ನಾವು ಇವರಲ್ಲಿ ಕಾಣಬಹುದಾಗಿತ್ತು. ಹಾಗಾಗಿಯೇ ಕಲಾವಿದರಿಗೆ ಇವರು ಒಂದು ವಿಧದಲ್ಲಿ ಮಾದರಿ ಹಾಗೂ ಸ್ಫೂರ್ತಿ. ಇನ್ನೊಂದು ಇವರಲ್ಲಿ ವಿಶೇಷ ಎಂದರೆ ಚಿತ್ರೀಕರಣದಲ್ಲಿ ಎಲ್ಲರೂ ಇವರ ಜೊತೆಯಲ್ಲೇ

ಕೆಳಗೆ ಕೂತು ಸಹಭೋಜನ ಮಾಡುವುದು, ತಮ್ಮನ್ನು ಹೇಗೆ ಗಮನಿಸುತ್ತಾರೋ ಹಾಗೆ ಎಲ್ಲರನ್ನೂ ಗಮನಿಸಬೇಕು ಎನ್ನುವ ಹಿರಿಯ ಮನಸ್ಸು.

ಸಂಘದ ದೃಷ್ಟಿಯಲ್ಲಿ :

ಕಲಾವಿದರ ಸಂಘ, ಸ್ಥಾಪನೆಯಲ್ಲಿ ಇವರು ನನ್ನ ಮೇಲಿಟ್ಟಿದ್ದ ವಿಶ್ವಾಸ, ನಂಬಿಕೆ ನನಗೆ ಕಾರ್ಯನಿರ್ವಹಣೆಯಲ್ಲಿ ಏನೇ ಕಷ್ಟಗಳು ಬಂದಾಗಲೂ ಅದನ್ನು ಎದುರಿಸಲು ಸುಲಭವಾಗುತ್ತಿತ್ತು. ಅಂದುಕೊಂಡ ಫಲ ನಮಗೆ ನೀಡಲಿಲ್ಲ. ಅದು ಬೇರೆ ಮಾತು.

ಅದಕ್ಕೆ ಬೇರೆ ಕಾರಣಗಳು. ಉದ್ಯಮಕ್ಕೆ ಸಂಕಷ್ಟಗಳು ಬಂದಾಗಲೆಲ್ಲ ಪರಿಹಾರ ಮಾಡಲು ಮುಂಚೂಣಿಯಲ್ಲಿ ನಿಂತು ಬಗೆಹರಿಸಲು ಸಹಕರಿಸುತ್ತಿದ್ದ ರೀತಿ ನಿಜಕ್ಕೂ ಗಮನಾರ್ಹ.

ಒಬ್ಬ ದೈವ ಭಕ್ತನಾಗಿ :

ದೇವರು ಅನ್ನೋದು ಏನು, ದೇವರು ಇದ್ದಾನೆಯೆ, ಇಲ್ಲವೆ, ಇಂಥಹ ಗೊಂದಲು ಗಳು ನಮ್ಮನ್ನು ಕಾಡುತ್ತಿದ್ದರು ರಾಜಕುಮಾರ ಅವರು ದೈವವನ್ನು ಆರಾಧಿಸುವಾಗ ಅವರ ಶ್ರದ್ಧೆ ಭಕ್ತಿ ಅಪಾರವಾದದ್ದು. ಸುಮಾರು 18-20 ವರ್ಷ ನಾವು ಜೊತೆ ಜೊತೆಯಲ್ಲಿ ಶ್ರೀ ಶಬರಿಮಲೈ ಯಾತ್ರೆಯಲ್ಲಿ ಮಾಲೆ ಧರಿಸಿ 48 ದಿವಸದ ಮಂಡಲ ವ್ರತ ಮಾಡಿ ದೊಡ್ಡಪಾದದಲ್ಲಿ ಸುಮಾರು 40-48 ಕಿ.ಮೀ. ದೂರ ಪಾದಯಾತ್ರೆಯಲ್ಲಿ ಪಯಣಿಸಿ ಶ್ರೀ ಅಯ್ಯಪ್ಪನ ದರ್ಶನವನ್ನು ಮಾಡುತ್ತಿದ್ದೆವು. ಸುಮಾರು 10-12 ವರ್ಷ ಮದರಾಸಿನಿಂದ ಅಯ್ಯಪ್ಪ ಸ್ವಾಮಿಯನ್ನು ಅಸಂಖ್ಯ ಭಕ್ತರಿಗೆ ಪರಿಚಯ ಮಾಡಿಸಿ, ಶಿಸ್ತು ಸಂಯಮಗಳಿಗೆ ಎತ್ತಿದ ಕೈ ಎನ್ನಿಸಿಕೊಂಡಿರುವ ನಮ್ಮ ಗುರುಸ್ವಾಮಿಗಳಾದ

ಶ್ರೀ ಎಂ.ಎನ್. ನಂಬಿಯಾರ್ ಅವರ ಜೊತೆ ಹೊರಡುತ್ತಿದ್ದೆವು. ರಾಜರು ಹೊರಡುತ್ತಿದ್ದಾರೆ ಎಂದಕೂಡಲೇ ಸುಮಾರು ಅವರ ಸಮೀಪವರ್ತಿಗಳು ಸಹ ಬರುತ್ತಿದ್ದರು. (ಖ್ಯಾತ ನಾಯಕ ಕಲಾವಿದರು) 3 ರಿಂದ 4 ಬಸ್ಸುಗಳಲ್ಲಿ ಪ್ರಯಾಣ ಮಾಡುತ್ತಿದ್ದೆವು. ಒಂದು ಬಸ್ಸು ಕರ್ನಾಟಕದಿಂದ ರಾಜಕುಮಾರ ಅವರ ಬಸ್ಸು ಎಂದೇ ಕರೆಯಲ್ಪಡುತ್ತಿತ್ತು. ನಂತರ ರಾಜಕುಮಾರ ಸ್ವಾಮಿಗಳು ಹೆಚ್ಚಿಗೆ ಬೆಂಗಳೂರಿನಲ್ಲಿ ವಾಸಿಸುತ್ತಿದ್ದ ಕಾರಣ ಅವರ ನಿವಾಸದಲ್ಲಿ ಇಲ್ಲ ಅವರ ಎಸ್ಟೇಟ್‌ನಲ್ಲಿ ಎಲ್ಲರೂ ಸೇರಿ ಪೂಜೆ, ಭಜನೆ, ಇರುಮುಡಿಯನ್ನು ಕಟ್ಟಿಕೊಂಡು ಹೋಗುತ್ತಿದ್ದೆವು. ಅವರ ಶ್ರೀಮತಿಯವರು ಸಹ ಬರುತ್ತಿದ್ದರು. ಅವರ ಶ್ರೀಮತಿಯವರ ಜೊತೆ ಕೆಲವು ಮಹಿಳಾ ಸ್ವಾಮಿಗಳು ಬರುತ್ತಿದ್ದರು. ಆ ಅನುಭವಗಳು ನಿಜಕ್ಕೂ ಅವರ್ಣನೀಯ. ಪುನೀತ್ ಚಿಕ್ಕ ಹುಡುಗ. ರಾಜಕುಮಾರ ಸ್ವಾಮಿಗಳು ಪುನೀತ ಸ್ವಾಮಿಯನ್ನು ಹೆಗಲ ಮೇಲೆ ಕೂರಿಸಿಕೊಂಡು ಬೆಟ್ಟ ಹತ್ತಿ ಸನ್ನಿಧಾನ ಸೇರುತ್ತಿದ್ದರು. ಹಿಂತಿರುಗಿ ಬರುವಾಗ 'ಪುಲಿಮೇಡು' ಎನ್ನುವ ದಾರಿಯಲ್ಲಿ ಬರುತ್ತಿದ್ದೆವು.

ಆ ದಾರಿಯಲ್ಲಿ ಹುಲಿಗಳಿವೆ ಎಂದು ಕೇಳಿದ್ದೆವು. ಒಂದು ಸಲ ನಮ್ಮ ದಾರಿಯ ಪಕ್ಕದಲ್ಲಿ ಸರಸರ ಎಂದು ಶಬ್ದವಾಯಿತು. ನಾವು ಶರಣು ಘೋಷಣೆ ಮಾಡುತ್ತಾ ಸ್ವಲ್ಪ ನಿಧಾನಗತಿಯಲ್ಲಿ ನಡೆಯಲು ಪ್ರಾರಂಭಿಸಿದೆವು. ಸ್ವಲ್ಪ ಸಮಯದ ನಂತರ ಯಾವುದೋ ಒಂದು ಪ್ರಾಣಿಯನ್ನು ಬಾಯಲ್ಲಿ ಕಚ್ಚಿಕೊಂಡು ಒಂದು ಹುಲಿ ನಮ್ಮ ಮುಂದೆ ಸಾಗಿದ್ದನ್ನು ನಾವು ಕಣ್ಣಾರೆ ಕಂಡೆವು. ಉದಯಶಂಕರಸ್ವಾಮಿಗಳು ಸಹ ನಮ್ಮ ಸಂಗಡ ನಡೆದು ಬರುತ್ತಿದ್ದರು. ಈ ಅನುಭವಗಳನ್ನು ಮುಂದೆ ರಾಜರು ಹಾಡಿದ ಅಯ್ಯಪ್ಪಸ್ವಾಮಿ ಭಕ್ತಿಗೀತೆಗಳಲ್ಲಿ ಮೂಡಿಬಂದಿದೆ. ಇದೊಂದು ರೋಮಾಂಚನ ಘಟನೆ. ಈ ಭಕ್ತಿಪ್ರಧಾನ ವಾದ ಪುಣ್ಯಯಾತ್ರೆಯಲ್ಲಿ ರಾಜಕುಮಾರ ಅವರ ಸನಿಹ, ಸಾಮೀಪ್ಯ, ಸಾನಿಧ್ಯ ನಿಜಕ್ಕೂ ಸ್ತುತ್ಯಾರ್ಹ. ಆ ಶ್ರದ್ಧೆ ಆ ಭಕ್ತೆ ಆ ಶಿಸ್ತು, ಪರಿಪಾಲನೆ ಎಲ್ಲವು ಆಗಾಗ ಮೆಲಕು ಹಾಕುವಂತಹದು.

ಪೇಚಿಗೆ ಸಿಕ್ಕ ಸಂದರ್ಭ :

ರಾಜಕುಮಾರ ಅವರು ಹತ್ತಿರದವರನ್ನು ಮನೆಯವರನ್ನು ಒಂದೊಂದು ಸಲ ಒಂದು ಪೇಚಿಗೆ ಸಿಕ್ಕಿಸುತ್ತಿದ್ದರು.

ಒಂದು ಸಲ ಮದರಾಸಿನಲ್ಲಿ ರಾಜಕುಮಾರ ಅವರು ಅವರ ನಿವಾಸದಲ್ಲಿ ವಿರಮಿಸಿ ಕೊಳ್ಳುತ್ತಿದ್ದರು. ಅವರನ್ನು ಭೇಟಿಯಾಗಲು ಉತ್ತರ ಕರ್ನಾಟಕದ ಅಭಿಮಾನಿಗಳು ಕೆಲವರು ಬಂದಿದ್ದರು. ನಾನು ಪಾರ್ವತಮ್ಮನವರು ಅಲ್ಲಿ ಕೂತು ಮಾತನಾಡುತ್ತಿದ್ದೆವು. ರಾಜಕುಮಾರ್ ಅವರಿಗೆ ತೊಂದರೆ ಆಗಬಾರದೆಂದು, ಬಂದ ಅಭಿಮಾನಿಗಳಿಗೆ ಅವರು

ಚಿತ್ರೀಕರಣದ ಸಲುವಾಗಿ ಹೊರಗೆ ಹೋಗಿದ್ದಾರೆ, ನಾಳೆ ಬನ್ನಿ ಎಂದು ಹೇಳಿದೆವು. ಅವರು ನಮ್ಮ ಮಾತಿಗೆ ಗಮನ ಕೊಡದೆ, ತುಂಬಾ ದೂರದಿಂದ ಬಂದಿದ್ದೇವೆ. ಕೆಲವು ಕ್ಷಣ ನೋಡಲು ಅವಕಾಶ ಮಾಡಿಕೊಡಿ ಅಂತ ಪುನಃ ಕೇಳಿದರು. ನಾವು ಅವರಿಗೆ ಮತ್ತೆ ಹೇಳಿದೆವು. ಅವರು ಮನೇಲಿ ಇದ್ದರೆ ತಾನೇಪ್ಪ ನೋಡುವುದು, ನಾಳೆ ಬನ್ನಿ ಎಂದು ಮತ್ತೆ ಹೇಳಿದೆವು. ಈ ಮಾತುಗಳು ನಡೆಯುತ್ತಿರುವಾಗಲೇ ರೂಮಿನಲ್ಲಿ ಮಲಗಿದ್ದ ರಾಜ್‌ಕುಮಾರ್ ಅವರು ನೆಟ್ಟಗೆ ಬಂದು ಯಾರು, ಏನಾಗಬೇಕಿತ್ತು ಎಂದು ಅವರ ಕುಶಲ ವಿಚಾರಿಸಲು ಬಂದುಬಿಟ್ಟರು. ನಾವು ಸುಳ್ಳರಾಗಿಬಿಟ್ಟೆವು. ಮತ್ತೊಂದು ಸಂದರ್ಭ ಅವರು ಯಾವುದಾದರೂ ಸಮಾರಂಭಗಳಲ್ಲಿ ಊಟ ಮಾಡುತ್ತಿದ್ದರು. ಅವರು ರುಚಿಯನ್ನು ಸವಿದು ಊಟ ಮಾಡುವ ರೀತಿ ಬಹು ಸೊಗಸು. ಆ ಸಮಯದಲ್ಲಿಯೂ ಅಭಿಮಾನಿಗಳು ಬಂದು ಮಾತಾಡಿಸುವುದು, ಪ್ರಶ್ನಿಸುವುದು, ಫೋಟೋ ತೆಗೆಸಿಕೊಳ್ಳುವುದು ಇದೆಲ್ಲ ಮಾಡುತ್ತಾರೆ. ಅವರು ನೆಮ್ಮದಿಯಾಗಿ ಊಟ ಮಾಡಲಿ ಎಂದು ತೊಂದರೆ ಕೊಡುವವರನ್ನು ಪಕ್ಕಕ್ಕೆ ಸರಿಯಲು ಹೇಳಿದರೆ ತಕ್ಷಣವೆ ರಾಜಕುಮಾರರು ಯಾಕೆ ಅವರನ್ನು ಪಕ್ಕಕ್ಕೆ ಕಳಿಸ್ತೀರ, ಅವರು ಏನೂ ಕೇಳಿ ತಿಳುಕೋಬೇಕು ಅಂತಿದ್ದಾರೆ ಎಂದು ಅವರ ಪರವಾಗಿ ಮಾತಾಡ್ತಾ ಇದ್ದರು. ಹೀಗೆಲ್ಲಾ ಆಗಿಯೇ ರಾಜ್‌ಕುಮಾರ್ ಅವರು ಅಭಿಮಾನಿಗಳ ಹೃದಯದಲ್ಲಿ ಆರಾಧ್ಯದೈವವಾಗಿ ರಾರಾಜಿಸುತ್ತಿರುವುದು. ರಾಜಕುಮಾರ ಅವರು ಅಭಿಮಾನಿಗಳನ್ನು ಅಭಿಮಾನಿ ದೇವರುಗಳೇ ಎಂದು ಸಂಬೋಧಿಸುತ್ತಿದ್ದದ್ದು.

ರಾಜ್‌ಕುಮಾರ್ ಅವರನ್ನು ನಾನು ಒಂದು ಬೃಹತ್ ವೃಕ್ಷಕ್ಕೆ ಹೋಲಿಸುತ್ತೇನೆ. ಆ ವೃಕ್ಷ ಅಸಂಖ್ಯಾತ ಜನರಿಗೆ ಗಾಳಿ ಕೊಡುತ್ತೆ, ನೆರಳು ಕೊಡುತ್ತೆ, ಆಶ್ರಯ ಕೊಡುತ್ತೆ. ಆದರೆ ಆ ವೃಕ್ಷದಲ್ಲಿ ಕಾಗೇನು ಇರುತ್ತೆ, ಕೋಗಿಲೆಯೂ ಇರುತ್ತೆ ನವಿಲೂ ಇರುತ್ತೆ ಹದ್ದು ಇರುತ್ತೆ ಗಿಣಿಗಳು ಇರುತ್ತೆ ಅದರ ನೆರಳಲ್ಲಿ ಸಂಸಾರಿಯು ಇರ್ತಾನೆ, ಸಂನ್ಯಾಸಿಯು ಇರ್ತಾನೆ, ಭಕ್ತನು ಇರ್ತಾನೆ, ಕಳ್ಳಕಟುಕರು ಇರ್ತಾರೆ, ರಾಜಕೀಯ ವ್ಯಕ್ತಿಗಳು ಇರ್ತಾರೆ, ಸಾಧು-ಸಂತರು ಇರ್ತಾರೆ. ಇಂಥಹವರೇ ಇರಬೇಕು ಅನ್ನೋದು ಆಶ್ರಯ ನೀಡೋ ವೃಕ್ಷದ ಅಪೇಕ್ಷ ಅಲ್ಲ. ತನ್ನ ಆಶ್ರಯ ಪಡೆಯೋರೆಲ್ಲ ಸಜ್ಜನರಾಗಬೇಕು ಎಂದು ಬಯಸಬಹುದು. ಆದರೆ ನಿರ್ಬಂಧಿಸೋಕೆ ಅಥವಾ ನಿಯಂತ್ರಿಸೋಕೆ ಆಗೋಲ್ಲ.

ರಾಜ್‌ಕುಮಾರ್ ಅವರ ವಿಷಯ ಮಾತನಾಡಲು, ಬರೆಯಲು ಅವರು ಒಂದು ಅಕ್ಷಯ ಪಾತ್ರೆಯ ಹಾಗೆ – ಸಮಯದ ಅರಿವಿನಿಂದ ನಾನೇ ನಿಲ್ಲಿಸಬೇಕು – ಹಾಗೇ ಇದು ನಿಲ್ಲುತ್ತೆ.

♦♦♦♦♦



ಡಾ॥ ರಾಜ್‌ಗೆ ನುಡಿ–ನಮನ

– ಡಾ॥ ದೊಡ್ಡರಂಗೇಗೌಡ

ಸಹೃದಯ ಕಲಾಭಿಮಾನಿಗಳೇ,

ನಮ್ಮನ್ನೆಲ್ಲಾ ಬಿಟ್ಟು ಹೋದ ಅದ್ವಿತೀಯ ಕಲಾವಿದರಾದ ರಾಜ್‌ಕುಮಾರ್ ಅವರು ಕೇವಲ ಒಬ್ಬ ವ್ಯಕ್ತಿಯಾಗಿರಲಿಲ್ಲ, ಕರ್ನಾಟಕದಲ್ಲಿ ಹುಟ್ಟಿ ಬೆಳೆದು ನಾಡಿನ ಮಹಾಜನತೆಯ ಮೇಲೆ ದಟ್ಟವಾದ ಪ್ರಭಾವ ಬೀರಿದ ಒಂದು ಮಹಾನ್ ಶಕ್ತಿಯಾಗಿದ್ದರು.

ಕವಿಗಳ ಬಣ್ಣನೆಗೂ ನಿಲುಕದ, ಎಲ್ಲ ಹೋಲಿಕೆಗಳನ್ನೂ ಮೀರಿದ ಒಂದು ಮಹಾನ್ ಚೇತನ, ನಮ್ಮೆಲ್ಲರ ನಲ್ಮೆಯ ಕಲಾವಿದ ರಾಜಣ್ಣ ಅವರ ಗುಣಗಾನ ಎಂದರೆ ಅಭಿಮಾನಿಗಳ ಪಾಲಿಗೆ ಒಂದು ಪವಿತ್ರ ಆರಾಧನಾ!

ಈ ಗೀತಾಂಜಲಿ ಅನುಪಮವಾದ ಆ ಚೇತನದ ಬಗ್ಗೆ ನಾವು ಇರಿಸಿಕೊಂಡ ಬರೀ ಭಾವುಕ ಬಗೆಯಲ್ಲ, ವಾಸ್ತವದಲ್ಲಿ ಅವರ ಸಾಧನೆಯ ಸತ್ಯದ ಅನಾವರಣ!

ತಮ್ಮ ವ್ಯಕ್ತಿತ್ವದ ಅನನ್ಯ ಗುಣಗಳಿಂದ ರಾಜ್‌ಕುಮಾರ್ ಅವರು ಸುಮೇರು ಸದೃಶ; ಆ ವ್ಯಕ್ತಿತ್ವ ಎತ್ತರ ಹಿಮಾಲಯದೆತ್ತರ. ಆ ಕಾಂತಿಯ ವಿಸ್ತಾರ ಬಾಂದಳದ ಬಿತ್ತರ.

ಆ ಭೂಮಿ ತೂಕದ ವ್ಯಕ್ತಿತ್ವ ಎಲ್ಲರಿಗೂ ಇಷ್ಟವಾಗಲೂ ಮುಖ್ಯ ಕಾರಣ; ಅವರು ಎಲ್ಲರಂತೆ ಎಲ್ಲರ ನಡುವೆ ಬೆಳೆದವರು. ಜನತೆಗೆ ಹತ್ತಿರವಾಗಿದ್ದವರು. ಅದು ಅವರ ದೊಡ್ಡ ಗುಣ! ಸಾಧನೆ ಹಿಮಾಲಯದಂತೆ ಮನೋಜ್ಞ! ಅವರ ಚಿತ್ರಗಳ ಪ್ರಭಾವದಿಂದ ದೂರ ಸಿಡಿದು ನಿಂತವರಿಲ್ಲ. ಅಷ್ಟು ಆತ್ಮೀಯ ಅವರ ಚಿತ್ರಗಳು. ಅಲ್ಲಿ ಕೇವಲ ಅಭಿನಯವಷ್ಟೇ ಇರುತ್ತಿರಲಿಲ್ಲ. ಅಲ್ಲಿ ಅವರು ಜೀವನ ಸಂದೇಶವೇ ಇರುತ್ತಿತ್ತು. ಅವೆಲ್ಲವೂ ಅವರು ಕಂಡ ಆದರ್ಶಗಳ ಸಾಕಾರ ರೂಪ!

ರಾಜ್ ಅವರ ಚಿತ್ರಗಳ ಅವಲೋಕನ ಎಂದರೆ ಅದೊಂದು ಕನ್ನಡ ಸಂಸ್ಕೃತಿಯ ದರ್ಶನ ಎಂದರೂ ತಪ್ಪಿಲ್ಲ. ಸನ್ನಡತೆ, ಸಲ್ಲಾಪ, ಸದಭಿರುಚಿ, ಸತ್ ಚಿಂತನ, ಸನ್ಮಾರ್ಗ ಇವುಗಳ ಪರಿಪಾಕದ ಎರಕ- ಅವರ ಚಿತ್ರಗಳು. ಜನಪರ ನಿಲುವಿಗೆ ಸದಾ ಅವರು ಅಭಿಮುಖ. ಅಂಥ ಸತ್ಪಥದ ಪಯಣ, ಅವರ ಚಿತ್ರಗಳ ಸದಾಶಯದ ಹೂರಣ.

ಅವರು ಬೆಳ್ಳಿ ತೆರೆಯ ಮೇಲೆ ಮಿನುಗುವ ಎಷ್ಟು ಒಳ್ಳೆಯ ಕಲಾವಿದ ಆಗಿದ್ದರೋ ನಿಜ ಜೀವನದಲ್ಲಿ ಅಷ್ಟೇ ಒಳ್ಳೆಯ ಮನುಷ್ಯ ಕೂಡ ಆಗಿದ್ದರು ಎಂಬುದು ಬಹಳ ಮುಖ್ಯ. ಮಾನವೀಯತೆ ಅವರಲ್ಲಿ ನಿಚ್ಚಳವಾಗಿ ನೆಲೆಸಿತ್ತು. ಆದ್ದರಿಂದಲೇ ಅವರಲ್ಲಿ ಸದ್ವರ್ತನೆಗಳು ಸಹಜ ಉಸಿರಾಗಿದ್ದವು.

ರಾಜ್‌ಗೆ ಮೊದಲ ನಿಷ್ಠೆ... ಅವರ ನಲ್ಮೆಯ ನೆಚ್ಚಿನ ಕನ್ನಡ ರಂಗಭೂಮಿಗೆ. ಕಲೆ ಅವರ ದೃಷ್ಟಿಯಲ್ಲಿ ಪವಿತ್ರ. ಅದೊಂದು ತಪಸ್ಸು. ''ಪರಕಾಯ ಪ್ರವೇಶ'' ಅವರು ಕಂಡುಕೊಂಡ ಕಲೆಯ ಪರಮ ಅನುಸಂಧಾನ. ಆದ್ದರಿಂದಲೇ ಅವರಿಗೆ ತನ್ಮಯತೆ ಸಾಧ್ಯವಾಗಿತ್ತು. ಸಿದ್ಧಿಯಾಗಿತ್ತು. ಅದು ಬೇಡರ ಕಣ್ಣಪ್ಪನ ನಿಷ್ಕಳಂಕ ಭಕ್ತಿ ಆಗಿರಬಹುದು. ಜಗಜ್ಯೋತಿ ಬಸವೇಶ್ವರ ಶರಣ ಗುಣ ಆಗಿರಬಹುದು; ಮಂತ್ರಾಲಯದ ಗುರು ರಾಘವೇಂದ್ರ ಸಮರ್ಪಣಾ ಮನೋಭಾವ ಆಗಿರಬಹುದು. ಸರ್ವಜ್ಞಮೂರ್ತಿಯ ನಾಡಾಡಿ ಗುಣ ಆಗಿರಬಹುದು. ಸತ್ಯಹರಿಶ್ಚಂದ್ರನ ನಿಷ್ಠುರ ನಿಲುವಾಗಿರಬಹುದು, ರಣಧೀರ ಕಂಠೀರವನ ಗಾಂಭೀರ್ಯ ಆಗಿರಬಹುದು. ಶ್ರೀ ಕೃಷ್ಣದೇವರಾಯನ ವೈಭವ ನಡೆಯೂ ಆಗಿರಲಿಕ್ಕೆ ಸಾಕು.

''ಬಂಗಾರದ ಮನುಷ್ಯ''ನಲ್ಲಿದ್ದ ''ಮಣ್ಣಿನ ಮಗ''ನ ನೆಲದ ಸೊಗಡು, ''ಗಂಧದ ಗುಡಿ'' ಯಲ್ಲಿನ ಕಾಯಕ ನಿಷ್ಠೆ ''ಕವಿರತ್ನ ಕಾಳಿದಾಸ''ದ ಅಪ್ಪಟ ಕಲಾ ಪ್ರತಿಭೆ, ''ಸನಾದಿ ಅಪ್ಪಣ್ಣ''ನ ಸಂಗೀತ ಗುಂಗು, ಕನಕದಾಸನ ವಿಷ್ಣು ಸಂಕೀರ್ತನದ ಪರಿ, ನಾಂದಿಯಲ್ಲಿನ ಮೇಷ್ಟ್ರ ಪ್ರಾಮಾಣಿಕತೆ, ಭಕ್ತಕುಂಬಾರನ ಅಕಳಂಕ ಭಕ್ತಿಯ ಸಿರಿ- ಇದು ಯಾವುದೇ

ಮಿನುಗು ಮಿಂಚು ಇದ್ದರೂ ಈ ಎಲ್ಲವನ್ನೂ ಮೀರಿಸಿದ್ದು ಅವರ ಸಹಜ ತೊಡಗಿಸಿಕೊಳ್ಳುವಿಕೆಯ ಕಲಾ ಸಂಸ್ಪರ್ಶ ನೀಡುವ ಅದ್ಭುತ ಪ್ರತಿಭೆ. ಅದು ಅವರಿಗೆ ದೈವದತ್ತವಾದದ್ದು. ಅದು ಯಾವ ಅಭಿನಯ ಶಾಲೆಯಿಂದಲೂ ಕಲಿತು ಬಂದದ್ದಲ್ಲ. ರಕ್ತಗತವಾಗಿ ಹರಿದು ಬಂದದ್ದು. ಆದ್ದರಿಂದಲೇ ಅವರು ''ವರನಟ'', ''ಚಿರಂಜೀವಿ ಕಲಾವಿದ'' ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯ ಧೃವತಾರೆ! ಈ ''ಗೀತಾಂಜಲಿ'' ಅಂಥ ಚೇತನಕ್ಕೆ ಶ್ರದ್ಧಾಂಜಲಿ.

ಡಾ|| ರಾಜ್ ಬದುಕಿನಲ್ಲೂ ಅಷ್ಟೇ ಅಪರಂಜಿ. ವ್ಯಕ್ತಿತ್ವದ ಸಾಚಾ ಮನುಷ್ಯ. ಅದಕ್ಕೆ ಜನ ಅವರನ್ನು ''ದೇವತಾ ಮನುಷ್ಯ'' ಎಂದು ಕರೆದದ್ದು. ನನ್ನ ದೃಷ್ಟಿಯಲ್ಲಿ ಸಾತ್ವಿಕ ಪುರುಷ. ಅವರು ಎಷ್ಟೆಷ್ಟು ಎತ್ತರಕ್ಕೆ ಏರಿದರೂ, ಏನೆಲ್ಲ ಸಾಧನಾ ಶಿಖರಗಳನ್ನು ಮುಟ್ಟಿದರೂ ಅವರು ಈ ನೆಲದ ಮೇಲೆ ನಡೆದಾಡಿದವರು. ಸಾಮಾನ್ಯರಂತೆ ಬದುಕಿದರು, ದಂತ ಕಥೆಯಾದರು.

ಹೊಗಳಲಿಕ್ಕೆ ಅಂಥ ಹೇಳುತ್ತಾ ಇಲ್ಲ. ಅವರಲ್ಲಿದ್ದ ಇತ್ಯಾತ್ಮಕ ಗುಣಗಳು 1) ಸರಳತೆ 2) ವಿನಯವಂತಿಕೆ 3) ಶ್ರದ್ಧೆ 4) ಮುಗ್ಧತೆ 5) ಅಂಟಿಯೂ ಅಂಟದಂತೆ ಇದ್ದ ನಿರ್ಲಿಪ್ತ ಸ್ಥಿತಿ.

ಅಷ್ಟು ದೊಡ್ಡ ಕಲಾವಿದರಾದರೂ ಡಾ|| ರಾಜ್ ಸರಳತೆಯ ಸಾಕಾರ ಮೂರ್ತಿ. ಅದಕ್ಕೆ ಕನ್ನಡ ಜನ ಅವರನ್ನು ಅಷ್ಟೊಂದು ಅಪಾರವಾಗಿ ಪ್ರೀತಿಸಿದ್ದು.

ಹೂವು-ಹಣ್ಣು ತುಂಬಿದ ಮರ ಬಾಗುವಂತೆ ಪ್ರತಿಭೆ, ಅದೃಷ್ಟ ಎಲ್ಲದರಿಂದ ಬೀಗುವುದರ ಬದಲು ಬಾಗಿದರು. ದೊಡ್ಡವರಾದರು ''ಶ್ರದ್ಧೆ'' ಅವರ ಬದುಕಿನ ಮಂತ್ರ. ಯಾವತ್ತೂ ಚಿತ್ರೀಕರಣಕ್ಕೆ ಅವರು ತಡವಾಗಿ ಬಂದವರೇ ಅಲ್ಲ. ಸಮಯ ಪರಿಪಾಲಕರೂ ಹೌದು. ತಾವು ಮಾಡುವ ಕಾರ್ಯದಲ್ಲಿ ತನ್ಮಯವಾಗಿ ತೊಡಗಿಸಿಕೊಳ್ಳುತ್ತಿದ್ದ ಅಪ್ಪಟ ವ್ಯಕ್ತಿ! ಅವರ ''ತಾದಾತ್ಮ್ಯ ಭಾವ'' ಅಪೂರ್ವ! ಅನನ್ಯ.

ಚಿತ್ರರಂಗದಲ್ಲಿ ಏನೇನೆಲ್ಲಾ ಆಟ ಆಡಬಹುದಿತ್ತು. ಅವರು ಹಾಗೆಲ್ಲಾ ಆಡಲಿಲ್ಲ. ಮುಗ್ಧರಾಗೇ ಉಳಿದರು. ಅದರಿಂದ ಎತ್ತರೆತ್ತರ ಬೆಳೆದರು. ವಿಖ್ಯಾತರಾದರು. ಇನ್ನು ಅವರ ನಿರ್ಲಿಪ್ತಗುಣ... ಅಲ್ಲೇ ಅವರ ಆಧ್ಯಾತ್ಮ ಭಾವನೆ ಬೆಳಕಾಗುತ್ತಿದ್ದುದು! ರಾಜ್ ಚಿತ್ರಗಳೆಂದರೆ ಅಪ್ಪಟ ಆದರ್ಶದ ಎರಕ. ಕನ್ನಡಾಭಿಮಾನದ ಪುಳಕ. ಅವರೊಬ್ಬ ಸಂಸ್ಕೃತಿಯ ಚಿರಂತನ ಚಿಂತಕ. ಅದಕ್ಕೆ ಅವರ ಮಾತುಗಳು ಪ್ರೀತಿ ಸಿಂಚಿತ.

ಸಿನಿಮಾದಲ್ಲೂ ಅಷ್ಟೇ... ನಿಜ ಜೀವನದಲ್ಲೂ ಅಷ್ಟೇ. ಎಲ್ಲ ಜನರಿಗೆ ಇಷ್ಟವಾಗುವಂಥ ಸದಭಿರುಚಿಯ ಹದ ಇರುತ್ತಿತ್ತು.

ಅವರಿಗೆ ನಾಡೆಂದರೆ ಬಹಳ ಗೌರವ. ನುಡಿಯೆಂದರೆ ಬಹಳ ಭಕ್ತಿ. ಅಪಾರ ಪ್ರೀತಿ, ಅದಕ್ಕೆ ಅವರು ಹಾಗೆ ಗೋಕಾಕ್ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡದ್ದು. ಅಭಿಮಾನದ ಮಹಾಪೂರವನ್ನೇ ಹರಿಸಿದ್ದು. ಕೀರ್ತಿಧ್ವಜ ಏರಿಸಿದ್ದು. ತನ್ನತನ ತೋರಿಸಿದ್ದು! ನಾಡು-ನುಡಿಯ ಈ ಅಪ್ಪಟ ಅಭಿಮಾನ ಎಲ್ಲವನ್ನೂ ಮೀರಿಸಿದ್ದು!

ಅವರೆಂಥ ಸಾತ್ವಿಕರು ಎಂದರೆ... ವೀರಪ್ಪನ್ ಅವರನ್ನೆತ್ತಿ ಕೊಂಡುಹೋದರೂ ಅಲ್ಲೂ ಅವರು ಪ್ರಕೃತಿಯ ಪ್ರೀತಿಯನ್ನು ಬಿಡಲಿಲ್ಲ. ಯೋಗಾಭ್ಯಾಸ ಬಿಡಲಿಲ್ಲ. ಅಲ್ಲೇ ಅವರ ವ್ಯಕ್ತಿತ್ವದ ಇತ್ಯಾತ್ಮಕ ಗುಣ ಇರುವುದು ''ಬಂದದ್ದೆಲ್ಲಾ ಬರಲಿ; ಗೋವಿಂದನ ದಯೆ ಇರಲಿ'' ಇದು ರಾಜ್ ಅವರ ಜಾಯಮಾನ!

ನಮ್ಮ ನಿಮ್ಮೆಲ್ಲರ ಅಕ್ಕರೆಯ ರಾಜ್‌ಕುಮಾರ ದೈವಕ್ಕೆ ಶರಣಾದವರು. ಧರ್ಮಕ್ಕೆ ಜೆಲೆ ಕೊಟ್ಟವರು.

ತಾಯಿ ತಂದೆ ಗುರುಗಳನ್ನು ಮನಸಾರೆ ವಂದಿಸಿದವರು. ನಾಡಿನ ಕಣ್ಣಾದವರು; ನುಡಿಯ ಅಪ್ಪಟ ಸೇವಕರು. ಕನ್ನಡದ ಕಿಂಕರರು; ಅಭಿಮಾನಿಗಳ ಪಾಲಿಗೆ ''ಕಣ್ಮಣಿ'' ಯಾದವರು. ಸ್ವಾಭಿಮಾನ ಬೆಳೆಸಿದವರು; ಗತ-ಇತಿಹಾಸ ತಿಳಿಸಿದವರು. ಸಂಸ್ಕೃತಿಯ ಪ್ರಚಾರ ಮಾಡಿದವರು. ಅಭಿರುಚಿಯ ರೂವಾರಿಗಳು.

ತಮ್ಮ ಜನಪರ ಕಾಳಜಿಯಿಂದ ಮನೆ ಮಾತಾದವರು. ತಮ್ಮ ಸನ್ನಡತೆಯಿಂದ ''ದೇವರು'' ಎನ್ನಿಸಿಕೊಂಡವರು. ತಾವೇ ದೇವರಂಥ ಮನುಷ್ಯರಾದರೂ ತಮ್ಮೆಲ್ಲ ಅಭಿಮಾನಿಗಳನ್ನೂ ಅಭಿಮಾನಿ ದೇವರುಗಳೆಂದು ಪೂಜ್ಯಭಾವದಿಂದ ಸಂಬೋಧಿಸಿದವರು. ಮಹಾನುಭಾವರು, ಧನ, ಕನಕ, ವಸ್ತು ವಾಹನ, ಕೀರ್ತಿ, ಎಲ್ಲವನ್ನೂ ಅಪಾರವಾಗಿ ಗಳಿಸಿದರೂ ಮಣ್ಣಿನ ಮಗನಂತೆ ಈ ನೆಲದ ಮೇಲೆ ನಡೆದವರು ... ಮಹಾನುಭಾವರು. ಕಲಾ ಜಗತ್ತಿನ ಇಂಥ ಯುಗಪುರುಷ ರಾಜಕುಮಾರರ ಆತ್ಮಕ್ಕೆ ಈ ಕೃತಿ ಇಡೀ ಕನ್ನಡ ಕುಲಕೋಟಿಯ ನುಡಿ ನಮನ.

♦♦♦♦♦



ಜೀವಂತ ದಂತಕತೆ

– ಎ.ಎನ್. ಸುಬ್ಬರಾವ್

ಹುಲುಮಾನವರು ನಿತ್ಯವೂ ಹುಟ್ಟುತ್ತಾರೆ, ಸಾಯುತ್ತಾರೆ. ಆದರೆ ದಂತಕತೆಗಳು ಹುಟ್ಟುವುದು ಎಲ್ಲೋ ಒಮ್ಮೊಮ್ಮೆ ಮಾತ್ರ - ಅವುಗಳಿಗೆ ಸಾವೆಂಬುದೇ ಇಲ್ಲ. ಜನಮಾನಸದಲ್ಲಿವುಗಳ ನೆನಪು ಚಿರಂತನ.

ಬುಧವಾರ ಇದ್ದಕ್ಕಿದ್ದಂತೆ ನಿಧನರಾದ ರಾಜ್‌ಕುಮಾರ್ ಅಂತಹ ಒಂದು ದಂತಕತೆ. ಅವರ ಜೀವಿತ ಕಾಲದಲ್ಲಿಯೇ ದಂತಕತೆಯಾಗಿದ್ದ ಈ ಮೇರುನಟ ಇಡೀ ಕರ್ನಾಟಕದ ಎರಡು-ಮೂರು ತಲೆಮಾರುಗಳ ಮೇಲೆ ಎಂದೂ ಅಳಿಯದ ಗಾಢವಾದ ಅನುಭವದ ಅಚ್ಚನ್ನೊತ್ತಿ ಹೋಗಿದ್ದಾರೆ.

ಚಲನಚಿತ್ರ ರಂಗದ ಬೆಡಗು ಸಹಜವಾಗಿಯೇ ಎಲ್ಲ ವಯೋಮಾನಗಳ, ಎಲ್ಲ ವರ್ಗಗಳ, ಎಲ್ಲ ವೃತ್ತಿ ಪ್ರವೃತ್ತಿಗಳ ಮೇಲೆ ಅಸಾಧಾರಣ ಪ್ರಭಾವ ಬೀರುವ ಅಯಸ್ಕಾಂತ. ಆದರೆ ಬಹುತೇಕವಾಗಿ ಇಂತಹ ಅನುಭವ ಕ್ಷಣಿಕ. ಈ ಕ್ಷೇತ್ರದಲ್ಲಿಯೂ ಬಹುಕಾಲ ತಮ್ಮ ನೆನಪನ್ನು ಬಿಟ್ಟು ಹೋದ ಮಹಾನ್ ಕಲಾವಿದರು ಕೆಲವರಿದ್ದಾರೆ, ಆದರೆ ತಮ್ಮ ಕ್ಷೇತ್ರದ ಸೀಮಿತ ವ್ಯಾಪ್ತಿಯನ್ನು ಮೀರಿ ಒಂದು ಇಡೀ ಜನಾಂಗದ ದಿನನಿತ್ಯದ

ಜೀವನದ ಮೇಲೆ, ಹಲವು ಆಯಾಮಗಳುಳ್ಳ ಸಾರ್ವಜನಿಕ ಬದುಕಿನ ಮೇಲೆ ಪ್ರಖಾಂಡ ಪ್ರಭಾವವನ್ನು ಬೀರುವ ಚೇತನಗಳು ಅಪರೂಪ. ರಾಜ್‌ಕುಮಾರ್ ಇಂತಹ ಅಪರೂಪದ ವ್ಯಕ್ತಿ ಮಾತ್ರವಲ್ಲ, ಶಕ್ತಿ ಕೂಡ ಎನ್ನುವುದೇ ಅವರ ವೈಶಿಷ್ಟ್ಯ, ಹೆಗ್ಗಳಿಕೆ, ಸಾಧನೆ ಎಲ್ಲವೂ.

ವಾಸ್ತವವಾಗಿ ನೋಡಿದರೆ ರಾಜ್‌ಕುಮಾರ್ ಎಂದೂ ಪವಾಡ ಪುರುಷರಾಗಲು ಬಯಸಿದವರೇ ಅಲ್ಲ. ಐದು ಕೋಟಿ ಕನ್ನಡಿಗರ ಸಾಂಸ್ಕೃತಿಕ ಪ್ರಜ್ಞೆಯ ಸ್ವರೂಪವನ್ನು ಪಡೆದ ಅವರ ವೈಯಕ್ತಿಕ ಪ್ರಪಂಚ ವಿಸ್ಮಯವೆನಿಸುವಷ್ಟು ಚಿಕ್ಕದು. ತಾವಾಯಿತು, ತಮ್ಮನ್ನು ಆರಾಧಿಸುವ ಮಡದಿ-ಮಕ್ಕಳಾಯಿತು, ನೆಂಟರಿಷ್ಟರಾಯಿತು, ತಾವು ಅಭಿನಯಿಸಿದ ಚಿತ್ರಗಳಾದವು, ತಮಗೆ ಕರಗತವಾದ ಸಂಗೀತ ಜ್ಞಾನವಾಯಿತು, ತಮ್ಮ ವ್ಯಕ್ತಿತ್ವವನ್ನು ವಿಕಸನಗೊಳಿಸಿದ ಆಧ್ಯಾತ್ಮವಾಯಿತು, ತಮ್ಮ ಆಕರ್ಷಕ ಶರೀರಕ್ಕೆ ಭೀಮಬಲ ತಂದುಕೊಟ್ಟ, ತಮ್ಮ ಏಕಾಗ್ರತೆಗೆ ಇಂಬುಕೊಟ್ಟ, ತಮ್ಮ ಮಾನಸಿಕ ಸ್ವಾಸ್ಥ್ಯಕ್ಕೆ ಪುಟವಿಟ್ಟ ಯೋಗಾಭ್ಯಾಸವಾಯಿತು. ಈ ಕ್ಷೇತ್ರಗಳಿಗೆ ಸಂಬಂಧಿಸಿದ ಆಪ್ತೇಷ್ಟರ ಸಖ್ಯವಾಯಿತು. ರಾಜ್‌ಕುಮಾರ್ ಎಂದೂ ಈ ವರ್ತುಲದಿಂದ ಅನಗತ್ಯವಾಗಿ ಈಚೆ ಬಂದವರಲ್ಲ.

ಈ ದೃಷ್ಟಿಯಿಂದ ಅವರು ಬಹಳ ಖಾಸಗಿ ವ್ಯಕ್ತಿ. ಆದರೆ ಹಾಗೆಂದು ಸರ್ವಸಂಗ ಪರಿತ್ಯಾಗಿಯಲ್ಲ. ತಮ್ಮದೇ ಆದ ಪ್ರಪಂಚದಲ್ಲಿ ಸಾರ್ಥಕ್ಯ ಕಂಡುಕೊಂಡವರು, ಅದನ್ನು ತಮ್ಮ ಜ್ಞಾನಾರ್ಜನೆಗಾಗಿ ಬಳಸಿಕೊಂಡವರು. ಅದೇ ಸಮಯದಲ್ಲಿ ಅಗತ್ಯಬಿದ್ದಾಗ ಹೊರಗಿನವರೊಂದಿಗೆ ಮುಕ್ತವಾಗಿ ಬೆರೆತವರು, ಅವರಿಗೆ ತಮ್ಮ ವಿಶಿಷ್ಟ ಅತಿಥ್ಯದ, ವಿಶ್ವಾಸದ ಸಿಹಿ ಅನುಭವವನ್ನು ನೀಡಿದವರು. ಅವರೊಂದಿಗೆ ತಮ್ಮ ನೆನಪುಗಳನ್ನು ಮುಗ್ಧವಾಗಿ ಹಂಚಿಕೊಂಡವರು. ಅಪಾರ ಜೀವನಾಸಕ್ತಿ ಹೊಂದಿದ್ದ ಸಂಘಜೀವಿ, ಆದರೆ ತಮ್ಮ ಏಕಾಂತದಲ್ಲಿಯೇ ಪ್ರಖಾಂಡ ಜೀವನಾನುಭವ ಪಡೆದವರು.

ಇಡೀ ಕರ್ನಾಟಕ ಅವರನ್ನು ಅರಸಿ ಬಂತು. ಎಲ್ಲ ಕ್ಷೇತ್ರದ ಪ್ರಮುಖರೂ ಅವರ ಪರಿಚಯಕ್ಕೆ ಹಾತೊರೆದರು. ಎಲ್ಲ ಮುಖ್ಯಮಂತ್ರಿಗಳೂ ಗದ್ದುಗೆಯೇರಿದ ಕೆಲವೇ ಕ್ಷಣಗಳಲ್ಲಿ ಅವರ ಮನೆಗೆ ಬಂದು ಅವರ ಸಹಕಾರ ಕೋರಿದರು, ಆಶೀರ್ವಾದ ಪಡೆದರು. ಹೊರರಾಜ್ಯಗಳಲ್ಲಿಯೂ ರಾಜ್‌ಕುಮಾರ್ ಅವರ ಕೀರ್ತಿ ಎಷ್ಟು ವ್ಯಾಪಕವಾಗಿ ಹರಡಿತ್ತೆಂದರೆ ಅಲ್ಲಿಂದ ಬೆಂಗಳೂರಿಗೆ ಬಂದ ಹಲವಾರು ಪ್ರಮುಖರು - ಅವರೆಲ್ಲ ಚಿತ್ರಪ್ರೇಮಿಗಳೆಂದಾಗಲಿ, ರಾಜ್‌ಕುಮಾರ್‌ರ ಚಿತ್ರಗಳನ್ನು

ನೋಡಿದ್ದರೆಂದಾಗಲಿ ಅಲ್ಲ - ಅವರ ದರ್ಶನ ಪಡೆಯದೆ ತಮ್ಮ ಸ್ವಸ್ಥಾನಗಳಿಗೆ ಮರಳುತ್ತಿರಲಿಲ್ಲ. ಬಂದವರೆಲ್ಲ ಅವರ ಸರಳ ವ್ಯಕ್ತಿತ್ವವನ್ನು ಪಾರದರ್ಶಕತೆಯನ್ನು ಕಂಡು ವಿಸ್ಮಿತರಾಗುತ್ತಿದ್ದರು.

ಏನು ಈ ಅಪಾರ ಜನಪ್ರಿಯತೆಯ, ಗೌರವಾದರಗಳ ರಹಸ್ಯ? ಏನು ಈ ನಾನಾ ಕ್ಷೇತ್ರಗಳಿಗೆ ದಿಗ್ಗಜರಿಗೆ, ಅಪೂರ್ವ ಸಾಧಕರಿಗೆ ಕೂಡ ಸಿಗದಿದ್ದ ಪ್ರಾಮುಖ್ಯ? ಏನು ಈ ಮನುಷ್ಯನಲ್ಲಿದ್ದ ಅಪರೂಪದ ಆಕರ್ಷಣೆ?

ಈ ಪ್ರಶ್ನೆಗಳಿಗೆ ತರ್ಕಬದ್ಧವಾದ ಉತ್ತರಗಳು ಸಿಗುವುದು ಕಷ್ಟ. ಇದೊಂದು ಯೋಗವೆನ್ನಬಹುದು, ಸಾಧನೆಗಳ ಮಹಾಪೂರದ ನಡುವೆಯೂ ಮಿಂಚಿದ ಸರಳತೆಗೆ ಸಂದ ಪುರಸ್ಕಾರವೆನ್ನಬಹುದು, ತುಂಬಿದ ಕೊಡವೊಂದರ ಮುಗ್ಧತೆಗೆ ಲೋಕ ನೀಡಿದ ಮನ್ನಣೆಯೆನ್ನಬಹುದು. ಏನೇ ಇರಲಿ, ಇದು ರಾಜ್ ಕುಮಾರನಿಗೆ ಲಭ್ಯವಾದ ರಾಜಯೋಗ.

ಒಬ್ಬ ನಟ ತನ್ನ ಅಭಿಮಾನಿಗಳೊಂದಿಗೆ ಅವಿನಾಭಾವ ಸಂಬಂಧವನ್ನು ಬೆಳೆಸಿಕೊಳ್ಳುವುದರಲ್ಲಿ ವಿಶೇಷವೇನೂ ಇಲ್ಲ. ಆದರೆ ಈ ಅವಿನಾಭಾವ ಸಂಬಂಧ ಈ ಕ್ಷೇತ್ರದ ಎಲ್ಲ ಎಲ್ಲೆಗಳನ್ನೂ ಮೀರಿ ಒಂದು ಜೀವನ ಮಾರ್ಗವೆನಿಸುವ ನಿದರ್ಶನಗಳು ಅಪರೂಪ. ರಾಜ್‌ಕುಮಾರ್ ಮತ್ತು ಅವರ ಅಭಿಮಾನಿಗಳ ನಡುವೆ ಬೆಳೆದ ಸಂಬಂಧ ಈ ಸ್ವರೂಪದ್ದು. ಅಭಿಮಾನಿಗಳ ನಿತ್ಯ ಜೀವನದಲ್ಲಿ ಹಾಸುಹೊಕ್ಕಾದ ರಾಜ್‌ಕುಮಾರ್ ಅವರ ದೃಷ್ಟಿಯಲ್ಲಿ ಅವರೆಲ್ಲ 'ಅಭಿಮಾನಿ ದೇವರು'ಗಳಾಗಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ರಾಜ್‌ಕುಮಾರ್ ಅವರನ್ನು ಈ ರೀತಿ ಬಣ್ಣಿಸಿ ಮೆರೆದಿದ್ದರಲ್ಲಿ ಯಾವ ಕಪಟವೂ ಇರಲಿಲ್ಲ.

ತಾವು ಅಭಿನಯಿಸಿದ ಹಲವು ಹತ್ತು ಆದರ್ಶಮಯಿ ಪಾತ್ರಗಳಿಂದಾಗಿ ರಾಜ್‌ಕುಮಾರ್ ಅಸಂಖ್ಯಾತ ಪ್ರೇಕ್ಷಕರಿಗೆ ದಾರಿದೀಪವಾದರು, ಅವರೆಲ್ಲರ ದೃಷ್ಟಿಯಲ್ಲಿ ಬಂಗಾರದ ಮನುಷ್ಯರಾದರು, ಒಮ್ಮೊಮ್ಮೆ ಅತಿ ಮಾನವರೂ ಆದರು. ಇದು ಕೇವಲ ಬೆಡಗಿನ ಸಂಬಂಧವಾಗಿರಲಿಲ್ಲ ಎನ್ನುವುದೇ ಅದರ ತಿರುಳು, ವೈಶಿಷ್ಟ್ಯ.

ರಾಜ್‌ಕುಮಾರ್ ಕನ್ನಡ ಚಿತ್ರರಂಗದೊಂದಿಗೆ 50 ವರ್ಷಗಳ ಸುದೀರ್ಘ ಒಡನಾಟ ಹೊಂದಿದ್ದರು. ಇನ್ನಾವ ಭಾಷೆಯತ್ತಲೂ ಸುಳಿಯಲಿಲ್ಲ. ಅವರ ವಿಸ್ಮಯಕಾರಿ ವೃತ್ತಿ ಜೀವನಕ್ಕೆ ಭದ್ರ ಬುನಾದಿ ಹಾಕಿದ ನಾಟಕ ರಂಗವನ್ನು ಅವರು ಎಂದೂ ಮರೆಯಲಿಲ್ಲ.

ಉಪೇಕ್ಷಿಸಲಿಲ್ಲ, ಅವರಿಗೆ ಜನ್ಮವಿತ್ತು, ರಂಗಭೂಮಿಯಲ್ಲಿ ತಜ್ಞನಟನನ್ನಾಗಿ ರೂಪಿಸಿದ ತಮ್ಮ ತಂದೆಯವರನ್ನು ಜೀವನಪೂರ್ತಿ ಆರಾಧಿಸಿದರು, ಅವರನ್ನು ಕೃತಜ್ಞತೆಯಿಂದ ನೆನೆದರು. ಈ ಎಲ್ಲ ವಿರಳವಾದ ಗುಣಗಳೂ ಅವರ ವ್ಯಕ್ತಿತ್ವವನ್ನು ಗಟ್ಟಿಯಾದ ನೆಲೆಗಟ್ಟಿನ ಮೇಲೆ ರೂಪಿಸಿದವು. ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ಎಲ್ಲ ಬಗೆಯ ಪಾತ್ರಗಳಲ್ಲಿಯೂ ಲೀಲಾಜಾಲವಾಗಿ ಅಭಿನಯಿಸಿ ಆ ಪಾತ್ರಗಳು ಜನರ ಮನಸ್ಸುಗಳಲ್ಲಿ ಅಚ್ಚಳಿಯದಂತೆ ನಿಲ್ಲುವಂತಹ ಪ್ರತಿಭೆಯನ್ನು ಅವುಗಳಿಗೆ ತುಂಬಿದರು.

ಜೊತೆಗೆ ತಮ್ಮ ಮಧುರ ಕಂಠದಿಂದ, ತಮ್ಮ ಅಪಾರ ಭಾಷಾ ಶುದ್ಧಿಯಿಂದ ನೂರಾರು ಹಾಡುಗಳನ್ನು ಸುಶ್ರಾವ್ಯವಾಗಿ ಹಾಡಿದರು, ಸಹಸ್ರಾರು ಸಂಭಾಷಣೆಗಳಿಗೆ ಜೀವ ತುಂಬಿದರು. ಏನು ಮಾಡಿದರೂ ಅದರಲ್ಲಿ ತಮ್ಮ ಉತ್ತಮ ಅಭಿರುಚಿಯನ್ನು ಪ್ರತಿಬಿಂಬಿಸಿದರು.

ಅದರಿಂದಾಗಿಯೇ ರಾಜ್‌ಕುಮಾರ್ ಕನ್ನಡ ಚಿತ್ರರಂಗದ ಅವಿಭಾಜ್ಯ ಅಂಗವಾದರು, ಚಿತ್ರೋದ್ಯಮದ ಸಾಕ್ಷಿಪ್ರಜ್ಞೆಯಾದರು, ಉದ್ಯಮ ಸಂಕಷ್ಟಕ್ಕೆ ಸಿಕ್ಕಿದಾಗಲೆಲ್ಲ ತಮ್ಮ ದನಿಯೆತ್ತಿ ಹೋರಾಟಕ್ಕೆ ಮುಂಚೂಣಿಯಲ್ಲಿ ನಿಂತರು. ಅದರಿಂದಾಗಿ ಚಿತ್ರೋದ್ಯಮದ ನಿರಂತರ ಕೃತಜ್ಞತೆಗೆ ಪಾತ್ರರಾದರು.

ಜನಮನದ ಮೇಲೆ ಇಂತಹ ಅಗಾಧ ಹಿಡಿತವನ್ನಿಟ್ಟ ಯಾವುದೇ ವ್ಯಕ್ತಿ ತನ್ನ ಈ ಅಪಾರ ಬಲವನ್ನು ಪ್ರಯೋಗಿಸಲು ರಾಜಕೀಯಕ್ಕೆ ಇಳಿಯುತ್ತಾನೆ, ಸಾರ್ವಜನಿಕ ಜೀವನಕ್ಕೆ ನುಗ್ಗುತ್ತಾನೆ. ಆದರೆ ಯಾರು ಎಷ್ಟೇ ಒತ್ತಡ ತರಲಿ, ತಮಗೆ ಒದಗಿ ಬಂದ ಅವಕಾಶಗಳು ಎಷ್ಟೇ ಅನುಕೂಲವಾಗಿರಲಿ, ರಾಜ್‌ಕುಮಾರ್ ರಾಜಕೀಯ ರಂಗಕ್ಕೆ ಧುಮುಕಲು ಏಕಚಿತ್ತದಿಂದ ನಿರಾಕರಿಸಿ ತಮ್ಮ ವ್ಯಕ್ತಿತ್ವದ ಹಿರಿಮೆಗೆ ಮತ್ತಷ್ಟು ರಂಗು ತಂದರು. ಕನ್ನಡ ಜನರ ಕೃತಜ್ಞತೆಗೆ ಇನ್ನಷ್ಟು ಪಾತ್ರರಾದರು. ಕನ್ನಡಿಗರ ದೃಷ್ಟಿಯಲ್ಲಿ ಇನ್ನಷ್ಟು ಅಜರಾಮರರಾದರು.

ಕರ್ನಾಟಕ ಇಷ್ಟು ಅಕ್ಕರೆಯಿಂದ, ಹೆಮ್ಮೆಯಿಂದ ಬೆಳೆಸಿದ ಈ ಅಸಾಮಾನ್ಯ ವ್ಯಕ್ತಿ ಕುಖ್ಯಾತ ನರಹಂತಕನೊಬ್ಬನ ಅವಕೃಪೆಗೆ, ಅಟ್ಟಹಾಸಕ್ಕೆ, ಆತ್ಮರತಿಗೆ ತುತ್ತಾಗಿದ್ದು ಒಂದು ದೊಡ್ಡ ದುರಂತ. ತನ್ನ ಕುಖ್ಯಾತಿಗೆ ಇನ್ನಷ್ಟು ಅಬ್ಬರದ ಪ್ರಚಾರ ಸಿಗಲೆಂಬ ದುರುದ್ದೇಶದಿಂದ ಈ ನಿರುಪದ್ರವಿಯನ್ನು ಅಪಹರಿಸಿ ಕಾಡುಮೇಡುಗಳಲ್ಲಿ 108 ದಿನಗಳಷ್ಟು ಸುದೀರ್ಘವಾಗಿ ನಲುಗಿಸಿದ ಈ ರಕ್ಕಸ ರಾಜ್‌ಕುಮಾರ್‌ರವರ ಚಿತ್ತಸ್ವಾಸ್ಥ್ಯಕ್ಕೆ, ದೇಹಶಕ್ತಿಗೆ ತಡೆಯಲಾರದ ಆಘಾತವನ್ನುಂಟು ಮಾಡಿದ. ಈ ಭೀಕರ ಅನುಭವದಿಂದ

ಚೇತರಿಸಿಕೊಳ್ಳಲು ರಾಜ್‌ಕುಮಾರ್ ರಂತಹ ಅಪರೂಪದ ಚೇತನಕ್ಕೂ ಕಷ್ಟವಾಯಿತು. ವೀರಪ್ಪನ್‌ನ ನೆರಳು ಅವರನ್ನು ಅಮೂರ್ತವಾಗಿ ಕಾಡುತ್ತಿದ್ದಾಗಲೇ ರಾಜ್‌ಕುಮಾರ್‌ರಿಗೆ ತಮ್ಮ ಜೀವಾಳವಾಗಿದ್ದ ತಮ್ಮ ವರದಪ್ಪನವರ ಅಕಾಲಿಕ ನಿಧನ ಮತ್ತೊಂದು ಘೋರ ಆಘಾತವನ್ನು ತಂದೊಡ್ಡಿತು.

ಈ ತೀವ್ರ ಪೆಟ್ಟಿನಿಂದ ಅವರು ಚೇತರಿಸಿಕೊಳ್ಳಲು ಆಗಲೇ ಇಲ್ಲ. ಹೆಮ್ಮರವಾಗಿದ್ದ ರಾಜ್‌ಕುಮಾರ್ ಅಶಕ್ತರಾದರು, ಕೊನೆಗೆ ಅನಿವಾರ್ಯಕ್ಕೆ ತಲೆಬಾಗಿದರು.

ರಾಜ್‌ಕುಮಾರ್ ಅವರ ನಿಧನದಿಂದ ಕರ್ನಾಟಕ ಚಿತ್ರರಂಗದಲ್ಲಿ ಮಾತ್ರವಲ್ಲ, ಇಡೀ ಕರ್ನಾಟಕದ ಸಾಂಸ್ಕೃತಿಕ ಮತ್ತು ಸಾರ್ವಜನಿಕ ಜೀವನದ ಒಂದು ಮಹತ್ತರ ಅಧ್ಯಾಯ ಕೊನೆಗೊಂಡಿದೆ.

ಒಂದು ಶಕೆ ಮುಗಿದಿದೆ. ರಾಜ್‌ಕುಮಾರ್ ಶಕಪುರುಷರಾಗಿ ತಾವು ಆರಾಧಿಸಿದ ರಾಜ್ಯವನ್ನು ಅಗಲಿದ್ದಾರೆ.

♦♦♦♦♦





ದೇವತಾ ಮನುಷ್ಯ

– ಡಾ|| ಸಿ. ಸೋಮಶೇಖರ

ಕನ್ನಡನಾಡಿನ ಕಣ್ಮಣಿ, ಅಭಿಮಾನಿಗಳ ಆರಾಧ್ಯ ದೈವ, ರಸಿಕರ ರಾಜ, ನಟಸಾರ್ವಭೌಮ, ಕಲಾತಪಸ್ವಿ, ಮುಂತಾದ ಹಲವಾರು ಅಭಿನಾಮಗಳಿಗೆ ಪಾತ್ರರಾದ ಡಾ|| ರಾಜ್‌ಕುಮಾರ್, ಕನ್ನಡ ಚಲನಚಿತ್ರ ಸಾಮ್ರಾಜ್ಯದ ನಿಜವಾದ ರಾಜಕುಮಾರರಾಗಿ ಸುಮಾರು 5 ದಶಕಗಳ ಕಾಲ ಕನ್ನಡ ಕಲಾ ಸಾಮ್ರಾಜ್ಯದ ಅನಭಿಷಿಕ್ತ ದೊರೆಯಾಗಿ ಐದು ಕೋಟಿ ಕನ್ನಡಿಗರ ಹೃದಯ ಸಿಂಹಾಸನವನ್ನು ಅಲಂಕರಿಸಿದ್ದ ಅನನ್ಯ ಧೀಮಂತ ಚೇತನ.

ಕನ್ನಡ ಚಲನಚಿತ್ರರಂಗ ನಿಜವಾದ ಅರ್ಥದಲ್ಲಿ ಉದಯವಾದದ್ದೇ ರಾಜ್ ಕುಮಾರರ ಕಲಾಪ್ರಪಂಚ ಪ್ರವೇಶವಾದಂದಿನಿಂದ ಎಂಬುದು ಐತಿಹಾಸಿಕ ಸತ್ಯ. ಮುತ್ತುರಾಜ ಎಂಬ ರಂಗಭೂಮಿ ನಟ ರಾಜಕುಮಾರ ಎಂಬ ನೂತನ ನಾಮಧೇಯ ದಿಂದ, ಕನ್ನಡ ಚಲನಚಿತ್ರದ ಅನರ್ಘ್ಯ ಮುತ್ತಾಗಿ ಕನ್ನಡ ಚಲನಚಿತ್ರರಂಗವನ್ನು ದೈದೀಪ್ಯಮಾನವಾಗಿ ಬೆಳಗಿಸಿದ ಮಹಾನ್ ಸಾಧಕ.

ಡಾ|| ರಾಜ್‌ಕುಮಾರ್ ಅವರಿಗೆ ಕಲೆ ಬಂದದದು ಆಕಸ್ಮಿಕವಾಗಿ ಅಲ್ಲ, ಅನುವಂಶಿಕವಾಗಿ, ತಂದೆ ಸಿಂಗನಲ್ಲೂರು ಪುಟ್ಟಸ್ವಾಮಯ್ಯ ರಂಗಭೂಮಿಯ ಮಹಾನ್ ನಟರು.

ಆಜಾನುಬಾಹು ವ್ಯಕ್ತಿತ್ವದ, ಕಂಚಿನಕಂಠದ ಶ್ರೀ ಪುಟ್ಟಸ್ವಾಮಯ್ಯನವರ ಅಚ್ಚುಮೆಚ್ಚಿನ ಮಗ ಮುತ್ತುರಾಜ್. ತಂದೆಗೆ ಹಿರಿಯ ಮಗನಾದ ರಾಜ್‌ಕುಮಾರ್ ಇದೇ ಕನ್ನಡ ಚಲನಚಿತ್ರರಂಗಕ್ಕೆ ಹಿರಿಯ ಮಗನಾಗಿ ಬೆಳೆದದ್ದು ಒಂದು ಸಂತಸದ ವಿಷಯ.

ಮಹಾನ್ ರಂಗಭೂಮಿ ನಟರಾದ ಶ್ರೀ ಸುಬ್ಬಯ್ಯನಾಯ್ಡು ಅವರ ನಾಟಕ ಮಂಡಳಿಯಲ್ಲಿ ಸಿಕ್ಕ ಅವಕಾಶಗಳು ರಾಜ್‌ಕುಮಾರರ ಪಾಲಿಗೆ ಭಾಗ್ಯದ ಬಾಗಿಲನ್ನೇ ತೆರೆಯಿತು. ವಿಶೇಷವಾಗಿ ಭಕ್ತಿಪ್ರಧಾನವಾದ ಪೌರಾಣಿಕ ಪಾತ್ರಗಳಲ್ಲಿ ರಂಗಭೂಮಿಯ ಮೇಲೆ ವಿಜೃಂಭಿಸಿದ ರಾಜ್‌ಕುಮಾರ್ ಅವರ ಮಹಾನ್ ಪ್ರತಿಭೆ ಕನ್ನಡಚಲನಚಿತ್ರ ರಂಗಕ್ಕೆ ಕಾಲಿಟ್ಟಿದ್ದು ಕನ್ನಡ ಚಲನಚಿತ್ರ ರಂಗದ ಸೌಭಾಗ್ಯ. ಬೇಡರ ಕಣ್ಣಪ್ಪ ಚಿತ್ರದ ಕಣ್ಣಪ್ಪನ ಪಾತ್ರದಲ್ಲಿ ತನ್ನ ವಿಶಿಷ್ಟ ಭಾವಾಭಿನಯದಿಂದ ಮಿಂಚಿದ ರಾಜ್‌ಕುಮಾರ್ ಅವರು ಕನ್ನಡ ಚಲನಚಿತ್ರರಂಗಕ್ಕೆ ಕಣ್ಣಾದರು. ತಮ್ಮ ಅಭಿನಯದ ಮೂಲಕ ಈ ಚಿತ್ರಕ್ಕೆ ಪ್ರಪ್ರಥಮವಾಗಿ ಕೇಂದ್ರ ಸರ್ಕಾರದಿಂದ ಪ್ರಶಸ್ತಿ ದೊರಕಿಸಿಕೊಟ್ಟ ಹೆಮ್ಮೆಗೆ ಪಾತ್ರರಾದರು.

ಭಕ್ತಿಪ್ರಧಾನವಾದ, ಪೌರಾಣಿಕ ಹಾಗೂ ಐತಿಹಾಸಿಕ ಚಿತ್ರಗಳಿಗೆ ಹೇಳಿ ಮಾಡಿಸಿದಂತಹ ದೇಹ ದಾರ್ಢ್ಯತೆ, ಅಂಗಸೌಷ್ಠವ ಹಾಗು ಕಂಠಸಿರಿ ಅವರದಾಗಿತ್ತು. ಅನಂತರ ಸಾಮಾಜಿಕ ಚಿತ್ರಗಳಿಗೂ ತಮ್ಮ ಅಭಿನಯದ ಸ್ಪರ್ಶ ನೀಡಿದ ರಾಜ್‌ಕುಮಾರ್ ಅವರು ಆನಂತರ ಹಿಂದೆ ತಿರುಗಿ ನೋಡಲೇ ಇಲ್ಲ. ಒಂದಾದ ಮೇಲೊಂದರಂತೆ ಪೌರಾಣಿಕ, ಸಾಮಾಜಿಕ, ಸಾಹಸಮಯ ಐತಿಹಾಸಿಕ, ಭಕ್ತಿಪ್ರಧಾನ ಮುಂತಾದ ವಿಭಿನ್ನ ಪಾತ್ರಗಳಲ್ಲಿ ತಮ್ಮ ವಿಶಿಷ್ಟ ಅಭಿನಯ ಸಾಮರ್ಥ್ಯದಿಂದ ಕನ್ನಡಿಗರನ್ನು ಐದು ದಶಕಗಳ

ಕಾಲ ರಂಜಿಸಿದ ಮಹಾನ್ ಕಲಾತಪಸ್ವಿ ಡಾ॥ ರಾಜ್‌ಕುಮಾರ್. ಪತ್ತೇದಾರಿ ಚಿತ್ರಗಳಲ್ಲಿ, ವಿಶಿಷ್ಟವಾದ ಕಾದಂಬರಿ ಆಧಾರಿತ ಚಿತ್ರಗಳಲ್ಲಿನ ಅವರ ಅಭಿನಯ ಚಿರಕಾಲ ಶಾಶ್ವತವಾಗಿ ಉಳಿಯುವಂತಹುದು.

ರಾಜ್‌ಕುಮಾರ್ ಒಬ್ಬ ಮಹಾನ್ ಮಾನವತಾವಾದಿಯಾಗಿ ಭ್ರಾತೃತ್ವದ ಭಾವ ಗೀತೆಯನ್ನು ಹಾಡಿದ ಭಾವಜೀವಿ. ರಾಜ್‌ಕುಮಾರ್ ಅವರು ಕೇವಲ ಒಬ್ಬ ನಟರಾಗಿ ಕನ್ನಡದ ಜನತೆಯ ಪ್ರೀತಿಗೆ ಪಾತ್ರರಾದವರಲ್ಲ.

ಇವನಾರವ ಇವನಾರವ ಇವನಾರವ
ಎನ್ನದಿರಯ್ಯ, ಇವ ನಮ್ಮವ ಇವ ನಮ್ಮವ
ಇವ ನಮ್ಮವ ಎಂದೆನಿಸಯ್ಯ

ಎಂಬ ಬಸವಣ್ಣನವರ ಸಂದೇಶವನ್ನು ಚಾಚೂ ತಪ್ಪದೆ ತಮ್ಮ ಜೀವನದಲ್ಲಿ ಅಳವಡಿಸಿಕೊಂಡರು. ಎಲ್ಲರನ್ನೂ ಅಪ್ಪಿಕೊಂಡವರು. ಎಲ್ಲರನ್ನೂ ಸಮಾನವಾಗಿ ಪ್ರೀತಿಸಿದವರು.

ಅಭಿನಯ ಕಲೆಯನ್ನು ಲೀಲಾಜಾಲವಾಗಿ ತನ್ನದಾಗಿಸಿಕೊಂಡಿದ್ದ ಅವರು ಅತ್ಯುತ್ತಮ ಹಾಡುಗಾರರಾಗಿ, ಹಿನ್ನೆಲೆಗಾಯಕರಾಗಿ, ರಾಷ್ಟ್ರ ಮಟ್ಟದ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದು ಸಾಹಿತ್ಯ, ಸಂಗೀತ, ಕಲೆಗಳ ಬಗ್ಗೆ ಅವರಿಗಿದ್ದ ಅನನ್ಯವಾದ ಆಸಕ್ತಿ ಹಾಗೂ ಆ ಬಗ್ಗೆ ಅವರು ನಡೆಸಿದ ತಪಸ್ಸಿನ ಸಂಕೇತವಾಗಿದೆ. ಚಿತ್ರಗಳಲ್ಲಿ ಸಂಭಾಷಣೆಯನ್ನು ಹೇಗೆ ಅಭಿವ್ಯಕ್ತಿ ಗೊಳಿಸಬೇಕು ಎಂಬುದಕ್ಕೆ ಅವರು ಮಾದರಿಯಂತಿದ್ದರು. ಸಂಭಾಷಣೆ ಯಲ್ಲಿ ದೃಢತೆ, ಸ್ಪಷ್ಟತೆ, ಖಚಿತತೆ ಅವರ ಆತ್ಮ ವಿಶ್ವಾಸದ ದ್ಯೋತಕವಾಗಿತ್ತು. ಕಲಾವಿದರುಗಳಿಗೆ ರಾಜ್‌ಕುಮಾರ್ ಒಂದು ಆದರ್ಶ ಮಾದರಿ ನಟರಾಗಿ, ಕನ್ನಡ ಚಲನಚಿತ್ರ ರಂಗದ ಉದ್ದಕ್ಕೂ ಸ್ಥಾಯಿಯಾಗಿ ನಿಲ್ಲುತ್ತಾರೆ. ಡಾ॥ ರಾಜ್‌ಕುಮಾರ್ ಅವರು ಬದುಕು ಬಹು ಮುಖ ಪ್ರತಿಭೆಯದ್ದು. ಅವರು ಕೇವಲ ಒಬ್ಬ ನಟರಾಗಿ ಚಿತ್ರರಂಗಕ್ಕೆ ತಮ್ಮ ಕರ್ತವ್ಯ ವ್ಯಾಪ್ತಿಯನ್ನು ಸೀಮಿತಗೊಳಿಸಿಕೊಂಡವರಲ್ಲ ನಾಡುನುಡಿಗೆ ಆತಂಕ ಬಂದಾಗಲೆಲ್ಲ ಆ ಬಗ್ಗೆ ಸ್ಪಂದಿಸಿದವರು. ಗೋಕಾಕ್ ಚಳುವಳಿಯಲ್ಲಿ ಅವರ ಪಾತ್ರವಂತೂ ಅದ್ಭುತ. ಗೋಕಾಕ್ ಚಳುವಳಿಗೆ ನಾಡು ನುಡಿಯ ಅಭಿಮಾನದ ಕಾವು ನಿಜವಾದ ಅರ್ಥದಲ್ಲಿ ಬಂದದ್ದೇ ಚಳುವಳಿಗೆ ರಾಜ್‌ಕುಮಾರ್ ಪ್ರವೇಶ ಮಾಡಿದ್ದರಿಂದ ಎಂಬುದು ಅತಿಶಯೋಕ್ತಿಯ ಮಾತಲ್ಲ

ಡಾ॥ ರಾಜ್‌ಕುಮಾರ್ ಅವರು ನಾಡಿನ ಸಾಮಾಜಿಕ ಸೇವೆಯಲ್ಲಿಯೂ ಇತರರಿಗೆ ಮಾದರಿಯಂತೆ ಬಾಳಿದವರು. ಹಲವಾರು ಧಾರ್ಮಿಕ ಸಾಮಾಜಿಕ ಸೇವಾ ಸಂಸ್ಥೆಗಳಿಗೆ ತಮ್ಮ ಸಂಗೀತ ಕಾರ್ಯಕ್ರಮಗಳ ಮೂಲಕ ಕೊಟ್ಯಾಂತರ ರೂಪಾಯಿ ಸಂಗ್ರಹಿಸಿಕೊಟ್ಟ ಮಹಾನ್ ಸೇವಾ ರತ್ನ ಉತ್ತಮ ಕಾರ್ಯೋದ್ದೇಶಗಳಿಂದ ಕಾರ್ಯ ನಿರ್ವಹಿಸುವ ಸೇವಾ ಸಂಸ್ಥೆಗಳಿಗೆ ಡಾ॥ ರಾಜ್‌ಕುಮಾರ್ ಆಶಾಕಿರಣವಾಗಿದ್ದರು. ಅವರ ಸಂಗೀತ ಸಂಜೆ ಒಂದು ಭವ್ಯವಾದ ನಾದ ಪ್ರಪಂಚವನ್ನೇ ಸೃಷ್ಟಿ ಮಾಡುತ್ತಿತ್ತು. ಅವರೊಬ್ಬನಾದ ಯೋಗಿ, ನಾದಬ್ರಹ್ಮ ಡಾ॥ ರಾಜ್‌ಕುಮಾರ್ ಅವರ ಸಾಧನೆಗೆ ಸಂದ ಪ್ರಶಸ್ತಿಗಳು, ಮನ್ನಣೆಗಳು ಯಾವುದೇ ಕ್ಷೇತ್ರದಲ್ಲಿನ ಕನ್ನಡ ಸಾಧಕನಿಗೆ ಇದುವರೆಗೂ ಸಂದಿಲ್ಲ ಎಂಬುದು ಅಕ್ಷರಶಃ ಸತ್ಯ.

ಅತ್ಯುತ್ತಮ ನಟ ಪ್ರಶಸ್ತಿಯನ್ನು ಹಲವಾರು ಬಾರಿ ಪಡೆದುಕೊಂಡ ಅವರು ತಮ್ಮ ಅಭಿನಯದ ಮೂಲಕ ನಟಿಸಿದ ಎಲ್ಲಾ ಚಿತ್ರಗಳಿಗು ಒಂದು ವಿಶೇಷ ಮೆರುಗನ್ನು ತಂದುಕೊಟ್ಟ ಮಹಾನ್ ಸಾಧಕ. ರಾಜ್ಯ ಮಟ್ಟದ ಶ್ರೇಷ್ಠ ಹಿನ್ನೆಲೆ ಗಾಯಕ ಪ್ರಶಸ್ತಿಯನ್ನು

ಹಲವಾರು ಬಾರಿ ಪಡೆದುಕೊಂಡ ಅವರಿಗೆ ಜೀವನ ಚೈತ್ರ ಚಿತ್ರದಲ್ಲಿನ ''ನಾದಮಯ ಈ ಲೋಕವೆಲ್ಲ'' ಎಂಬ ಹಾಡಿಗಾಗಿ ಕೇಂದ್ರ ಸರ್ಕಾರದ ಶ್ರೇಷ್ಠ

ಗಾಯಕ ಪ್ರಶಸ್ತಿ ದೊರೆತಿದ್ದು ಅವರ ಗಾಯನ ಸಾಧನೆಗೆ ಹಿಡಿದ ಕನ್ನಡಿ. ರಾಜ್‌ಕುಮಾರ್ ಅವರಿಗೆ ಸಾರ್ವಜನಿಕರಿಂದ, ಕನ್ನಡ ಕಲಾಭಿ ಮಾನಿಗಳಿಂದ ದೊರೆತ ನಾಗರೀಕ ಸನ್ಮಾನ ಮನ್ನಣೆಗಳಂತೂ ಅಪೂರ್ವ, ಅದ್ವಿತೀಯ ಹಾಗೂ ಅನನ್ಯ.

ಡಾ॥ ರಾಜ್‌ಕುಮಾರ್ ಅವರದು ಒಂದು ಯೋಗಿಯ ಬದುಕು. ಸ್ಥಿತಪ್ರಜ್ಞತೆಯ ಜೀವನ, ಸೌಜನ್ಯತೆಯ ಬಾಳು. ನರಹಂತಕ ವೀರಪ್ಪನ್ ರಾಜ್‌ಕುಮಾರ್ ಅವರನ್ನು ಅಪಹರಿಸಿದಾಗ ಇಡೀ ಕರ್ನಾಟಕವೇ ತಲ್ಲಣಿಸಿತು. ಕನ್ನಡಿಗರು ದಿಗ್ಭ್ರಾಂತರಾದರು, ಆದರೆ ರಾಜ್‌ಕುಮಾರ್ ಮಾತ್ರ ಸ್ಥಿತಪ್ರಜ್ಞರಾಗಿಯೇ ಉಳಿದರು. ನಾಡಿನ ಜನತೆಗೆ ಅವರ ಅಪಹರಣ ಕಾಲದಲ್ಲಿ ಕಾಡಿನಿಂದ ಅವರು

ಕಳುಹಿಸುತ್ತಿದ್ದ ಅನೇಕ ಸಂದೇಶಗಳು, ಅವರ ಆತ್ಮ ಸ್ಥೈರ್ಯ, ಜೀವನ ದೃಷ್ಟಿಯ ಸಂಕೇತವಾಗಿದ್ದವು. ಅವರೆಂದೂ ಅಧೀರರಾಗಿ ಕಾಣಲೇ ಇಲ್ಲ, ಬದಲಿಗೆ ಅವರು ಇಡೀ ಕನ್ನಡನಾಡಿನ ಸ್ವಾಭಿಮಾನದ ಸಂಕೇತವಾಗಿ ಅಧೀರರಾದ ಕನ್ನಡ ಜನತೆಗೆ ಧೈರ್ಯ ತುಂಬುವ ಕಾರ್ಯ ಮಾಡುವ ಮೂಲಕ ತಮ್ಮ ಧೀಮಂತ ವ್ಯಕ್ತಿತ್ವವನ್ನು ಮೆರೆದರು.

ಡಾ॥ ರಾಜ್‌ಕುಮಾರ್ ಅವರ ಸಾಧನೆಗೆ ಒತ್ತುಕೊಟ್ಟ ಸ್ಫೂರ್ತಿದೇವತೆ ಅವರ ಧರ್ಮಪತ್ನಿ ಶ್ರೀಮತಿ ಪಾರ್ವತಮ್ಮನವರು. ತಮ್ಮ ಪತಿಯ ಕಲಾಸೇವೆ, ಸಾರ್ವಜನಿಕ ಸೇವೆಗೆ ಸದಾಕಾಲ ಚೈತನ್ಯ ತುಂಬುತ್ತಾ ಬಂದ ಒಬ್ಬ ಧೀಮಂತ ಮಹಿಳೆ ಪಾರ್ವತಮ್ಮನವರು.

ತಮ್ಮ ಮಕ್ಕಳು ರಾಜ್‌ಕುಮಾರ್‌ರವರ ಕಲಾ ಸಾಮರ್ಥ್ಯವನ್ನು ರೂಢಿಸಿಕೊಳ್ಳುವ ದಿಸೆಯಲ್ಲಿ ದಾರಿದೀಪ ಆದ ಅವರು ಪತಿಗೆ ಸದಾಕಾಲ ನೆರಳಿನಂತೆ ಇದ್ದವರು.

ಹಲವಾರು ಸಲ ಡಾ॥ ರಾಜ್‌ಕುಮಾರ್ ಅವರನ್ನು ಭೇಟಿ ಮಾಡುವ ಸೌಭಾಗ್ಯ ನನ್ನಪಾಲಿಗೆ ಬಂದಿತ್ತು. ಅವರನ್ನು ಕಂಡಾಗಲೆಲ್ಲ ಹಾಗೂ ಅವರ ಬಳಿ ಸಂಭಾಷಣೆಗೆ ಕುಳಿತಾಗಲೆಲ್ಲ ಒಬ್ಬ ಸಂತನ ಜೊತೆಯಲ್ಲಿ ಸಂವಾದಿಸುತ್ತಿದ್ದ ದಿವ್ಯಾನುಭವ ನನಗಾಗುತ್ತಿತ್ತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕನಾಗಿದ್ದಾಗ ಹಾಗೂ ಚಿ. ಉದಯ ಶಂಕರ್ ಪ್ರಶಸ್ತಿ ಸಮಿತಿಯ ಕಾರ್ಯಾಧ್ಯಕ್ಷನಾಗಿ ಅವರನ್ನು ಭೇಟಿ ಮಾಡಿದ ಸಂದರ್ಭಗಳಲ್ಲಿ ಅವರು ನಾಡುನುಡಿಯ ಬಗ್ಗೆ ಆಡಿದ ಮಾತುಗಳು ಚಿರಸ್ಮರಣೀಯವಾದುದು.

♦♦♦♦♦



ಅಲ್ಲಿಂದ ಇಲ್ಲಿವರೆಗೆ

- ಎಂ.ಎ. ವೆಂಕಟೇಶ್
ಎನ್ ಆನಂದರಾಮ ರಾವ್

1929, ಏಪ್ರಿಲ್ 24. ಅಂದು ಮರ್ಯಾದಾ ಪುರುಷೋತ್ತಮ, ಭಾರತೀಯರ ಆರಾಧ್ಯದೈವ ಶ್ರೀರಾಮಚಂದ್ರನ ಜನುಮದಿನ - ಶ್ರೀರಾಮ ನವಮಿ. ಆ ದಿನವೇ ಕನ್ನಡ ಚಿತ್ರರಂಗದ ಧ್ರುವತಾರೆಯೆನಿಸಿದ ಕನ್ನಡ ಕುಲಕೋಟಿಯ ಆರಾಧ್ಯಪುರುಷನಾದ ರಾಜ್‌ಕುಮಾರ್ ಜನಿಸಿದ್ದು.

ಕನ್ನಡ ರಂಗಭೂಮಿಯ 'ದೈತ್ಯ ಪ್ರತಿಭೆ' ಎನಿಸಿದ ಸಿಂಗಾನಲ್ಲೂರು ಪುಟ್ಟಸ್ವಾಮಯ್ಯ ಮತ್ತು ಲಕ್ಷ್ಮಮ್ಮ ದಂಪತಿಗಳ ತಪಸ್ಸಿನ ಫಲವಾಗಿ, ಮುತ್ತತ್ತಿರಾಯನ ವರಪ್ರಸಾದದಿಂದ ಹುಟ್ಟಿದ ಮಗುವಿಗೆ ಮುತ್ತುರಾಜ್ ಎಂದೇ ನಾಮಕರಣ ಮಾಡಲಾಯಿತು. 'ಕನ್ನಡ ಕುಲಪುಂಗವ'ನಾದ ಹನುಮನ ಆಶೀರ್ವಾದ ಫಲದಿಂದ ಜನಿಸಿದ ಈ ಮುತ್ತುರಾಜ್, ಮುಂದೆ ರಾಜಕುಮಾರನಾಗಿ ಕನ್ನಡ ನಾಡಿನ ಉದ್ದಗಲಕ್ಕೂ ತನ್ನ ಪ್ರಭಾವವನ್ನಲ್ಲಿ ಬೀರಿ ಕನ್ನಡಿಗರ ಮನ-ಮನೆಗಳನ್ನು ಸೂರೆಗೊಂಡು ತ್ರಿವಿಕ್ರಮನಾಗಿ ಬೆಳೆದದ್ದು, ಕನ್ನಡ ಚಿತ್ರರಂಗದ ಅನಭಿಷಿಕ್ತ ದೊರೆ ಎನಿಸಿದ್ದು, ಕನ್ನಡ ನಾಡು ನುಡಿಗಳಿಗೆ ತನ್ನ ಸೇವೆಯನ್ನು ಮುಡಿಪಾಗಿಟ್ಟಿದ್ದು ಎಲ್ಲಾ ಈಗ ಇತಿಹಾಸ.

ಕುಟುಂಬದ ನಾಲ್ಕು ಮಕ್ಕಳಲ್ಲಿ ಮುತ್ತುರಾಜ ಹಿರಿಯನಾದರೆ, ಉಳಿದ ಮೂವರು ಕ್ರಮವಾಗಿ ನಾಗಮ್ಮ (ಸೋದರಿ) ವರದಪ್ಪ, ಕೊನೆಯದಾಗಿ ಶಾರದಮ್ಮ. ಶಾರದಮ್ಮನ ನಂತರ ಹುಟ್ಟಿದ ಗೋವಿಂದರಾಜು, ಹುಟ್ಟಿದ ಒಂದೂವರೆ ವರ್ಷದ ನಂತರ ಹೋಗಿಬಿಟ್ಟ.

ಈ ನಾಲ್ಕು ಸಹೋದರ ಸಹೋದರಿಯರು ದೇಹ ಬೇರೆ ಆತ್ಮ ಒಂದೇ ಎನ್ನುವಂತೆ ಬೆಳೆದರು.

ತಂದೆ ಪುಟ್ಟಸ್ವಾಮಯ್ಯವರು, ಸುಬ್ಬಯ್ಯನಾಯ್ಡು ಕಂಪನಿಯಲ್ಲಿ ಪಾತ್ರ ಮಾಡುತ್ತಿದ್ದಾಗ ಮಕ್ಕಳೆಲ್ಲ ಅವರ ಜೊತೆಯಲ್ಲಿ ಹೋಗುತ್ತಿದ್ದರು. ಆಗಾಗ ಕ್ಯಾಂಪು ಬದಲಾಗುತ್ತಿದ್ದುದರಿಂದ ಶಾಲೆಗೆ ಸೇರಿ ಒಂದೇ ಕಡೆ ಓದಲು ಆಗುತ್ತಿರಲಿಲ್ಲ.

ಮುತ್ತುರಾಜ್ ಸಹ ಅಪ್ಪನ ಜೊತೆಯಲ್ಲಿ ಸುಬ್ಬಯ್ಯನಾಯ್ಡು ಕಂಪನಿಯಲ್ಲಿ ಪಾತ್ರ ಮಾಡುತ್ತಿದ್ದರು. ತಮ್ಮ-ತಂಗಿಯರಾದ ಶಾರದಮ್ಮ, ವರದಪ್ಪ ಕೂಡ ಅಭಿನಯದಲ್ಲಿ ತೊಡಗಿಕೊಳ್ಳುತ್ತಿದ್ದರು.

ಮುತ್ತುರಾಜ್ ಶಾಲೆಯಲ್ಲಿ ಕಲಿತದ್ದು ಕೇವಲ ನಾಲ್ಕನೇ ತರಗತಿಯವರಿಗೆ ಮಾತ್ರ. ಆದರೆ ಅವರ ಮುಂದಿನ ಶಾಲೆ-ಕಲಾಶಾಲೆ-ರಂಗಭೂಮಿಯೇ ಆಯಿತು. ನಾಟಕ ಕಲಿಸುವ ಮೇಷ್ಟ್ರುಗಳೇ ಅವರಿಗೆ ಗುರುಗಳಾದರು. ನಾಟಕ ರಂಗದ ದಿಗ್ಗಜರಾದ ಗುಬ್ಬಿವೀರಣ್ಣ, ಸುಬ್ಬಯ್ಯನಾಯ್ಡು ಅಂತಹವರ ಗರಡಿಯಲ್ಲಿ ಪಳಗಿದರು. ಕಲೆಯನ್ನೇ ಕಾಯಕ ಮಾಡಿಕೊಂಡಿದ್ದ ತಂದೆ ಪುಟ್ಟಸ್ವಾಮಯ್ಯನವರಿಗೆ ತಮ್ಮ ಮಕ್ಕಳು ಕಲಾವಿದರಾಗಬೇಕೆಂಬ ಹೆಬ್ಬಯಕೆಯಿತ್ತು. ಅದರಂತೆ ಮೂವರೂ ಮಕ್ಕಳು- ಮುತ್ತುರಾಜ್, ಶಾರದಮ್ಮ, ವರದಪ್ಪ - ಅಭಿನಯ ರಂಗಕ್ಕಿಳಿದರು. ಮುತ್ತುರಾಜ್ ಎತ್ತರದ ಸ್ಥಾನವೇರಿದರು-ಯಾರೂ ಊಹಿಸದ ರೀತಿಯಲ್ಲಿ ತಂದೆಯವರ ನಿರೀಕ್ಷೆಯನ್ನು ಮೀರಿ ಬೆಳೆದರು.

ಮುತ್ತುರಾಜ್ ರಾಜ್‌ಕುಮಾರ್ ಆಗಿದ್ದು

ಮುತ್ತುರಾಜ್ ರಂಗಭೂಮಿಯಲ್ಲಿ ಪಾತ್ರಧಾರಿಯಾಗಿ ಅಭಿನಯವನ್ನು ಕಾಯಕ ಮಾಡಿಕೊಂಡಿರುವಾಗಲೇ ಅವರ ಸಂಬಂಧಿಯೇ ಆದ ಅಪ್ಪಾಜಿಗೌಡರ ಮಗಳು ಪಾರ್ವತಿಯನ್ನು ವಿವಾಹವಾದರು. ಈ ಸಂಬಂಧಕ್ಕೆ ಅವರ ತಂದೆಯವರು ಅಪ್ಪಾಜಿಗೌಡರ ಹತ್ತಿರ "ನಿನ್ನ ಮಗಳನ್ನೇ ನಮ್ಮ ಮುತ್ತುರಾಜನಿಗೆ ಕೊಟ್ಟು

ವಿವಾಹ ಮಾಡಿಕೊಡಬೇಕು" ಎಂದು ಮಾತು ತೆಗೆದುಕೊಂಡಿದ್ದರಂತೆ. ಹಾಗಾಗಿ ಮುತ್ತುರಾಜುವಿನ ಮಡದಿಯಾಗಿ ಪಾರ್ವತಿ ಅವರ ಮನೆ ತುಂಬಿಕೊಂಡರು. ಆಗ ಮುತ್ತುರಾಜುವಿಗೆ 24 ವರ್ಷವಾದರೆ ಪಾರ್ವತಿಗೆ 14 ವರ್ಷ.

ನಾಟಕ ಕಂಪನಿಯಲ್ಲಿರುವಾಗ, 1954ರಲ್ಲಿ, ಅವರಿಗೊಂದು ರಿಜಿಸ್ಟರ್ಡ್ ಕಾಗದ ಬಂತು. ನಾಟಕ ಕಂಪನಿಯ ಮ್ಯಾನೇಜರ್ ಸೀತಾರಾಮಯ್ಯ ಕಾಗದ ತಂದಿದ್ದು, ಅವರೇ ಅದನ್ನು ಓದಿದರು. ಆ ಪತ್ರ ಅವರ ಭಾಗ್ಯದ ಬಾಗಿಲನ್ನೇ ತೆರೆಯುವುದೆಂದು ಯಾರು ನಿರೀಕ್ಷಿಸಿದ್ದರು?

ಮದ್ರಾಸಿನಲ್ಲಿ ತಯಾರಾಗುತ್ತಿದ್ದ "ಬೇಡರ ಕಣ್ಣಪ್ಪ" ಚಿತ್ರದಲ್ಲಿ ಅಭಿನಯಿಸಲು ಕರೆ ಬಂದಿದ್ದು, ಮೂವಿ ಟೆಸ್ಟ್‌ಗಾಗಿ ಮದರಾಸಿಗೆ ಬರುವಂತೆ ಕರೆ ಕಳುಹಿಸಲಾಗಿತ್ತು. ಆಗ ರಾಜ್ ತಾಯಿಯವರು, ತಮ್ಮ ಯಜಮಾನರು ಪಾರ್ವತಮ್ಮವರನ್ನು "ಅದೃಷ್ಟಲಕ್ಷ್ಮಿ ಮದುವೆಯಾದ ನಂತರ ಮಗನ ದೆಸೆಯೇ ಬದಲಾಗುತ್ತದೆ" ಎಂದು ಹೇಳಿದುದನ್ನು ನೆನೆಯುತ್ತ "ನಿಜವಾಗಿಯೂ ನಿನಗೆ ಸಿನಿಮಾದಲ್ಲಿ ಅವಕಾಶ ಸಿಗುತ್ತದೆ ಹೋಗಿಬಾ" ಎಂದು ಆಶೀರ್ವದಿಸಿದರು. ಅದರಂತೆ ಮುತ್ತುರಾಜ್ ಮದರಾಸಿಗೆ ಹೋಗಿ ಆ ಟೆಸ್ಟ್‌ನಲ್ಲಿ ಯಾವ ಅಳುಕೂ ಇಲ್ಲದೆ ಅಭಿನಯಿಸಿ ಚಿತ್ರಕ್ಕೆ ಆಯ್ಕೆಯಾದರು. ಆ ಚಿತ್ರದ ನಿರ್ದೇಶಕರೇ ಹೆಚ್.ಎಲ್.ಎನ್. ಸಿಂಹ.

ಅಂದು ಚಿತ್ರ ಕಲಾವಿದರಿಗೆ ನೀಡುತ್ತಿದ್ದುದು ತಿಂಗಳ ಸಂಭಾವನೆ. ಮುತ್ತುರಾಜ್‌ಗೆ ತಿಂಗಳೊಂದಕ್ಕೆ ಮುನ್ನೂರು ರೂಪಾಯಿಗಳ ಸಂಬಳದಂತೆ ನಿಗದಿ ಮಾಡಲಾಯಿತು. ಮುಂಗಡವಾಗಿ ಮೂರು ತಿಂಗಳ ಸಂಬಳ 900 ರೂಗಳನ್ನು ಪಡೆದ ಮುತ್ತುರಾಜ್ ಸುಬ್ಬಯ್ಯನಾಯ್ಡು ಕಂಪನಿಗೆ ವಿದಾಯ ಹೇಳಿ ಅವರ ಆಶೀರ್ವಾದ ಪಡೆದು ಮದ್ರಾಸಿಗೆ ತೆರಳಿದದರು.

ನಿರ್ದೇಶಕ ಹೆಚ್.ಎಲ್.ಎನ್. ಸಿಂಹರವರ ಆಯ್ಕೆಯಾಗಿದ್ದ ಮುತ್ತುರಾಜನಿಗೆ ಸಿಂಹರವರೇ **'ರಾಜ್‌ಕುಮಾರ್'** ಎಂದು ನಾಮಕರಣ ಮಾಡಿದರು. ಈ ರಾಜಕುಮಾರನೇ ಪ್ರಥಮವಾಗಿ ನಟಿಸಿದ "ಬೇಡರ ಕಣ್ಣಪ್ಪ" ಕನ್ನಡದಲ್ಲಿ ಪ್ರಥಮವಾಗಿ ಶತದಿನೋತ್ಸವವನ್ನು ಆಚರಿಸಿದ್ದು ಕಾಕತಾಳೀಯ.

ಮುತ್ತುರಾಜ್ ರಾಜಕುಮಾರನಾಗಿ ರೂಪುಗೊಂಡು ಕನ್ನಡನಾಡಿನ ಮನೆಮನಗಳ ರಾಜಕುಮಾರನಾಗಿ, ಕನ್ನಡ ಚಿತ್ರರಂಗದ ತ್ರಿವಿಕ್ರಮನಾಗಿ ಬೆಳೆದಿದ್ದು ಈಗ ಎಲ್ಲರೂ ತಿಳಿದದ್ದೇ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ರಾಜ್‌ರವರ ಪ್ರಥಮ ಚಿತ್ರ ಬೇಡರ ಕಣ್ಣಪ್ಪದಿಂದ 100ನೇ ಚಿತ್ರದವರೆಗೂ ಹೆಚ್ಚು ಆಸೆ ಪಡದೆ ಅಲ್ಪ ಆದಾಯದಲ್ಲೇ ತೃಪ್ತರಾಗಿದ್ದರು.

1954ರಲ್ಲಿ ರಾಜ್ ಚಿತ್ರರಂಗ ಪ್ರವೇಶಿಸಿದ್ದು. ಅದಾದ ಎರಡು ವರ್ಷಗಳ ನಂತರ ಅಂದರೆ 1956ರಲ್ಲಿ ರಾಜ್ಯಗಳ ಪುನರ್ವಿಂಗಡನೆಯಾಯಿತು. ದಕ್ಷಿಣ ಭಾರತದ ಪ್ರತಿಯೊಂದು ಭಾಷೆಗೂ ಆಯಾ ಭಾಷೆಯ ಭಾವನಾತ್ಮಕತೆಯ ಸಂಕೇತವಾಗಿ ಜನರ ಮನಸ್ಸಿನಲ್ಲಿ, ಒಬ್ಬೊಬ್ಬರು, ಬಿಂಬಿಸತೊಡಗಿದರು ಹಾಗೆ ಕನ್ನಡ ಭಾಷೆಗೆ ದಕ್ಕಿದವರೇ ರಾಜಕುಮಾರ್.

ರಾಜಕುಮಾರ್ ಅವರೊಂದಿಗೆ ಕನ್ನಡ ಚಿತ್ರರಂಗವನ್ನು ಪ್ರವೇಶಿಸಿದವರೆಂದರೆ ಉದಯಕುಮಾರ್ ಮತ್ತು ಕಲ್ಯಾಣ್‌ಕುಮಾರ್. "ಭಾಗ್ಯೋದಯ"ದ ಮೂಲಕ ಉದಯಕುಮಾರ್, "ನಟಶೇಖರ"ದ ಮೂಲಕ ಕಲ್ಯಾಣಕುಮಾರ್ ಚಿತ್ರರಂಗದ ನಂಟನ್ನು ಬೆಳೆಸಿಕೊಂಡು 'ಕುಮಾರತ್ರಯ'ರಾಗಿ ಕನ್ನಡ ಚಿತ್ರರಂಗದಲ್ಲಿ ರಾರಾಜಿಸತೊಡಗಿದರು. ಆದರೆ ಅವರಿಬ್ಬರೂ, ಕನ್ನಡದ ಜೊತೆಜೊತೆಗೇ, ಇತರ ಭಾಷೆಗಳ ಚಿತ್ರಗಳಲ್ಲಿಯೂ ಅಭಿನಯಸತೊಡಗಿದರು. ಆದರೆ ರಾಜ್‌ಕುಮಾರ್ ಮಾತ್ರ ಕನ್ನಡ ಚಿತ್ರರಂಗವನ್ನು ಬಿಟ್ಟು ಹೋಗದೇ ಇಲ್ಲಿಗೇ ಭದ್ರವಾಗಿ ಸ್ಥಿರವಾಗಿ ನಿಂತರು.

ರಾಜ್‌ಕುಮಾರ್ ಅವರ ನಟನಾ ಸಾಮರ್ಥ್ಯ

ರಾಜಕುಮಾರ್ ಅವರ ಜೀವನವೊಂದು ಸುಮಧುರ ಕಾವ್ಯ. ಅದನ್ನು ಮಹಾಕಾವ್ಯವೆಂದೂ ಕರೆಯಬಹುದು. ಅವರ ಎಲ್ಲಾ ಪಾತ್ರಗಳು ಉತ್ತುಂಗಮಟ್ಟದ್ದೆಂದು ಹೇಳಬಹುದು.

"ಬೇಡರ ಕಣ್ಣಪ್ಪ" ಚಿತ್ರದಿಂದ ಆರಂಭವಾದ ನಟನೆ, 'ಶಬ್ಧವೇದಿ'ಯವರೆಗೂ ನಿರಂತರವಾಗಿ ನಡೆದುಕೊಂಡು ಬಂದಿತು. ಸುಮಾರು ಐದು ದಶಕಗಳ ಅವಧಿಯಲ್ಲಿ ಅವರು ನಟಿಸಿದ ಚಿತ್ರಗಳ ಸಂಖ್ಯೆ 208. ಈ ಎಲ್ಲಾ ಚಿತ್ರಗಳಲ್ಲಿಯೂ ಕಾಣುತ್ತಿದ್ದುದು ಅವರ ಸದಭಿರುಚಿ. ಅವರು ಯಾವುದೇ ಚಿತ್ರದಲ್ಲಿ ಅಭಿನಯಿಸಿದರೂ ಪ್ರೇಕ್ಷರಿಗೆ ಬಹು ಆಪ್ಯಾಯಮಾನವಾಗುತ್ತಿತ್ತು.

ಪ್ರಾರಂಭದಲ್ಲಿ ಭಕ್ತಿಪ್ರಧಾನ ಚಿತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ರಾಜಕುಮಾರ್ ಕ್ರಮೇಣ ಸಾಮಾಜಿಕ ಪಾತ್ರಗಳಲ್ಲಿಯೂ ಕಾಣಿಸಿಕೊಳ್ಳತೊಡಗಿದರು.

ನಂತರ ಆಗಿನ ಜನಪ್ರಿಯ ಬಾಂಡ್ ಚಲನಚಿತ್ರಗಳಲ್ಲಿ ನಟಿಸತೊಡಗಿದರು. "ಆಪರೇಷನ್ ಜಾಕ್‌ಪಾಟ್" ಸಿನಿಮಾದಲ್ಲಿ ನಟಿಸಿದ ನಂತರ ತಮ್ಮ ತಾಯಿಯವರಲ್ಲಿ ಆ ಸಿನಿಮಾದ ತಮ್ಮ ನಟನೆಯ ಬಗ್ಗೆ ಅಭಿಪ್ರಾಯ ಕೇಳಿದರು. ತಾಯಿಗೆ ಮಗ ಇಂತಹ ಸಿನಿಮಾಗಳಲ್ಲಿ ಅಭಿನಯಿಸುವುದು ಇಷ್ಟವಾಗಿರಲಿಲ್ಲ. ಮಗ ತನ್ನ ಅಭಿಪ್ರಾಯ ಕೇಳಿದಾಗ ತಮ್ಮ ಖಂಡಿತವಾದ ಅಭಿಪ್ರಾಯವನ್ನು ನಿಸ್ಸಂಕೋಚವಾಗಿ ಹೀಗೆ ಹೇಳಿದರು. "ಮಗಾ ಇಂತಹ ಸಿನಿಮಾ ನಿನಗೆ ಬೇಡಪ್ಪಾ".

ತಾಯಿಯನ್ನೂ, ಅವರ ಅಭಿಪ್ರಾಯವನ್ನು ಅತ್ಯಂತ ಗೌರವಿಸುತ್ತಿದ್ದ ರಾಜಕುಮಾರ್ ಅವರಿಗೆ ತುಂಬಾ ಬೇಜಾರಾಯಿತು. 'ಅಮ್ಮನಿಗೆ ಬೇಜಾರು ಮಾಡಿಬಿಟ್ಟೆನಲ್ಲಾ' ಎಂದು ಬಹಳ ದಿನಗಳು ಪೇಚಾಡುತ್ತಿದ್ದರು.

"ಯಜಮಾನರು" ಎಂದು ಗೌರವಿಸುತ್ತಿದ್ದ ಗುಬ್ಬಿ ವೀರಣ್ಣನವರೂ ಸಹ "ಇಂತ ಪಾತ್ರ ನೀನು ಮಾಡಬೇಡಪ್ಪ" ಎಂದುಬಿಟ್ಟರು.

ತಾಯಿಯ ಮತ್ತು ಧಣಿಗಳ ಮನಸ್ಸಿಗೆ ಬೇಜಾರಾಗಿದೆಯೆಂದು ಮುಂದೆ ಬಾಂಡ್ ಚಿತ್ರಗಳ ಸಹವಾಸವನ್ನೇಬಿಟ್ಟರು.

ಮುಂದಿನ ದಿನಗಳಲ್ಲಿ ಅವರ ಅಭಿನಯವೆಲ್ಲಾ ಕಾಯುವ, ಪೊರೆಯುವ ಗುಣ, ತಂದೆ ತಾಯಿ ಸೋದರ ವಾತ್ಸಲ್ಯ, ಕರ್ತವ್ಯ ನಿಷ್ಠೆ, ಭಕ್ತಿ, ತ್ಯಾಗ ಮುಂತಾದ ಆದರ್ಶಗಳನ್ನು ಪ್ರತಿಬಿಂಬಿಸತಕ್ಕ ಪಾತ್ರಗಳಿಗೇ ಮೀಸಲಾಯಿತು.

ಕನಕ, ಪುರಂದರ, ಬಸವಣ್ಣ, ಕುಂಬಾರ, ಮಯೂರ, ಕೃಷ್ಣದೇವರಾಯ, ರಾಜೀವಪ್ಪ ಮುಂತಾದ ಪಾತ್ರಗಳಲ್ಲಿ ತಮ್ಮ ಅಭಿನಯ ಸಾಮರ್ಥ್ಯವನ್ನು ಪ್ರದರ್ಶಿಸಿದರು.

ನಮ್ಮ ಸಂಸ್ಕೃತಿ, ಪರಂಪರೆ, ಇತಿಹಾಸಗಳ ಮೇಲೆ ಪ್ರಭಾವ ಬೀರಬಲ್ಲ ಚಿತ್ರಗಳಲ್ಲಿ ಅಭಿನಯಿಸತೊಡಗಿದರು.

ಅವರ ರಾಘವೇಂದ್ರ ಸ್ವಾಮಿಗಳ ಪಾತ್ರದ "ಮಂತ್ರಾಲಯ ಮಹಾತ್ಮೆ" ಬಿಡುಗಡೆಯಾದ ಮೇಲಂತೂ ಮಂತ್ರಾಲಯಕ್ಕೆ ಹೋಗುವವರ ಸಂಖ್ಯೆ ಹೆಚ್ಚಾಯಿತು.

ಪಠ್ಯ ಪುಸ್ತಕಗಳಲ್ಲಿ ಅಡಕವಾಗಿದ್ದ ಕನಕದಾಸ, ಪುರಂದರದಾಸ, ಹರಿಶ್ಚಂದ್ರ, ಭಕ್ತ ಕುಂಬಾರನಂತಹ ಸಾಧು ಸತ್ಪುರುಷರನ್ನು, ಮಹಾಮಹಿಮರನ್ನು, ತಮ್ಮ

ಅಭಿನಯ ಪ್ರತಿಭೆಯ ಮೂಲಕ ಜನಸಾಮಾನ್ಯರಿಗೆ ತಲುಪಿಸಿದರು.

ಸಾಮಾಜಿಕ ಚಿತ್ರಗಳಲ್ಲಿ ಅವರ ಅಭಿನಯ ಉನ್ನತ ಮಟ್ಟಕ್ಕೇರಿತು. ಅವರು ಅಭಿನಯಿಸಿದ ಸಾಮಾಜಿಕ ಚಿತ್ರಗಳು ಸಮಾಜವನ್ನು ಕಾಡುತ್ತಿರುವ ಸಮಸ್ಯೆಗಳನ್ನು ಬಿಂಬಿಸತೊಡಗಿದವು. ಅಲ್ಲದೆ ಆ ಸಮಸ್ಯೆಗಳ ಪರಿಹಾರಕ್ಕೆ ಮಾರ್ಗೋಪಾಯ ಗಳನ್ನು ಸೂಚಿಸತೊಡಗಿದವು.

'ಜೀವನಚೈತ್ರ' ಚಿತ್ರ ಸಮಾಜದಲ್ಲಿ ಬೀರಿದ ಪರಿಣಾಮ ಅಸದೃಶವಾದುದು. ಮದ್ಯಪಾನದಿಂದ ಉಂಟಾಗುವ ದುಷ್ಪರಿಣಾಮಗಳ ಸನ್ನಿವೇಶಗಳಿದ್ದು ಅದನ್ನು ತಡೆಗಟ್ಟುವ ಕ್ರಮವನ್ನು ಆ ಚಿತ್ರದಲ್ಲಿ ನಿರೂಪಿಸಲಾಗಿದೆ. ಕುಡಿತದಿಂದಾಗುವ ಅನಾಹುತಗಳನ್ನು ತಮ್ಮ ಸಂಭಾಷಣೆಗಳ ಮೂಲಕ ಪರಿಣಾಮಕಾರಿಯಾಗಿ ಬಿಂಬಿಸಿದ ಪರಿಣಾಮ ಕರ್ನಾಟಕದ ಅನೇಕ ಗ್ರಾಮಗಳಲ್ಲಿ ಯುವ ಜನಾಂಗ ಎಚ್ಚೆತ್ತಿತು. ಕುಡಿತದ ಅಮಲಿನಿಂದ ಹಿಂದೆ ಸರಿಯುವ ದಿಟ್ಟ ನಿರ್ಧಾರಗಳನ್ನು ತಾಳಿ ಮದ್ಯಪಾನ ಮುಕ್ತಗ್ರಾಮಗಳನ್ನಾಗಿ ಮಾಡುವಲ್ಲಿ ಯಶಸ್ವಿಯಾದರು. ಇದರಿಂದ ಅನೇಕ ಸಂಸಾರಗಳು ಸಂಕಷ್ಟದಿಂದ ದೂರವಾದುವು.

ಅವರು ಅಭಿನಯಿಸಿದ್ದೆಲ್ಲ ಜನರ ಮನಸ್ಸನ್ನು ತಲುಪಿ ಹೃದಯದ ಹತ್ತಿರ ತಲಪುತ್ತಿತ್ತು. ಪಾತ್ರ ಯಾವುದೇ ಇದ್ದರೂ ಅದರಲ್ಲಿ ಸಂಪೂರ್ಣವಾಗಿ ತನ್ಮಯರಾಗುತ್ತಿದ್ದುದು ಅವರ ವಿಶೇಷತೆ. ಅವರು ಯಾವುದೇ ಪಾತ್ರದಲ್ಲಿ ಅಭಿನಯಿಸಿದರೂ ಪ್ರೇಕ್ಷಕರು ಮೆಚ್ಚುವಂತೆ ಆಗುತ್ತಿತ್ತು.

ಸಾಮಾಜಿಕ ಚಿತ್ರದ ಪ್ರೇಮಿಯಾಗಿ, ರೈತನಾಗಿ, ಕಾರ್ಮಿಕನಾಗಿ ನೀಡುವಷ್ಟೇ ಅಭಿನಯವನ್ನು ಐತಿಹಾಸಿಕದ ಶ್ರೀ ಕೃಷ್ಣದೇವರಾಯ, ರಣಧೀರ ಕಂಠೀರವನಾಗಿಯೂ ನೀಡುತ್ತಿದ್ದರು. ಅಂತೆಯೇ ಪೌರಾಣಿಕದ ಪಾತ್ರವಿರಲಿ, ಸಾಧು ಸಂತರ ಪಾತ್ರವಿರಲಿ, ಅವರ ಅಭಿನಯ ಹೃದಯಂಗಮವಾಗಿರುತ್ತಿತ್ತು.

ಸಾಮಾಜಿಕ ಚಿತ್ರದಲ್ಲಿ ಅವರ ಮಿಂಚಿದ ಪ್ರತಿಭೆಯಲ್ಲಿ ಕಸ್ತೂರಿ ನಿವಾಸವೂ ಒಂದು. ಈ ಚಿತ್ರದ ಅವರ ಅಭಿನಯ ಸಾಮರ್ಥ್ಯ ಇಡೀ ಭಾರತೀಯ ಚಿತ್ರರಂಗದಲ್ಲಿಯೇ ಹೊಗಳಿಕೆಗೆ ಪಾತ್ರವಾಗಿತ್ತು.

ತಮಿಳಿನ ಹೆಸರಾಂತ ಚಿತ್ರನಟರಾದ ಶಿವಾಜಿಗಣೇಶನ್ ಕಸ್ತೂರಿನಿವಾಸದ ರೀಮೇಕ್ (ತಮಿಳಿನಲ್ಲಿ) ಚಿತ್ರದಲ್ಲಿ ಅಭಿನಯಿಸಿದಾಗ ಹೇಳಿದ್ದು, "ರಾಜ್‌ರನ್ನು

ಅನುಕರಿಸುವುದೊಂದೇ ನನಗೆ ಉಳಿದಿರುವ ದಾರಿ, ಈ ಪಾತ್ರದಲ್ಲಿ ಅವರನ್ನು ಮೀರಿಸುವುದು ಸಾಧ್ಯವೇ ಇಲ್ಲ".

ಒಬ್ಬ ಮಹಾನಟ ಇನ್ನೊಬ್ಬ ಮಹಾನಟನಿಗೆ ಇನ್ನೆಂತಹ ಗೌರವದ ಮಾತುಗಳನ್ನಾಡಲು ಸಾಧ್ಯ?

1967ರಲ್ಲಿ ಭಾರತ ಪಾಕೀಸ್ಥಾನ ಯುದ್ಧವಾದ ನಂತರ ಅಂದಿನ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿಯವರ 'ಜೈ ಜವಾನ್, ಜೈಕಿಸಾನ್' ಎಂಬ ಕರೆಗೆ 'ಓ'ಗೊಡುವಂತೆ "ಮಣ್ಣಿನಮಗ" ಚಿತ್ರ ತಯಾರಾಯಿತು. ಈ ಚಿತ್ರದಲ್ಲಿ ಎಲ್ಲರಿಂದಲೂ ತಿರಸ್ಕೃತನಾದ ನಾಯಕ ಕೊನೆಗೆ ಊರಾಚೆ ಇರುವ ತನ್ನ ಪಾಲಿನ ಬರಡು ಭೂಮಿಯಲ್ಲಿ ಕೃಷಿ ಮಾಡುತ್ತಾನೆ. ತನ್ನ ದುಡಿಮೆಯಿಂದ ಆ ಬಂಜರು ಭೂಮಿಯನ್ನು ನಂದನವನವಾಗಿಸುತ್ತಾನೆ. ರಾಜ್‌ರ ಈ ಚಿತ್ರದ ಅದ್ಭುತ ಅಭಿನಯದಿಂದ ಪ್ರಭಾವಿತನಾದ ಬಳ್ಳಾರಿಯ ಸಮೀಪದ ಹಳ್ಳಿಯ ಯುವಕ ತನ್ನ ಪಾಲಿಗೆ ಬಂದಿದ್ದ ಬಂಜರು ಭೂಮಿಯಲ್ಲಿ ಬೇಸಾಯ ಮಾಡಿ ಬೆಳೆ ಬೆಳೆದು ನಿಜವಾಗಿಯೂ ಮಣ್ಣಿನ ಮಗನೇ ಆದ.

ಅದರಂತೆಯೇ 'ಬಂಗಾರದ ಮನುಷ್ಯ'ದ ರಾಜೀವಪ್ಪನ ಪಾತ್ರದಿಂದ ಸ್ಫೂರ್ತಿಗೊಂಡು ಪದವೀಧರರೊಬ್ಬರು ಹಳ್ಳಿಗೆ ಹಿಂತಿರುಗಿ ಗ್ರಾಮೀಣ ಬದುಕಿಗೆ ತಮನ್ನು ಸಮರ್ಪಿಸಿಕೊಂಡು 'ಬಂಗಾರದ ಮನುಷ್ಯ ಎಸ್ಟೇಟ್' ಎಂಬ ಜೀವಂತ ದಾಖಲೆಯನ್ನು ನಿರ್ಮಿಸಿದರು.

'ಗಂಧದಗುಡಿ' ಚಿತ್ರದಿಂದ ನಮ್ಮ ಅರಣ್ಯಗಳನ್ನು 'ರಕ್ಷಿತ ವಲಯ' ಅಥವಾ 'ಅಭಯಾರಣ್ಯ' ಎಂದು ಹೆಸರಿಸಿ ಅದರ ಅಭಿವೃದ್ಧಿಗೆ ರೂಪುಗೊಟ್ಟ ಸರ್ಕಾರ ಅರಣ್ಯಾಧಿಕಾರಿಗಳೂ ಹೆಚ್ಚು ಗೌರವನ್ನು ನೀಡುವಂತಾಯಿತು.

'ಗಾನಗಂಧರ್ವ'ನಾದ 'ನಟಸಾರ್ವಭೌಮ'

ರಾಜಕುಮಾರರಿಗೆ ಗಾಯನ ಎನ್ನುವದು ವಂಶಪಾರಂಪರ್ಯವಾಗಿ ಬಂದಿದ್ದು ಅವರ ತಂದೆ ಸಿಂಗಾನಲ್ಲೂರು ಪುಟ್ಟಸ್ವಾಮಯ್ಯನವರು, 'ಕೂಸು ಚೆನ್ನಾಗಿ ಹಾಡುತ್ತೆ, ಶಾರೀರ ಚೆನ್ನಾಗಿದೆ ಮುಂದೆ ಅವನು ಹಾಡ್ತಾನೆ' ಎಂದು ಆಗಲೇ ಭವಿಷ್ಯ ನುಡಿದಿದ್ದರಂತೆ. ಹಾಡೋದನ್ನು ಬಾಲ್ಯದಿಂದಲೇ ಕಲಿತಿದ್ದರು

ಡಾ. ರಾಜ್. ಮದರಾಸಿನಲ್ಲಿ ಅವರು ಇದ್ದಾಗ ರಾಧಾಕೃಷ್ಣ ಅಯ್ಯರ್ ಎನ್ನುವ ಸಂಗೀತ ಮೇಷ್ಟರಿಂದ ಪಾಠವೂ ಆಗಿತ್ತು.

'ಹರಿಭಕ್ತ' ಚಿತ್ರದಲ್ಲಿ ಸಂಗೀತ ನಿರ್ದೇಶಕ ಜಿ.ಕೆ. ವೆಂಕಟೇಶ್ ಅವರು ರಾಜ್‌ರಿಂದ ಮೊದಲು ಶ್ಲೋಕ ಹೇಳಿಸಿದರು. ನಂತರದಲ್ಲಿ 'ಓಹಿಲೇಶ್ವರ' ಚಿತ್ರದಲ್ಲಿ ವಚನಗಳು, ಒಂದು ಹಾಡನ್ನು ಹಾಡಿಸಿದರು. ಆ ಹಾಡನ್ನು ಘಂಟಸಾಲ ಹಾಡಬೇಕಿತ್ತು. ಆದರೆ ಅಂದು ಅವರು ಏನೋ ಅನಾನುಕೂಲದ ಕಾರಣದಿಂದ ಬರಲಾಗಲಿಲ್ಲ. ಆಗ ಹಾಡನ್ನು ರಾಜ್ ಹಾಡಬೇಕಾಗಿಬಂತು. ಆ ಹಾಡೇ 'ಶರಣು ಶಂಭೋ ಶಿವ ಶರಣು'. ನಂತರ ಎಸ್. ಜಾನಕಿಯವರೊಂದಿಗೆ ಯುಗಳ ಗೀತೆಯೊಂದನ್ನು ಮಹಿಷಾಸುರ ಮರ್ಧಿನಿ ಚಿತ್ರಕ್ಕಾಗಿ ಹಾಡಿದರು.

ಇದಾದ ಮೇಲೆ 'ದೇವಸುಂದರಿ', ಸರ್ವಜ್ಞಮೂರ್ತಿ' ಚಿತ್ರಗಳಲ್ಲಿಯೂ ಹಾಡಿದರು. ಆದರೆ ಅವರು 'ಸಂಪತ್ತಿಗೆ ಸವಾಲ್' ಚಿತ್ರದಲ್ಲಿ ಹಾಡಿದ 'ಯಾರೇ ಕೂಗಾಡಲಿ...' ಎಂಬ ಎಮ್ಮೆ ಹಾಡು ಹಾಡು ಅತ್ಯಂತ ಜನಪ್ರಿಯವಾಯಿತು. ಆನಂತರವೇ ಅವರು ಪೂರ್ಣ ಪ್ರಮಾಣದ ಗಾಯಕರಾಗಿ ತಮ್ಮ ಗಾನ ಸುಧೆಯನ್ನು ಚಿತ್ರಪ್ರೇಮಿಗಳಿಗೆ ನೀಡಿದ್ದು. ಮುಂದೆ ತಮ್ಮ ಚಿತ್ರ ಅಭಿಮಾನಿಗಳ ಒತ್ತಾಯಕ್ಕೆ ಮಣಿದು ತಮ್ಮ ಪಾತ್ರಗಳಿಗೆ ತಾವೇ ಹಾಡತೊಡಗಿದರು. ಮುಂದೆ 'ಸನಾದಿ ಅಪ್ಪಣ್ಣ', 'ಕವಿರತ್ನ ಕಾಳಿದಾಸ', 'ಬಬ್ರುವಾಹನ' – ಈ ಚಿತ್ರಗಳಲ್ಲಿ ಅವರು ಹಾಡಿದ ಹಾಡುಗಳು ಅವರಲ್ಲಿ ಶಾಸ್ತ್ರೀಯ ಸಂಗೀತಕ್ಕೆ ಇದ್ದ ವಿದ್ವತ್ತಿಗೆ ಸಾಕ್ಷಿಯಾಗಿವೆ.

ಮುಂದೆ ಉದಯ ಶಂಕರ್ ಸಾಹಿತ್ಯ ಮತ್ತು ರಾಜ್‌ರ ಗಾಯನ ಚಿತ್ರರಸಿಕರನ್ನು ಮೋಡಿ ಮಾಡಿತು. ಸುಮಾರು 400ಕ್ಕೂ ಹೆಚ್ಚು ಚಿತ್ರಗೀತೆಗಳನ್ನು ಹಾಡಿರುವ ರಾಜ್ 'ಜೀವನ ಚೈತ್ರ'ದ 'ನಾದಮಯ... ಈ ಲೋಕವೆಲ್ಲಾ...' ಗೀತೆಗೆ ಶ್ರೇಷ್ಠ ಗಾಯಕ ಪ್ರಶಸ್ತಿ ಪಡೆದರು.

'ಭಕ್ತಿಯೇ ನನ್ನ ಅಂತಃಕರಣದ ಸೆಲೆ... ಆನಂದದ ನೆಲೆ' ಎನ್ನುತ್ತಾ ಆನೇಕ ದಾಸವರೇಣ್ಯರ, ಕವಿಗಳ ಭಕ್ತರಸ ಪ್ರಧಾನ ಗೀತೆಗಳಿಗೆ ತಮ್ಮ ಕಂಠಸಿರಿಯನ್ನಿತ್ತು ಧ್ವನಿ ಸುರಳಿಗಳ ಮೂಲಕ 150ಕ್ಕೂ ಹೆಚ್ಚು ಭಕ್ತಿಗೀತೆಗಳ ಗಾನಸುಧೆಯನ್ನು ಹರಿಸಿದ್ದಾರೆ. "ವಾರಬಂತಮ್ಮ... ಗುರುವಾರ ಬಂತಮ್ಮ" ಎಂಬ ಮಂತ್ರಾಲಯ ಗುರುಗಳ ಕುರಿತಾದ ಭಕ್ತಿಗೀತೆಯ ಕ್ಯಾಸೆಟ್ ಲಕ್ಷಕ್ಕೂ ಮೀರಿ ಮಾರಾಟವಾಗಿ ದಾಖಲೆ ನಿರ್ಮಿಸಿದೆ.

ರಾಜ್‌ಕುಮಾರರಿಗೆ ಸಂದ ಪ್ರಶಸ್ತಿಗಳು

ಕನ್ನಡದ ಈ ವರನಟನಿಗೆ ಸಂದ ಪ್ರಶಸ್ತಿಗಳು ಲೆಕ್ಕವಿಲ್ಲದಷ್ಟು. ಉತ್ತಮ ನಟನೆಗಾಗಿ, ಉತ್ತಮ ಗಾಯನಕ್ಕಾಗಿ ದೊರೆತ ಪ್ರಶಸ್ತಿಗಳು ಒಂದೇ ಎರಡೇ?

ಅವರು ಶಾಲೆಯಲ್ಲಿ ಕಲಿತದ್ದು ಕೇವಲ ನಾಲ್ಕನೆಯ ತರಗತಿಯವರೆಗೆ ಮಾತ್ರ ಆದರೆ ಅವರು ಕನ್ನಡ ಕಾದಂಬರಿ ಸಾರ್ವಭೌಮರೆನಿಸಿದ ಅ.ನ.ಕೃ. ಅವರು ಹೇಳಿದ "ರಂಗಭೂಮಿ ಜನತಾ ವಿಶ್ವವಿದ್ಯಾಲಯ" ಎಂಬ ಮಾತನ್ನು ನಿಜವಾಗಿಸಿದರು. ರಂಗಭೂಮಿಯಲ್ಲಿ ಅವರು ಕಲಿತು, ಸಾಧಿಸಿದ್ದು, ನಟನ ಕಲೆಯಲ್ಲಿ ಉತ್ತುಂಗದ ಶಿಖರವನ್ನು ಮುಟ್ಟಿದ್ದು ಅವರ ಸಾಧನೆಯ ಪರಿಶ್ರಮದ ದ್ಯೋತಕವಾಗಿ. ಹೀಗಾಗಿ ರಂಗಭೂಮಿ ವಿಶ್ವವಿದ್ಯಾಲಯದಿಂದ ಪದವೀಧರರಾದ ಅವರಿಗೆ ದಕ್ಕಿದ್ದು ಮೈಸೂರು ವಿಶ್ವವಿದ್ಯಾಲಯದ 'ಡಾಕ್ಟರೇಟ್' ಪ್ರಶಸ್ತಿ (1976). ಅಲ್ಲದೆ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ 'ನಾಡೋಜ' ಪ್ರಶಸ್ತಿ (1999) ಯನ್ನು ಪಡೆದರು.

ಅತ್ಯುತ್ತಮ ನಟನೆಗೆ ಒಂಬತ್ತು ಬಾರಿ ಪ್ರಶಸ್ತಿಯನ್ನು ಪಡೆದುಕೊಂಡರು. ಹಿನ್ನೆಲೆ ಗಾಯನಕ್ಕೆ ಎರಡು ಬಾರಿ ರಾಜ್ಯ ಪ್ರಶಸ್ತಿ ಪಡೆದರು.

'ಜೀವನಚೈತ್ರ' ಚಿತ್ರದ "ನಾದಮಯ ಈ ಲೋಕವೆಲ್ಲ..." ಎಂಬ ಹಾಡಿಗೆ ಕೇಂದ್ರ ಸರ್ಕಾರದ ಶ್ರೇಷ್ಠ ಗಾಯಕ ಪ್ರಶಸ್ತಿಯನ್ನು ಪಡೆದುಕೊಂಡರು (1992)

ಕರ್ನಾಟಕ ಸರ್ಕಾರ ನೀಡಿದ 'ಕರ್ನಾಟಕ ರತ್ನ' (1992), 'ರಾಜ್ಯೋತ್ಸವ ಪ್ರಶಸ್ತಿ (1993), 'ಗುಬ್ಬಿವೀರಣ್ಣ' (1994) ಹೀಗೆ ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಕೇಂದ್ರ ಸರ್ಕಾರ ನೀಡುವ ಪದ್ಮಭೂಷಣ ಪ್ರಶಸ್ತಿಯನ್ನೂ ಪಡೆದರು (1983).

ಭಾರತೀಯ ಚಲನಚಿತ್ರರಂಗದ ಅತ್ಯುನ್ನತ ಪ್ರಶಸ್ತಿಯಾದ ದಾದಾ ಫಾಲ್ಕೆ ಪ್ರಶಸ್ತಿಯನ್ನು (1996) ಪಡೆದು ಕನ್ನಡ ಚಿತ್ರರಂಗಕ್ಕೇ ಕೀರ್ತಿ ತಂದ ಸಾಧಕ ಪುರುಷರಾದರು.

ಕರ್ನಾಟಕ ಸರ್ಕಾರ ಇವರ ಸಾಧನೆಯ ಸಾರ್ಥಕತೆಗಾಗಿ ಡಾ॥ ರಾಜಕುಮಾರ್ ಅವರ ಹೆಸರಿನಲ್ಲಿ ಒಂದು ಲಕ್ಷ ರೂಪಾಯಿಗಳ ಮೌಲ್ಯದ ಪ್ರಶಸ್ತಿಯನ್ನು

ಚಿತ್ರರಂಗದಲ್ಲಿ ಜೀವಮಾನ ಸಾಧನೆಗೈದವರಿಗೆ ಕೊಡುತ್ತ ಬಂದಿದೆ. ಇದು ಕನ್ನಡದ ಧೀಮಂತನಟನಿಗೆ-ನಟಸಾರ್ವಭೌಮರಿಗೆ ನೀಡಿದ ಗೌರವವೆನ್ನಬಹುದು.

ಈ ಎಲ್ಲಾ ಗೌರವ ಸನ್ಮಾನಗಳಿಗಿಂತ ಮಿಗಿಲಾಗಿ ಕನ್ನಡ ಜನತೆಯ ಹೃದಯದಲ್ಲಿ ಅವರು ಪಡೆದುಕೊಂಡ ಸ್ಥಾನ.

ರಾಜಕುಮಾರ್ ಅವರನ್ನು ಕನ್ನಡ ಜನ 'ಅಣ್ಣ' ಎಂದು ಕರೆದರು – 'ಕನ್ನಡ ನಾಡಿನ ಕಣ್ಮಣಿ' ಆದರು. ಅಭಿಮಾನಿಗಳ 'ಆರಾಧ್ಯ ದೈವ'ವಾದರು. 'ರಸಿಕರರಾಜ'ರಾಗಿ, 'ನಟಸಾರ್ವಭೌಮ'ರಾದರು. 'ಕಲಾತಪಸ್ವಿ'ಯಾದರು. 'ಗಾಯನಗಂಧರ್ವ'ರಾದರು.

ಈ ಎಲ್ಲಾ ಪ್ರಶಸ್ತಿಗಳ ಜೊತೆಗೆ ವಿದೇಶವೂ ಸಹ ಕನ್ನಡದ ಈ ಮೇರುನಟನಿಗೆ ಪ್ರಶಸ್ತಿಯ ಗರಿಯನ್ನು ಕೊಟ್ಟಿದೆ. ಅಮೆರಿಕದ ಕೆಂಟಕಿ ಪ್ರಾಂತ್ಯದ 'ಕೆಂಟಕಿ ಕರ್ನಲ್' ಪ್ರಶಸ್ತಿಯನ್ನು ಅವರಿಗೆ ನೀಡಲಾಗಿದೆ (1982). ಇಂಗ್ಲೆಂಡ್ ಪ್ರಧಾನಿ ಚರ್ಚಿಲ್ ಅಂಥವರಿಗೆ ಈ ಪ್ರಶಸ್ತಿ ನೀಡಲಾಗಿತ್ತು.

ಇಷ್ಟೆಲ್ಲಾ ಪ್ರಶಸ್ತಿ ಪುರಸ್ಕಾರಗಳು ಅವರನ್ನು ಹುಡುಕಿಕೊಂಡು ಬಂದರೂ ಅವರು ಮಾತ್ರ ಸ್ಥಿತಪ್ರಜ್ಞರಂತಿದ್ದರು. ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಪರಮಾತ್ಮನು ನುಡಿದಂತೆ, "ಕರ್ಮ ಮಾಡುವ ಅಧಿಕಾರ ಮನುಷ್ಯನದು, ಅದರ ಫಲಾಫಲಗಳನ್ನು ನೀಡುವುದು, ಬಿಡುವುದು ಭಗವಂತನಿಗೆ ಸೇರಿದ್ದು". ಅದರಂತೆ ರಾಜಕುಮಾರ್‌ರು ಕರ್ಮಯೋಗಿಗಳಾಗಿ ತಮ್ಮ ಕರ್ತವ್ಯ ನಿರ್ವಹಿಸಿದ್ದರು. ನಿಷ್ಕಾಮ ಕರ್ಮಯೋಗಿಯಾಗಿದ್ದ ಅವರಿಗೆ ಪ್ರಶಸ್ತಿ ಪುರಸ್ಕಾರಗಳು ಹುಡುಕಿಕೊಂಡು ಬಂದವು. ಅದನ್ನು ನೀಡಿದ ಕನ್ನಡ ಜನತೆ ಧನ್ಯರಾದರು.

ರಾಜ್ ಅವರ ಕನ್ನಡ ಪ್ರೀತಿ ಹಾಗೂ ಗೋಕಾಕ್ ಚಳುವಳಿ

ರಾಜಕುಮಾರ್ ಅವರಿಗೆ ಕನ್ನಡ, ಕನ್ನಡ ಜನ, ಕನ್ನಡ ಸಂಸ್ಕೃತಿಯೆಂಬುದು ಪ್ರಾಣಕ್ಕೆ ಸಮಾನವಾಗಿತ್ತು. ಸ್ವಭಾಷಾ ನಿಷ್ಠೆಗೆ ಎಷ್ಟು ಹೆಸರಾಗಿದ್ದರೋ ಅಷ್ಟೇ ಪರಭಾಷಾ ಸಹಿಷ್ಣುತೆಗೂ ಹೆಸರಾಗಿದ್ದರು.

ಕಲಾವಿದರಾಗಿ ರಾಜಕುಮಾರ್ ಅವರನ್ನು ಗೌರವಿಸುವುದು ಸಹಜ. ಅದಕ್ಕಿಂತಲೂ ಕನ್ನಡದ ಕಟ್ಟಾಭಿಮಾನಿಯಾಗಿ ಅವರನ್ನು ನಾವು ಗೌರವಿಸಬೇಕಾಗಿರುವದು

ಮತ್ತೂ ಮುಖ್ಯವಾದ ವಿಚಾರ. ಅವರು ತಾವೊಬ್ಬ 'ಕನ್ನಡಿಗ' ಎಂದು ಧೈರ್ಯದಿಂದ ಹೆಮ್ಮೆಯಿಂದ ಗುರುತಿಸಿಕೊಳ್ಳುತ್ತಿದ್ದರು. ಅದಕ್ಕೊಂದು ಉದಾಹರಣೆಯೆಂದರೆ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಸ್ವೀಕರಿಸಿದ ನಂತರ ಅಲ್ಲಿದ್ದ ಎಲ್ಲ ಟಿ.ವಿ. ಚಾನಲ್‌ನವರು ಅವರನ್ನು ಪ್ರಶ್ನೆಗಳನ್ನು ಕೇಳಿದಾಗ ಅವರು ಉತ್ತರಿಸಿದ್ದು ಮಾತ್ರ ಕನ್ನಡದಲ್ಲಿ. "ನನಗೆ ಹರಕು ಮುರುಕು ಇಂಗ್ಲೀಷ್‌ನಲ್ಲಿ ಮಾತನಾಡಲು ಇಷ್ಟವಿಲ್ಲ. ನನ್ನ ಮಾತೃಭಾಷೆ ಕನ್ನಡದಲ್ಲಿಯೇ ಮಾತನಾಡುತ್ತೇನೆ" ಎಂದು ಕನ್ನಡದಲ್ಲಿಯೇ ಅವರ ಪ್ರಶ್ನೆಗಳಿಗೆ ಉತ್ತರಿಸಿದರು. ಬೇರೆ ಯಾರಾದರೂ ಆಗಿದ್ದರೆ ಕನ್ನಡವನ್ನು ಬಿಟ್ಟು ಬೇರೆ ಭಾಷೆಯಲ್ಲಿಯೇ ಮಾತನಾಡುತ್ತಿದ್ದರು.

ಕನ್ನಡ ಚಿತ್ರರಂಗದ ಧ್ರುವತಾರೆಯಾಗಿ ಮೆರೆಯುತ್ತಿದ್ದ ಅವರಿಗೆ ಬೇರೆ ಭಾಷಾ ಚಿತ್ರಗಳಲ್ಲಿ ಬೇಡಿಕೆ ಇದ್ದರೂ ಕೇವಲ ತಾಯಿಭಾಷೆ ಕನ್ನಡಕ್ಕೇ ತಮ್ಮನ್ನು ತಾವೇ ಸಂಪೂರ್ಣವಾಗಿ ಅರ್ಪಿಸಿಕೊಂಡಿದ್ದು ಅವರ ಕನ್ನಡಾಭಿಮಾನದ ಕುರುಹಾಗಿತ್ತು. ಕನ್ನಡ ಚಿತ್ರರಂಗದಿಂದ ಆಚೀಚೆ ಸರಿಯದೇ, ಅಲ್ಲಿಯೇ ಉಳಿದು ತಮ್ಮತನವನ್ನು ಮೆರೆದದ್ದು ಅವರ ವೈಶಿಷ್ಟ್ಯ. ಹಾಗಾಗಿ ಅವರು ಕನ್ನಡಿಗರ ಮನದಾಳದಲ್ಲಿ ಶಾಶ್ವತವಾಗಿ ಬೇರೂರಿದ್ದರು.

ಕನ್ನಡಕ್ಕೆ ಕುತ್ತು ಬಂದಾಗ, ಕನ್ನಡ ಭಾಷೆಗಾಗಲಿ, ನೆಲ-ಜಲಕ್ಕಾಗಲೀ ಧಕ್ಕೆಯಾದಾಗ, ಕನ್ನಡ ಚಿತ್ರರಂಗದ ಸಮಸ್ಯೆಯನ್ನು ಎದುರಿಸುವಾಗ ತಮ್ಮ ಶಕ್ತಿಯನ್ನು ಧಾರೆ ಎರೆದು ಕನ್ನಡದ ಕೈಂಕರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು.

ಭಾಷಾವಾರು ಪ್ರಾಂತ್ಯಗಳ ರಚನೆಗೆ ಮೊದಲು ಹಲವು ರಾಜ್ಯಗಳಲ್ಲಿ ಕನ್ನಡಿಗರು ಹರಿದು ಹಂಚಿ ಹೋಗಿದ್ದರು. ಆದರೆ ನವಂಬರ್ 1, 1956ರಂದು ಕನ್ನಡ ಜನರನ್ನು ಒಗ್ಗೂಡಿಸಿ ಕರ್ನಾಟಕವೆಂದಾದರೂ ನಮ್ಮ ರಾಜ್ಯದಲ್ಲಿ ಕನ್ನಡ ಚಿತ್ರಗಳು ಪ್ರಬಲವಾಗಲಿಲ್ಲ. ಪರಭಾಷಾ ಚಿತ್ರಗಳ ಪ್ರಾಬಲ್ಯವೇ ಅಧಿಕವಾಗಿತ್ತು. ಸಹನೆ ಔದಾರ್ಯ, ಹಾಗೂ ಪರಭಾಷಾ ಚಿತ್ರ ಪ್ರೇಮಿಗಳಾಗಿದ್ದ ಕನ್ನಡಿಗರಲ್ಲಿ ಕನ್ನಡ ಮೆರೆಯುವಲ್ಲಿ ಸಹಕಾರಿಯಾಗುವಂತೆ ಮಾಡಿದ್ದು ರಾಜಕುಮಾರರ ಚಿತ್ರಗಳು. 1962ರ ಸುಮಾರಿನಲ್ಲಿ ಆರಂಭವಾದ ಕನ್ನಡ ಚಳುವಳಿಯಿಂದ ಪ್ರೇರಿತವಾದ ಕನ್ನಡ ಜನತೆ ಕನ್ನಡ ಚಿತ್ರಗಳತ್ತ ತಮ್ಮ ಗಮನವನ್ನು ಹರಿಸಿದ್ದು ಇಲ್ಲಿ ಗಮನಾರ್ಹವಾದದ್ದು ಎಂದು ನೆನಪಿಸಿಕೊಳ್ಳಬಹುದು.

ಡಬ್ಬಿಂಗ್ ಎನ್ನುವುದು ಕನ್ನಡ ಚಿತ್ರರಂಗಕ್ಕೆ ಪೀಡೆಯಂತೆ ಕಾಡಿದಾಗ, ನಾಡಿನ ಗಡಿ ಸಮಸ್ಯೆ ಎದುರಾದಾಗ, ಚಿತ್ರರಂಗದಲ್ಲಿ ಏನೇ ಸಮಸ್ಯೆ ಎದುರಾದಾಗ ಆ ಸಮಸ್ಯೆ ಪರಿಹಾರಕ್ಕೆ ಮುನ್ನುಗ್ಗುತ್ತಿದ್ದು, ಎಲ್ಲರನ್ನು ಹುರಿದುಂಬಿಸುತ್ತಿದ್ದುದು ರಾಜಕುಮಾರರ ವೈಶಿಷ್ಟ್ಯವಾಗಿರುತ್ತಿತ್ತು.

ಗೋಕಾಕ್ ವರದಿಗಾಗಿ ಚಳುವಳಿ ಆರಂಭವಾದಾಗಲಂತೂ ಅವರ ನಾಯಕತ್ವದಲ್ಲಿ ಇಡೀ ಕನ್ನಡ ಚಿತ್ರರಂಗ ಚಳುವಳಿಗೆ ಧುಮುಕಿದ್ದು, ಚಳುವಳಿಯ ಕಾವೇರಲು ಕಾರಣವಾಗಿದ್ದು ಎಂದಿಗೂ ಮರೆಯಲಾರದ ಸಂಗತಿ.

1982ರ ಏಪ್ರಿಲ್‌ನಲ್ಲಿ ಶಿಕ್ಷಣದಲ್ಲಿ ಕನ್ನಡ ಭಾಷೆಯ ಪ್ರಾಧಾನ್ಯತೆಗಾಗಿ ಗೋಕಾಕ್ ವರದಿ ನೀಡಿದ ತೀರ್ಪಿನ ಅನ್ವಯ ರಾಜ್ಯ ಸರ್ಕಾರ ನಡದುಕೊಳ್ಳದ ಕಾರಣ ಕನ್ನಡಿಗರು ನಡೆಸಿದ ಹೋರಾಟ, ಚಳುವಳಿ ಅನನ್ಯವಾದುದು, ಹಿಂದೆಂದೂ ಇಷ್ಟೊಂದು ಬೃಹತ್ ಗಾತ್ರದ ಚಳುವಳಿ ನಡೆದಿದ್ದು ಕಾಣದ ರಾಜ್ಯದಲ್ಲಿ ಈ ಚಳುವಳಿ ಐತಿಹಾಸಿಕವಾದುದು.

ಮೊದಲಿಗೆ ಸಾಹಿತಿಗಳು. ಪ್ರಾರಂಭಿಸಿದ ಚಳುವಳಿಗೆ ಕಾವು ಏರಿದ್ದು, ಬಲಬಂದಿದ್ದು ರಾಜಕುಮಾರ್ ನೇರವಾಗಿ ಚಳುವಳಿಗೆ ಧುಮುಕಿದ ನಂತರವೇ.

ದಿನಾಂಕ 15-04-1982ರಂದು ಅವರು ಹೇಳಿಕೆಯನ್ನು ನೀಡಿ "ಗೋಕಾಕ್ ವರದಿಯ ಜಾರಿಯ ಬಗ್ಗೆ ಯಾರೇ ಚಕಾರವೆತ್ತಿದರೂ ಅಂಥವರು ಕನ್ನಡ ನಾಡುನುಡಿಗೆ ದ್ರೋಹ ಬಗೆದಂತೆ" ಎಂದು ಹೇಳಿ ಚಳುವಳಿಗೆ ತಮ್ಮ ಎಲ್ಲ ರೀತಿಯ ಬೆಂಬಲ ಸೂಚಿಸಿದರು. ಅವರ ಈ ಹೇಳಿಕೆ ಇತರ ನಟರೂ ಸಹ ಚಳುವಳಿಯಲ್ಲಿ ಭಾಗವಹಿಸಲು ಪ್ರೇರಕವಾಯಿತು.

ದಿನಾಂಕ 17-04-1982ರಂದು ಉಪವಾಸ ನಿರತರಾಗಿದ್ದ ಸಾಹಿತಿ ಕಲಾವಿದರ ಶಿಬಿರಕ್ಕೆ ಬಂದ ರಾಜಕುಮಾರ್ ಅವರು ಸತ್ಯಾಗ್ರಹನಿರತರಿಗೆ ತಮ್ಮ ಬೆಂಬಲವನ್ನು ಸೂಚಿಸಿ ವರದಿಯನ್ನು ಸರ್ಕಾರವು ಒಪ್ಪಿಕೊಂಡು ಜಾರಿ ಮಾಡಬೇಕು ಎಂದು ಆಗ್ರಹಿಸಿದರು.

"ಹೆತ್ತ ತಾಯಿ ಎಷ್ಟು ಮುಖ್ಯವೋ, ನಾಡಿಗೆ ಭಾಷೆಯೂ ಅಷ್ಟೇ ಮುಖ್ಯ. ತಾಯಿನಾಡು ಬೇರೆ ಅಲ್ಲ. ಕನ್ನಡ ಬೇರೆ ಅಲ್ಲ. ಕರ್ನಾಟಕದಲ್ಲಿ ಕನ್ನಡ ಭಾಷೆ ಆಡಳಿತ ಭಾಷೆ ಆಗಬೇಕು" ಎಂದು ಹೇಳಿದರು.

"ಎಂಭತ್ತು ವರ್ಷದ ಹಿರಿಯ ಸಾಹಿತಿಗಳೂ, ಕವಿಗಳೂ, ಅನ್ನನೀರು ಬಿಟ್ಟು ಉಪವಾಸ ಇದ್ದಾರೆ ಎಂದ ಮೇಲೆ ರಾಜಕುಮಾರನೂ ಅದೇ ಸ್ಥಾನದಲ್ಲಿರುತ್ತಾನೆ" ಎಂದು ಅವರು ಹೇಳಿದಾಗ ಅಲ್ಲಿದ್ದ ಜನ ಉತ್ಸಾಹದಿಂದ ಚಪ್ಪಾಳೆ ತಟ್ಟಿದರು.

"ಕನ್ನಡಕ್ಕಾಗಿ ಎಲ್ಲ ಪದವಿ ಮತ್ತು ಪ್ರಶಸ್ತಿಗಳ ತ್ಯಾಗಕ್ಕೆ ಸಿದ್ಧನಾಗಿದ್ದೇನೆ" ಎಂದು ಘೋಷಿಸಿದರು.

ಧಾರವಾಡದ ಅಖಿಲ ಕರ್ನಾಟಕ ಕೇಂದ್ರ ಕನ್ನಡ ಕ್ರಿಯಾ ಸಮಿತಿಯು 16-05-1982ರಿಂದ ಜನಜಾಗೃತಿಗಾಗಿ ಏರ್ಪಡಿಸಿದ ಜಾತಾದಲ್ಲಿ ಪಾಲ್ಗೊಂಡು ಇಡೀ ರಾಜ್ಯದಲ್ಲಿ ವಿದ್ಯುತ್ ಸಂಚಲನವನ್ನುಂಟುಮಾಡಿದರು.

ಹೀಗೆ ಕನ್ನಡದ ಎಲ್ಲಾ ಹೋರಾಟದಲ್ಲಿಯೂ ಮುಂಚೂಣಿಯಲ್ಲಿದ್ದು ತಮ್ಮ ಕನ್ನಡಾಭಿಮಾನದ ಮೂಲಕ ಇತರರಿಗೆ ಮಾರ್ಗದರ್ಶಕರಾದರು.

ರಾಜಕುಮಾರ್ ಸಮಾಜಕ್ಕೆ ಸಲ್ಲಿಸಿದ್ದು

ರಾಜಕುಮಾರ್ ಅವರು ಸಾಮಾಜಿಕ ಸೇವೆಯಲ್ಲಿಯೂ ತಮ್ಮ ಕಾಣಿಕೆಯನ್ನು ಸಲ್ಲಿಸಿರುವುದು ಗಮನಾರ್ಹ ಸಂಗತಿ. ಹಲವಾರು ಧಾರ್ಮಿಕ ಸಾಮಾಜಿಕ ಸೇವಾಸಂಸ್ಥೆಗಳಿಗೆ ತಮ್ಮ ಸಂಗೀತ ಕಾರ್ಯಕ್ರಮಗಳಿಂದ ಅಪಾರ ಹಣವನ್ನು ಸಂಗ್ರಹಿಸಿ ಕೊಟ್ಟಿರುವುದು ಅವರ ಸಾಮಾಜಿಕ ಕಳಕಳಿಯ ದೃಷ್ಟಿಯೆನ್ನಬಹುದು.

ಪ್ರವಾಹಪೀಡಿತರಿಗೆ, ಬರಪೀಡಿತರಿಗೆ, ಭೂಕಂಪದಿಂದನೊಂದವರಿಗೆ, ರಾಷ್ಟ್ರೀಯ ರಕ್ಷಣಾನಿಧಿಗೆ - ಹೀಗೆ ಎಲ್ಲ ಸಂದರ್ಭಗಳಲ್ಲಿ ಹಣ ಸಂಗ್ರಹಿಸುವ ಕಾರ್ಯದಲ್ಲಿ ಇತರ ಕಲಾವಿದರೊಂದಿಗೆ ಮುಂಚೂಣಿಯಲ್ಲಿ ನಿಂತು ಸಮಾಜಕ್ಕೆ ತಮ್ಮ ಕೊಡುಗೆಯನ್ನು ನೀಡಿ ತಮ್ಮ ಧಾರಾಳತನವನ್ನು ಮೆರೆದಿದ್ದಾರೆ.

ಅವರು ಚಿತ್ರಗಳಿಗಾಗಿ ಹಾಡಿದಾಗ ಬಂದ ಸಂಭಾವನೆಯ ಹಣವನ್ನು ಬೀದಿ ಹೆಣ್ಣುಮಕ್ಕಳ ಕಲ್ಯಾಣಕ್ಕಾಗಿ ನೀಡಿದರು.

ಚಿತ್ರನಟನೆಗೆ ಹೊರತಾಗಿ ಬಂದ ಯಾವುದೇ ಹಣವನ್ನು ಸಾಮಾಜಿಕ ಕೆಲಸಗಳಿಗೆ ಕೊಡಬೇಕೆಂದು ಬಯಸಿದರು.

1996ರಲ್ಲಿ ದಾದಾ ಸಾಹೇಬ ಫಾಲ್ಕೆ ಪ್ರಶಸ್ತಿಯನ್ನು ಪಡೆದರು. ಅದಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆದ ಸನ್ಮಾನ ಸಮಾರಂಭದಲ್ಲಿ ಮಾತನಾಡುತ್ತಾ "ಫಾಲ್ಕೆ ಪ್ರಶಸ್ತಿಯಿಂದ ಬಂದಿರುವ ಒಂದು ಲಕ್ಷ ರೂಪಾಯಿಗಳ ಹಣವನ್ನು ಕನ್ನಡ ಸಾಹಿತ್ಯ ಪರಿಷತ್ತಿಗೆ ಕಾಣಿಕೆಯಾಗಿ ನೀಡುತ್ತಿದ್ದೇನೆ. ಕನ್ನಡ ಸಾಹಿತ್ಯ ಪರಿಷತ್ತು ಈ ಹಣವನ್ನು ದಯವಿಟ್ಟು ಸ್ವೀಕರಿಸಬೇಕು" ಎಂದು ನುಡಿದು ಹಣವನ್ನು ಪರಿಷತ್ತಿಗೆ ನೀಡಿದರು.

ಯಳಂದೂರಿನಲ್ಲಿ ಅವರಿಗೆ ನಡೆದ ಸನ್ಮಾನ ಸಮಾರಂಭವೊಂದರಲ್ಲಿ ಮಾತನಾಡುತ್ತಿದ್ದ ಶ್ರೀ ಸುತ್ತೂರು ಶಿವರಾತ್ರಿ ದೇಶೀಕೇಂದ್ರ ಸ್ವಾಮಿಗಳು, ಮೈಸೂರಿನಲ್ಲಿ ನೆಲೆತಪ್ಪಿದ ಹೆಣ್ಣುಮಕ್ಕಳ ಪುನರ್ವಸತಿ ಕೇಂದ್ರದ ಸ್ಥಾಪನೆಯ ಬಗ್ಗೆ ತಿಳಿಸಿದಾಗ, ಮೈಸೂರಿನಲ್ಲಿ ಆ ಕೇಂದ್ರಕ್ಕೆಂದೇ ಒಂದು ಕಾರ್ಯಕ್ರಮವನ್ನು ನಡೆಸಿಕೊಟ್ಟು 40ಲಕ್ಷ ರೂಪಾಯಿಗಳನ್ನು ಸಂಗ್ರಹಿಸಲು ನೆರವಾದರು.

ಜೀವಂತವಿರುವಾಗಲೇ 2004ರಲ್ಲಿ ನಾರಾಯಣ ನೇತ್ರಾಲಯಕ್ಕೆ ತಮ್ಮ ಕಣ್ಣುಗಳನ್ನು ದಾನ ಮಾಡಿ ಸಮಾಜಕ್ಕೆ ತಮ್ಮ ಕಾಣಿಕೆಯನ್ನು ನೀಡಿದ್ದರು. "ನಮ್ಮ ಈ ಎರಡು ಕಣ್ಣಗಳಿಂದ ಇಬ್ಬರು ಅಂಧರ ಬಾಳು ಬೆಳಗುವುದಾದರೆ ಅದನ್ನು ಮಣ್ಣುಪಾಲು ಮಾಡುವ ಬದಲು ದಾನ ಮಾಡುವುದೇ ಶ್ರೇಷ್ಠ" ಎಂದು ಹೇಳುತ್ತಿದ್ದರು.

ಅದರಂತೆ ಅವರು ನಿಧನರಾದ ನಂತರ ರಾಜ್ ಕುಟುಂಬದವರು ಅವರ ಕೊನೆಯ ಆಸೆಯನ್ನು ಪೂರೈಸಿದರು. ಈ ಮೂಲಕ ಡಾ॥ ರಾಜ್ ಅವರು ತಾವು ನಿಜವಾದ 'ಬೇಡರ ಕಣ್ಣಪ್ಪ' ಎಂಬುದನ್ನು ಲೋಕಕ್ಕೇ ತೋರಿಸಿಕೊಟ್ಟರು. ಅಂದು 'ಬೇಡರ ಕಣ್ಣಪ್ಪ' ಚಿತ್ರದಲ್ಲಿ ಶಿವನಿಗಾಗಿ ನೇತ್ರ ದಾನ ಮಾಡಿದ್ದ ಪಾತ್ರದಲ್ಲಿ ನಟಿಸಿದ್ದ ಅವರು ಮರಣಾನಂತರವೂ ತಮ್ಮ ನೇತ್ರದಾನ ಮಾಡಿದ್ದು ಮಾನವೀಯತೆ ಮೆರೆದಿರುವುದು ನಿಜವಾಗಲೂ ಸ್ಮರಣೀಯ.

ಕಣ್ಣುದಾನ ಹೇಗೆ

ಮರಣಾನಂತರ ಕಣ್ಣುಗಳನ್ನು ದಾನ ಮಾಡಬಯಸುವವರು ಸಮೀಪದ ಕಣ್ಣಿನ ಬ್ಯಾಂಕ್‌ನಲ್ಲಿ ತಮ್ಮ ಹೆಸರನ್ನು ನೋಂದಣಿ ಮಾಡಿಸಿಕೊಳ್ಳಬೇಕು. ಇಂಥ ದಾನಿಯ ಮರಣ ಸಂಭವಿಸಿದಾಗ ಮಾಹಿತಿ ನೀಡಿದರೆ ವೈದ್ಯರ ತಂಡ ದಾನಿಯ ಮನೆಗೇ ಬಂದು ಪಾರ್ಥಿವ ಶರೀರದಿಂದ ಕಣ್ಣುಗಳನ್ನು ತೆಗೆದುಕೊಳ್ಳುತ್ತದೆ. ಈ ಹಂತದಲ್ಲಿ ಮನೆಯವರ ಸಹಕಾರ ಮತ್ತು ಕಾಳಜಿ ತುಂಬಾ ಅಗತ್ಯ.

ವ್ಯಕ್ತಿ ಮೃತಪಟ್ಟ ಆರು ತಾಸಿನೊಳಗಾಗಿ ಕಣ್ಣುಗಳನ್ನು ತೆಗೆದುಕೊಳ್ಳಬೇಕು. ಇಲ್ಲಿದಿದ್ದರೆ ಅವು ನಿಷ್ಪ್ರಯೋಜಕವಾಗುತ್ತದೆ. ಹೀಗಾಗಿ ದಾನಿಯ ಬಂಧುಗಳು ಕೂಡಲೇ ವೈದ್ಯರಿಗೆ ಮಾಹಿತಿ ನೀಡಬೇಕು. ದಾನಿ ಕಣ್ಣು ರೆಪ್ಪೆ ತೆರೆದುಕೊಂಡೇ ಸಾವನ್ನಪ್ಪಿದ್ದರೆ, ಕಣ್ಣುಗಳು ಒಣಗಿ ಹೋಗದಂತೆ ಕೂಡಲೇ ರೆಪ್ಪೆಗಳನ್ನು ಮುಚ್ಚಬೇಕು. ಹತ್ತಿಯನ್ನೋ ಅಥವಾ ಬಟ್ಟೆಯನ್ನೋ ನೀರಿನಲ್ಲಿ ತೋಯಿಸಿ ಕಣ್ಣುಗಳ ಮೇಲೆ ಇಡಬೇಕು. ಐಸ್ ಕೂಡ ಇಡಬಹುದು. ಮೃತರ ತಲೆಯನ್ನು ದಿಂಬಿನ ಮೇಲೆ ಕೊಂಚ ಮೇಲಕ್ಕೆ ಬರುವಂತೆ ಒರಗಿಸಿಡಬೇಕು. ಕೊಠಡಿಯಲ್ಲಿ ಫ್ಯಾನ್ ಹಾಕಿಟ್ಟಿದ್ದರೆ ಅದನ್ನು ಆರಿಸಬೇಕು.

ಏನನ್ನು ಪಡೆಯುತ್ತಾರೆ ?

ನೇತ್ರದಾನ ಮಾಡಿದ ವ್ಯಕ್ತಿಯ ಮುಖದಿಂದ ಇಡೀ ಕಣ್ಣುಗಳನ್ನು ಎತ್ತಿಕೊಂಡು ವಿರೂಪಗೊಳಿಸಿಬಿಡುತ್ತಾರೆಂದು ಕೆಲವರು ಭಾವಿಸಿದ್ದಾರೆ. ಇದು ತಪ್ಪು ಕಲ್ಪನೆ. ನಿಜವಾಗಿ ದಾನಿಯ ಕಣ್ಣುಗಳಿಂದ ಕಾರ್ನಿಯಾ (ಗುಡ್ಡೆ ಭಾಗದಲ್ಲಿರುವ ಒಂದು ಅಂಗ)ವನ್ನು ಮಾತ್ರ ತೆಗೆದುಕೊಳ್ಳಲಾಗುತ್ತದೆ. ಇದರಿಂದ ಮೃತ ದೇಹದಿಂದ ಹತ್ತು ಸಿಸಿ ರಕ್ತವನ್ನು ಮಾತ್ರ ಪಡೆಯುತ್ತಾರೆ. ಕಾರ್ನಿಯಾದ ಈ ಬಿಲ್ಲೆಗಳನ್ನು ಶೈತ್ಯಾಗಾರದಲ್ಲಿ ಸಂಗ್ರಹಿಸಿಟ್ಟು, ಅಗತ್ಯವಿದ್ದವರಿಗೆ ಜೋಡಣೆ ಮಾಡಲಾಗುತ್ತದೆ. ಕಣ್ಣುದಾನ ಏಕೆ ಮುಖ್ಯವೆಂದರೆ, ವಿಜ್ಞಾನ ಇಂದು ಎಷ್ಟೇ ಮುಂದುವರಿದಿದ್ದರೂ ಕಾರ್ನಿಯಾ ಅಂಗಾಂಶಗಳನ್ನು ಕೃತವಾಗಿ ಸೃಷ್ಟಿ ಮಾಡುವುದು ಸಾಧ್ಯವಾಗಿಲ್ಲ. ಪ್ರಕೃತಿ ದತ್ತವಾದ ಕಾರ್ನಿಯಾದಿಂದ ಮಾತ್ರ ಇನ್ನೊಬ್ಬರಿಗೆ ದೃಷ್ಟಿ ನೀಡುವುದು ಸಾಧ್ಯ. ಮಣ್ಣಾಗಿ ಅಥವಾ ಬೂದಿಯಾಗಿ ವ್ಯರ್ಥವಾಗಬಹುದಾದ ಈ ಎರಡು ಅಮೂಲ್ಯ ಕೊಡುಗೆಗಳನ್ನು ಅಗತ್ಯವಿರುವ ಇನ್ನೊಬ್ಬರಿಗೆ ನೀಡುವುದರಿಂದ ಯಾರಿಗೂ ಏನೂ ನಷ್ಟವಾಗುವುದಿಲ್ಲ.

ವೀರಪ್ಪನ್‌ನಿಂದ ಅಪಹರಣ

'ರಾಜಕುಮಾರ್' ಜೀವನದಲ್ಲಿ ಮರೆಯಲಾಗದ ಕಹಿ ಘಟನೆ ಎಂದರೆ ಅವರನ್ನು ನರಹಂತಕ ಕಾಡುಗಳ್ಳ ವೀರಪ್ಪನ್ ಅಪಹರಿಸಿ ಕಾಡಿಗೆ ಕರೆದುಕೊಂಡು ಹೋಗಿದ್ದು.

30-07-2000, ಭೀಮನ ಅಮಾವಾಸ್ಯೆ ದಿನ, ತಮ್ಮ ಹುಟ್ಟೂರಾದ ಗಾಜನೂರಿನಲ್ಲಿ ತಂಗಿದ್ದ ಅವರನ್ನು ವೀರಪ್ಪನ್ ಅಪಹರಿಸಿದ. ಆ ವಾರ್ತೆ ದೂರದರ್ಶನದಲ್ಲಿ, ಆಕಾಶವಾಣಿಯಲ್ಲಿ ಬಿತ್ತರವಾಗುತ್ತಿದ್ದಂತೆ ಇಡೀ ಕನ್ನಡ ಜನತೆ ಅನುಭವಿಸಿದ ಸಂಕಟ ವ್ಯಥೆ ಹೇಳತೀರದು. ತಮ್ಮ ಮನೆಯ ಸದಸ್ಯನೇ ಒಬ್ಬ ಅಪರಹಣವಾಗಿದ್ದಾನೆಂದು ಕನ್ನಡ ನಾಡಿನ ಪ್ರತಿ ಕುಟುಂಬ ಸಂಕಟಪಟ್ಟಿತು.

ರಾಜ್ ಕುಟುಂಬ, ಕನ್ನಡ ಚಿತ್ರರಂಗ, ಕರ್ನಾಟಕ ಸರ್ಕಾರ, ಐದು ಕೋಟಿ ಕನ್ನಡಿಗರು ಅನುಭವಿಸಿದ ನೋವು, ವ್ಯಥೆ ಸಂಕಟಗಳು ವರ್ಣಿಸಲು ಅಸಾಧ್ಯ.

ಇಡೀ ಚಿತ್ರರಂಗ ತನ್ನ ಕಾರ್ಯಚಟುವಟಿಕೆಯನ್ನು ಸ್ತಬ್ದಗೊಳಿಸಿತು. ರಾಜ್ ಪರವಾಗಿ ನಿಂತಿತು. ಅವರ ಬಿಡುಗಡೆಗಾಗಿ ಇಷ್ಟದೈವವನ್ನು ಪ್ರಾರ್ಥಿಸಿದರು. ಕಂಡ ಕಂಡ ದೇವರನ್ನು ಭಜಿಸಿದರು. ಉರುಳು ಸೇವೆ ನಡೆಸಿದರು. ಹೋಮ ಹವನಗಳನ್ನು ಮಾಡಿದರು. ಉಪವಾಸ ಮಾಡಿದರು. ವ್ರತಾಚರಣೆ ಮಾಡಿದರು. ಅವರ ಬಿಡುಗಡೆಗಾಗಿ ಎಂತಹ ತ್ಯಾಗಕ್ಕಾಗಿಯೂ ಸಿದ್ಧವಾಗಿದ್ದರು.

ಅದುವರೆಗೆ ವೀರಪ್ಪನ್ ಅನೇಕರನ್ನು ಅಪಹರಿಸಿದ್ದ. ತನ್ನ ಕುಖ್ಯಾತಿಗೆ ಇನ್ನಷ್ಟು ಹೆಚ್ಚಿನ ಪ್ರಚಾರ ಸಿಗಲಿ ಎಂಬ ದೃಷ್ಟಿಯಿಂದ ಕನ್ನಡಿಗರ ಆರಾಧ್ಯ ದೈವವನ್ನು ಅಪಹರಿಸಿದ. 108 ದಿನಗಳಷ್ಟು ಧೀರ್ಘಕಾಲ ತನ್ನ ಸುಪರ್ದಿಯಲ್ಲಿಟ್ಟುಕೊಂಡ, ಕಾಡುಮೇಡುಗಳಲ್ಲಿ ನಡೆಸಿದ. ಸರಿಯಾದ ನಿದ್ರಾಹಾಗಳಿಲ್ಲದಂತೆ ಅವರನ್ನು ಘಾಸಿಗೊಳಿಸಿದ.

ಅವರ ಮನಸ್ಸಿಗೆ, ದೇಹಕ್ಕೆ ಅಪಾರ ಯಾತನೆಯನ್ನುಂಟುಮಾಡಿದ.

ಇಷ್ಟೆಲ್ಲ ಆದರೂ ಆ ಕಟುಕನ ಬಗ್ಗೆ ಕನಿಕರ ತೋರಿದ ಉದಾತ್ತ ಪುರುಷರಾದರು, ಸೌಜನ್ಯ ಮೂರ್ತಿಯಾದರು-ನಮ್ಮ ರಾಜ್.

ವೀರಪ್ಪನ್‌ಗೆ ರಾಜ್‌ಕುಮಾರ್ ಅವರಿಂದ ಸಿಕ್ಕಿದಷ್ಟು ನೈತಿಕ ಮೌಲ್ಯಗಳ ಪಾಠ ಬೇರಾವ ಅಪಹರಣದ ಕಾಲದಲ್ಲಿಯೂ ಸಿಕ್ಕಿರಲಿಲ್ಲ. ಇದನ್ನು ಸ್ವತಃ ಅವನೇ

ರಾಜ್ ಬಿಡುಗಡೆ ಸಂದರ್ಭದಲ್ಲಿ ಹೇಳಿಕೊಂಡಿದ್ದ. ರಾಜ್‌ರ ಸೌಜನ್ಯತೆ ಮತ್ತು ನಡವಳಿಕೆ ಅಂತಹ ಕಟುಕನ ಹೃದಯದಲ್ಲಿಯೂ ಕಂಬನಿ ಒಸರಿತ್ತು. ರಾಜ್‌ರನ್ನು ಮುಕ್ತಿಗೊಳಿಸುವಾಗ ಅವರನ್ನು ತಬ್ಬಿಕೊಂಡು ಅತ್ತುಬಿಟ್ಟ.

16 ನವೆಂಬರ್, 2000ರಂದು 108 ದಿನಗಳ ಕಾಡುಗಳ್ಳನ ಕಪಿಮುಷ್ಟಿಯಿಂದ ಬಿಡುಗಡೆಗೊಂಡು ವಿಶೇಷ ಹೆಲಿಕಾಪ್ಟರ್‌ನಲ್ಲಿ ರಾಜ್ ಬೆಂಗಳೂರಿನಲ್ಲಿ ಬಂದಿಳಿದಾಗ ಇಡೀ ನಾಡಿಗೆ ನಾಡೇ ಹರ್ಷೋದ್ಗಾರ ಮಾಡಿತು. ಹೆಲಿಕಾಪ್ಟರ್‌ನಿಂದ ಬಂದಿಳಿದ ರಾಜ್ ಮೊದಲು ಮಾಡಿದ್ದು ತಾಯ್ನಾಡಿನ ನೆಲವನ್ನು ಕಣ್ಣಿಗೊತ್ತಿಗೊಂಡಿದ್ದು. ಇದು ಅವರಿಗೆ ತಮ್ಮ ನಾಡಿನ ಬಗ್ಗೆ ಹೊಂದಿದ್ದ ಅಭಿಮಾನದ ಪ್ರತೀಕ.

ರಾಜ್ ಬಿಡುಗಡೆಯ ಸಂಭ್ರಮವನ್ನು ನಾಡು ಆಚರಿಸಿತು. ಬೆಂಗಳೂರು ನ್ಯಾಷನಲ್ ಕಾಲೇಜು ಮೈದಾನದಲ್ಲಿ ಡಿಸೆಂಬರ್ 10, 2000ರಂದು "ಧನ್ಯ ಮಿಲನ" ನಡೆಯಿತು. ರಾಜ್ಯದ ಮುಖ್ಯಮಂತ್ರಿಯಾಗಿದ್ದ ಎಸ್.ಎಂ. ಕೃಷ್ಣ, ಗೃಹಮಂತ್ರಿಯಾಗಿದ್ದ ಮಲ್ಲಿಕಾರ್ಜುನ ಖರ್ಗೆ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ನೂರೆಂಟು ದಿನಗಳ ತಮ್ಮ ವನವಾಸವನ್ನು ನೆನಪಿಸಿಕೊಂಡ ರಾಜ್ ಕನ್ನಡ ಜನತೆಯ ಆಶಯ ಮತ್ತು ಆಶೀರ್ವಾದ ತಮ್ಮನ್ನು ಮರಳಿ ನಾಡಿಗೆ ಬರುವಂತೆ ಮಾಡಿದೆ ಎಂದರು.

ರಾಜಕುಮಾರ್ ಅವರ ಕೆಲವು ವಿಶಿಷ್ಟ ವ್ಯಕ್ತಿತ್ವ

ದೈವಭಕ್ತಿ, ಧರ್ಮಶ್ರದ್ಧೆ, ಗುರುಹಿರಿಯರಲ್ಲಿ ಅನನ್ಯವಿನಯ, ಆತ್ಮೀಯರಲ್ಲಿ ಸಲಿಗೆ, ಅಪರಿಚಿತರೊಂದಿಗೆ ಸರಳ ಸಜ್ಜನಿಕೆ, ಗಣ್ಯರಲ್ಲಿ, ಸಾಹಿತಿಗಳಲ್ಲಿ ಸ್ನೇಹ, ಪರಿಚಾರಕರಲ್ಲಿ ಪ್ರೀತಿ, ಸದ್ಗೃಹಸ್ಥ, ಆದರ್ಶಪುತ್ರ, ಆದರ್ಶಪತಿ, ಆದರ್ಶತಂದೆ– ಇವುಗಳು ರಾಜಕುಮಾರ್‌ರವರಲ್ಲಿ ಕಾಣುತ್ತಿದ್ದ ವಿಶಿಷ್ಟ ಲಕ್ಷಣಗಳು.

ತಮ್ಮ ಕಂಠಸಿರಿಯಿಂದ ಸ್ಪಷ್ಟ ಉಚ್ಚಾರಣೆಯಿಂದ ಸಂಗೀತ ಜ್ಞಾನದಿಂದ ಕನ್ನಡಿಗರ ಮೇಲಿನ ತಮ್ಮ ಭಾವನಾತ್ಮಕ ಹಿಡಿತವನ್ನು ಗಟ್ಟಿಗೊಳಿಸುತ್ತಿದ್ದರು. ಈ ಗಟ್ಟಿತನಕ್ಕೆ ಅವರು ಅಭ್ಯಾಸ ಮಾಡುತ್ತಿದ್ದ ಯೋಗ ಮತ್ತು ಪ್ರಾಣಾಯಾಮದಿಂದ ಪಡೆದ ಉತ್ತಮ ಶರೀರ ಮತ್ತು ಶಾರೀರ ನೆರವಾಗಿತ್ತು. ತಮ್ಮ ವಿಶಿಷ್ಟ ಪ್ರತಿಭೆಯಿಂದ ಕನ್ನಡ ಚಿತ್ರರಗಂದ ಶಕ್ತಿಯಾಗಿ ಬೆಳೆದರು. ತಾವೂ ಬೆಳೆದು ಕನ್ನಡ ಚಿತ್ರರಂಗವನ್ನು ಬೆಳೆಸಿದರು.

ತಮ್ಮ ನಿರ್ಮಾಪಕರಿಗೆ ಯಾವತ್ತೂ ತೊಂದರೆ ಉಂಟುಮಾಡದೆ, ಕಿರಿಕಿರಿ ಯುಂಟಾಗದಂತೆ ಶಿಸ್ತುಬದ್ಧ ಸಿಪಾಯಿಯಂತೆ ತಮ್ಮ ಕರ್ತವ್ಯವನ್ನು ನಿರ್ವಹಿಸಿದರು. ತಮ್ಮ ತೊಂದರೆ ತಾಪತ್ರಯ ಅಸಂದರ್ಭ–ಅನಾರೋಗ್ಯಗಳಿಗೆ ಗಮನ ಕೊಡದೆ ಕೆಲಸದಲ್ಲಿ ಶ್ರದ್ಧೆಯಿಂದ ತೊಡಗುತ್ತಿದ್ದರು.

ತಮ್ಮ ಅಭಿಮಾನಿಗಳಲ್ಲಿ ದೈವತ್ವವನ್ನು ಕಂಡ ಮಹಾಪುರುಷ ರಾಜಕುಮಾರ್ ಅವರು ತಮ್ಮ ಅಭಿಮಾನಿಗಳನ್ನು "ಅಭಿಮಾನಿ ದೇವರು"ಗಳೆಂದೇ ಕರೆದರು.

ಅಭಿಮಾನಿಗಳು ಅವರನ್ನು "ಅಣ್ಣ" ಎಂದು ಕರೆದರು. ತಮ್ಮ ಹೃದಯಗಳಲ್ಲಿ ಅಣ್ಣನ ರೂಪದಲ್ಲಿ ರಾಜ್‌ಅವರನ್ನು ಪ್ರತಿಷ್ಠಾಪಿಸಿದರು. ಈ ರೀತಿಯ ನಾಯಕ ನಟನ ಅಭಿಮಾನಿ ಸಮೂಹದ ಹೃದಯ ಬಾಂಧವ್ಯ ಬಹುಷಃ ಇನ್ನ್ಯಾವ ಸಿನಿಮಾ ನಟನ ಹಾಗೂ ಆತನ ಅಭಿಮಾನಿಗಳಲ್ಲಿ ಕಾಣಲಾರದೇನೋ ?

ತಮ್ಮ ಅಭಿಮಾನಿಗಳ ಹೃದಯದಲ್ಲಿ ಪ್ರತಿಷ್ಠರಾಗಿದ್ದ ರಾಜ್‌ಕುಮಾರ್ ಮನಸ್ಸು ಮಾಡಿದ್ದರೆ ಯಾವತ್ತೋ ರಾಜಕೀಯ ಸೇರಿ ರಾಜ್ಯದ ಚುಕ್ಕಾಣಿಯನ್ನು ಹಿಡಿಯಬಹುದಾಗಿತ್ತು. ಅಂತಹುದೇ ಘಟನೆಗಳು ನೆರೆಯ ರಾಜ್ಯಗಳಾದ ಆಂಧ್ರ ಹಾಗೂ ತಮಿಳು ನಾಡುಗಳಲ್ಲಿ ಸಂಭವಿಸಿ ಎನ್.ಟಿ. ರಾಮರಾವ್ ಹಾಗೂ ಎಂ.ಜಿ. ರಾಮಚಂದ್ರನ್ ಅವರುಗಳು ಆಯಾ ರಾಜ್ಯಗಳ ಮುಖ್ಯ ಮಂತ್ರಿಗಳಾಗಿದ್ದರು.

ಆದರೆ ರಾಜ್ ಅವರು ಎಂದೂ ಆ ಬಗ್ಗೆ ಆಸೆಯನ್ನು ತೋರಲಿಲ್ಲ. ಅವರ ಮೇಲೆ ಒತ್ತಡದ ಮೇಲೆ ಒತ್ತಡವು ಬಂದರೂ ಅದರ ಕಡೆಗೆ ಗಮನವಹಿಸದೆ ನಿರ್ಲಿಪ್ತರಾಗಿಬಿಟ್ಟರು.

ಸೌಜನ್ಯಕ್ಕೆ ಮತ್ತೊಂದು ಹೆಸರು ರಾಜ್ ಎಂದು ಹೇಳಬಹುದು. ಅವರಿಗೆ "ಕರ್ನಾಟಕ ರತ್ನ" ಬಿರುದು ಬರುವುದಕ್ಕೆ ಮುಂಚೆ ನಡೆದ ಒಂದು ಘಟನೆ.

"ಕರ್ನಾಟಕ ರತ್ನ" ಬಿರುದನ್ನು ಅವರಿಗೂ ಮತ್ತು ಕುವೆಂಪು ಅವರಿಗೂ ನೀಡಲು ತೀರ್ಮಾನಿಸಿದ ನಂತರ, ಸಂಬಂಧಪಟ್ಟ ಕೆಲವರು ಅವರ ಬಳಿಗೆ ಹೋಗಿ ಈ ವಿಚಾರವನ್ನು ತಿಳಿಸಿದಾಗ ಅವರು ಹೇಳಿದ್ದು ಹೀಗೆ "ಮೊದಲು ಅದನ್ನು ಕುವೆಂಪು ಅವರಿಗೆ ನೀಡಿ, ನಂತರ ನಾನು ಸ್ವೀಕರಿಸುತ್ತೇನೆ"

ಅದರಂತೆಯೇ ನವೆಂಬರ್ 11ರಂದು ಕುವೆಂಪು ಅವರಿಗೆ ನಂತರ 14ರಂದು ರಾಜ್‌ಕುಮಾರ್ ಅವರಿಗೆ ವಿಧಾನಸೌಧದ ಮುಂಭಾಗದಲ್ಲಿ ನೀಡಲಾಯಿತು.

ಚಿತ್ರರಂಗಕ್ಕೆ ರಾಜ್ ಕುಟುಂಬದ ಕೊಡುಗೆ

ರಾಜ್‌ಕುಮಾರ್ ಅವರದು ಸುಖೀ ಕುಟುಂಬ. ಪತ್ನಿ ಪಾರ್ವತಮ್ಮ ರಾಜ್‌ಕುಮಾರ್ ಖ್ಯಾತ ನಿರ್ಮಾಪಕರು ಹಾಗೂ ವಿತರಕರು. ಇವರಿಗೆ ಮೂರು ಗಂಡು ಹಾಗೂ ಇಬ್ಬರು ಹೆಣ್ಣುಮಕ್ಕಳು. ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್ ಹಾಗೂ ಪುನೀತ್ ರಾಜ್‌ಕುಮಾರ್ ಚಲನಚಿತ್ರರಂಗದಲ್ಲಿ ನಾಯಕನಟರಾಗಿ ಅಭಿನಯಿಸುತ್ತಿದ್ದಾರೆ. ಶಿವರಾಜ್‌ಕುಮಾರ್ ಪತ್ನಿ ಶ್ರೀಮತಿ ಗೀತಾ ಶಿವರಾಜ್‌ಕುಮಾರ್ ಅವರು ಮಾಜಿ ಮುಖ್ಯಮಂತ್ರಿ ಬಂಗಾರಪ್ಪನವರ ಮಗಳು. ಈ ದಂಪತಿಗಳ ಮಗಳಾದ ಬೇಬಿ ನಿವೇದಿತಾ ಸಹ ಬಾಲನಟಿಯಾಗಿ ಅಭಿನಯಿಸಿದ್ದಾಳೆ ಹಾಗೂ ಪ್ರಶಸ್ತಿ ವಿಜೇತಳು ಸಹ. ರಾಘವೇಂದ್ರ ರಾಜ್‌ಕುಮಾರ್ ಪತ್ನಿ ಶ್ರೀಮತಿ ಮಂಗಳ. ಪುನೀತ್ ರಾಜ್‌ಕುಮಾರ್ ಪತ್ನಿ ಶ್ರೀಮತಿ ಅಶ್ವಿನಿ ರಾಜ್‌ರ ಹಿರಿಯ ಪುತ್ರಿ ಶ್ರೀಮತಿ ಲಕ್ಷ್ಮಿ ಚಿತ್ರನಿರ್ಮಾಪಕ ಎಸ್.ಎ. ಗೋವಿಂದರಾಜ್ ಅವರ ಪತ್ನಿ. ಕಿರಿಯ ಪುತ್ರಿ ಪೂರ್ಣಿಮಾ ನಾಯಕನಟ ರಾಮ್‌ಕುಮಾರ್ ಅವರ ಪತ್ನಿ, ಪೂರ್ಣಿಮಾ ಸಹ ಬಾಲನಟಿಯಾಗಿ ತಂದೆಯೊಂದಿಗೆ ಪ್ರೇಮದ ಕಾಣಿಕೆ ಚಿತ್ರದಲ್ಲಿ ಅಭಿನಯಿಸಿ ಪ್ರಶಸ್ತಿ ಪಡೆದ ಪ್ರತಿಭಾನ್ವಿತೆ.

ಚಿರನಿದ್ರೆಗೆ ಸಾಗಿದ ರಾಜ್‌ಕುಮಾರ್

"ಹುಟ್ಟು ಆಕಸ್ಮಿಕ ಸಾವು ನಿಶ್ಚಯ" ಇದು ಪ್ರಚಲಿತದಲ್ಲಿರುವ ಒಂದು ಸಂಗತಿ. "ಜಾತಸ್ಯ ಮರಣಂ ಧೃವಂ" ಎಂಬಂತೆ ಹುಟ್ಟಿದ ಪ್ರತಿಯೊಬ್ಬರು ಒಂದಲ್ಲ ಒಂದು ದಿನ ಮರಣ ಹೊಂದಲೇಬೇಕು.

ಆದರೆ ಮರಣ ಹೊಂದಿದರೂ ಸಹ ತಾವು ಜೀವಂತವಾಗಿದ್ದೇವೆ ಎಂಬುದನ್ನು ಕೇವಲ ಕೆಲವೇ ವ್ಯಕ್ತಿಗಳು ಸಾರಿ ಸಾರಿ ಹೇಳುತ್ತಾರೆ – ತಾವು ನಡೆಸಿದ ಜೀವನ ಕ್ರಮದಿಂದ ತಾವು ಮಾಡಿದ ಅಪರೂಪದ ಕಾಯಕದಿಂದ ತಾವು ನೀಡಿದ ಕಲಾಸೇವೆಯಿಂದ.

ಹಾಗೆ ಮರಣ ಹೊಂದಿದರೂ ತಮ್ಮ ಅಭಿಮಾನೀ ದೇವರುಗಳ ದೃಷ್ಟಿಯಲ್ಲಿ ಜನಮಾನಸದಲ್ಲಿ ಶಾಶ್ವತವಾಗಿ ನೆಲೆ ಊರಿರುವವರೆಂದರೆ ಡಾ॥ ರಾಜ್‌ಕುಮಾರ್.

ತಮ್ಮ ಎಪ್ಪತ್ತೇಳು ವರ್ಷಗಳ ಜೀವಿತಾವಧಿಯಲ್ಲಿ 50 ವರ್ಷಗಳಿಗೂ ಮೀರಿ ಚಿತ್ರರಂಗದಲ್ಲಿದ್ದು 208 ಚಿತ್ರಗಳಲ್ಲಿ ಅಭಿನಯಿಸಿ ಕನ್ನಡ ಭಾಷೆ, ನೆಲ ಜಲಗಳ ರಕ್ಷಣೆಯಲ್ಲಿ ತನ್ನನ್ನು ತಾನೇ ತೊಡಗಿಸಿಕೊಂಡ ಅಣ್ಣಾವ್ರು ದಿನಾಂಕ 12 ಏಪ್ರಿಲ್ 2006ರಂದು ಚಿರನಿದ್ರೆಗೆ ತೆರಳಿದರು.

2000ರಲ್ಲಿ ವೀರಪ್ಪನ್‌ನಿಂದ ಅಪಹೃತಗೊಂಡು 108ದಿನಗಳ ಅರಣ್ಯವಾಸದಲ್ಲಿ ಜರ್ಝರಿತರಾಗಿ ಬಿಡುಗಡೆಗೊಂಡ ನಂತರ ತಮ್ಮ ಮರಣಕ್ಕೆ ಕೆಲವೇ ದಿನಗಳ ಹಿಂದೆ ಸೋದರ ವರದಪ್ಪನವರ ನಿಧನದಿಂದಾಗಿ ಆಘಾತಕ್ಕೊಳಗಾಗಿದ್ದ ಡಾ॥ ರಾಜ್ ನಮ್ಮನ್ನೆಲ್ಲಾ ಅಗಲಿದರು.

ಇನ್ನೂ ಕೇವಲ ಹನ್ನೆರಡೇ ದಿನ ಅವರು ಬದುಕಿದ್ದರೂ ಅವರ ಎಪ್ಪತ್ತೇಳನೇ ಹುಟ್ಟುಹಬ್ಬ ಆಚರಿಸಬಹುದಿತ್ತು. ಅವರು ಕ್ರಿಯಾತ್ಮಕವಾಗಿ ಭಾಗವಹಿಸಿ ಕನ್ನಡನಾಡಿನಲ್ಲಿ ಕನ್ನಡದ ಕೆಚ್ಚನ್ನು ಪ್ರಜ್ವಲಿಸಿದ ಗೋಕಾಕ್ ಚಳುವಳಿಯು 25 ವರ್ಷಗಳನ್ನು ತುಂಬುತ್ತಿದ್ದುದನ್ನು ನೋಡಬಹುದಿತ್ತು. ಆದರೇನು ಜವರಾಯ ಬಂದು ಕರೆದಾಗ ಯಾರಿಗೂ ಇಲ್ಲವೆನ್ನಲಾಗುವುದಿಲ್ಲವೆ?

ರಾಜ್ ದೈಹಿಕವಾಗಿ ಇಂದು ನಮ್ಮೊಂದಿಗೆ ಇಲ್ಲ. ಆದರೆ ಮಾನಸಿಕವಾಗಿ ಪ್ರತಿಯೊಬ್ಬನ ಮನಸ್ಸಿನಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ. ರಾಜ್ ನೆನಪಿಗೆ ಸಾವಿಲ್ಲ.

ರಾಜ್ ಸಾವಿನ ನಂತರ...

ಅರ್ಧ ಶತಕಕ್ಕೂ ಹೆಚ್ಚು ಕಾಲ ಕನ್ನಡ ಚಿತ್ರರಂಗದ ಪ್ರಶ್ನಾತೀತ ಹಾಗೂ ಅನಭಿಷಕ್ತ ಚಕ್ರವರ್ತಿಯಾಗಿ ಮೆರೆದ ಚಿತ್ರಪ್ರೇಮಿಗಳ ಆರಾಧ್ಯದೈವ ಕನ್ನಡ ಚಿತ್ರರಸಿಕರ "ಅಣ್ಣ" ಡಾ॥ ರಾಜ್‌ಕುಮಾರ್ ಅವರ ಆತ್ಮ ಭೌತಿಕಕಾಯ ತ್ಯಜಿಸಿ ಅನಂತದಲ್ಲಿ ಲೀನವಾಯಿತು.

12ನೇ ತಾರೀಖು ಬುಧವಾರ ಮನೆಯಲ್ಲಿ ಎಂದಿನಂತೆ ಬೆಳಿಗ್ಗೆ 25 ನಿಮಿಷಗಳ ವಾಕಿಂಗ್ ಮಾಡಿದ್ದರು. ಮನೆ ಮುಂದಿನ ಕಟ್ಟೆಮೇಲೆ ಕುಳಿತು ಹಾಡು ಹೇಳಿದ್ದರು. ಮಧ್ಯಾಹ್ನ 1-40ರ ವೇಳೆಗೆ ಸೋಫಾ ಪಕ್ಕ ಕುಳಿತ ಅವರು ಫ್ಯಾನ್ ಸ್ವಲ್ಪ ನಿಧಾನ ಮಾಡುವಂತೆ ಹೇಳಿದರು. ಹಾಗೆಯೇ ಕುಸಿದು ಬಿದ್ದರು. ತಕ್ಷಣ ಮಸಾಜ್ ಮಾಡಿ ಬಾಯಿಂದ ಬಾಯಿಗೆ ಕೃತಕ ಉಸಿರಾಟ ಪ್ರಕ್ರಿಯೆಯನ್ನು ನಡೆಸಿದರು. ಪ್ರಥಮ ಚಿಕಿತ್ಸೆ ನಡೆಸುತ್ತಲೇ ಎಂ.ಎಸ್. ರಾಮಯ್ಯ ಆಸ್ಪತ್ರೆಗೆ

ಅವರನ್ನು ತೆಗೆದುಕೊಂಡು ಹೋಗಲಾಯಿತು. ಆದರೆ ಯಾವುದೇ ಚಿಕಿತ್ಸೆಗೂ ಸ್ಪಂದಿಸದ ಅವರು ಕೊನೆಯುಸಿರೆಳೆದರು. 2-05ಕ್ಕೆ ಅವರ ಸಾವನ್ನು ಘೋಷಿಸಲಾಯಿತು.

ಡಾ॥ ರಾಜ್ ನಿಧನದ ಸುದ್ದಿ ತಿಳಿಯುತ್ತಿದ್ದಂತೆ ಸದಾಶಿವನಗರದ ಮನೆಯತ್ತ ಅವರ ಅಭಿಮಾನಿ ದೇವರುಗಳು ಓಡೋಡಿ ಬಂದರು.

ಬೆಂಗಳೂರು ನಗರ ಸೇರಿದಂತೆ ರಾಜ್ಯದ ವಿವಿಧ ಮೂಲೆಮೂಲೆಗಳಿಂದ ಸಿಕ್ಕ ಸಿಕ್ಕ ವಾಹನಗಳನ್ನೇರಿ ಧಾವಿಸಿದರು. ಕಾಲ್ನಡಿಗೆಯಲ್ಲಿ ಕಣ್ಣೀರು ಸುರಿಸುತ್ತಾ ಬಂದರು. ಕನ್ನಡಿಗರ ಮನದಲ್ಲಿ ಪ್ರೀತಿಯ ನಟನಾಗಿ ಆರಾಧ್ಯದೈವವಾಗಿ ಉಳಿದಿದ್ದ 'ಬಂಗಾರದ ಮನುಷ್ಯ' ಡಾ॥ ರಾಜ್‌ರನ್ನು ಕಾಣಲು ಉಸಿರು ಬಿಗಿಹಿಡಿದು ರಸ್ತೆಯ ಇಕ್ಕೆಲಗಳಲ್ಲಿ ಬರುತ್ತಿದ್ದ ದೃಶ್ಯ ಬೆಂಗಳೂರು ನಗರದಲ್ಲಿ ಸರ್ವೆಸಾಮಾನ್ಯವಾಗಿತ್ತು.

ಡಾ॥ ರಾಜ್ ಮನೆಯ ಕಾಂಪೌಂಡ್ ಎದುರು, ಅಕ್ಕ ಪಕ್ಕದ ಮನೆಯ ಕಾಂಪೌಂಡಿನ ಮೇಲೂ ಹತ್ತಿ ಕುಳಿತ ಅಭಿಮಾನಿಗಳು ಕಣ್ಮರೆಯಾದ ಆರಾಧ್ಯದೈವನಿಗೆ ಕಂಬನಿ ಮಿಡಿದರು.

ಕಟ್ಟೆಯೊಡೆದ ಅಭಿಮಾನಿಗಳ ಅಳಲು

ಕನ್ನಡದ ಬಾವುಟ, ಅಗರಬತ್ತಿ, ರಾಜ್ ಭಾವಚಿತ್ರ ಹಿಡಿದು ನುಗ್ಗಿಬಂದ ಅಭಿಮಾನಿಗಳನ್ನು ತಡೆಹಿಡಿಯುವುದಕ್ಕೆ ಪೋಲಿಸರು ಹರ ಸಾಹಸ ಮಾಡಬೇಕಾಯಿತು. ಹೇಗೋ ಮನೆಯ ಗೇಟಿನೊಳಗೆ ನುಗ್ಗಿದ ಅಭಿಮಾನಿಗಳ ಪ್ರವಾಹಕ್ಕೆ ಸಿಕ್ಕು ಮನೆಯ ಹೂಕುಂಡಗಳು ಒಡೆದು ಹೋದುವು. ಹುಲ್ಲುಹಾಸು ವಿರೂಪವಾಯಿತು. ಒಂದು ಭಾಗದ ಕಾಂಪೌಂಡ್ ಮುರಿದು ಬಿತ್ತು.

ಹರಿದು ಬರುತ್ತಿದ್ದ ಜನಸಾಗರವನ್ನು ಅವರ ಕಂಬನಿ ತುಂಬಿದ ಅಭಿಮಾನವನ್ನು ನಿಯಂತ್ರಿಸಲು ಪೋಲಿಸರು ಹರಸಾಹಸ ಪಡಬೇಕಾಯಿತು. ಶಾಂತಿ, ತಾಳ್ಮೆ ಸಹನೆಯಿಂದಿರುವಂತೆ ಪೋಲೀಸರು ಪುನಃ ಪುನಃ ವಿನಂತಿ ಮಾಡಿದರು. "ಅಣ್ಣಾವ್ರರನ್ನ ನೋಡಬೇಕು" ಎಂದು ಅಭಿಮಾನಿಗಳು ಗದ್ದಲ ಎಬ್ಬಿಸಿದರು ಗದ್ದಲ ಜೋರಾದಾಗ ರಾಘವೇಂದ್ರ ರಾಜ್‌ಕುಮಾರ್, ಪುನೀತ ರಾಜ್‌ಕುಮಾರ್ ಅಭಿಮಾನಿಗಳನ್ನು ಸಮಾಧಾನ ಪಡಿಸಲು ಯತ್ನಿಸಿದರು. ಕೈಮುಗಿದು,

ಅರಮನೆ ಮೈದಾನಕ್ಕೆ ಹೋಗಿ ಎಂದು ವಿನಂತಿಸಿದರು. ಅವರ ಪ್ರಯತ್ನ ವಿಫಲವಾಯಿತು.

ಕೈಗೆ ಸಿಕ್ಕಿದ್ದನ್ನೆಲ್ಲಾ ತೆಗೆದುಕೊಂಡು ಪೋಲಿಸರ ಮೇಲೆ ಎಸೆದರು.

ಮಧ್ಯಾಹ್ನ 3–40ರ ವೇಳೆಗೆ ಸದಾಶಿವ ನಗರದ ನಿವಾಸದಿಂದ ಡಾ॥ ರಾಜ್ ಪಾರ್ಥಿವ ಶರೀರವನ್ನು ಆಂಬುಲೆನ್ಸ್‌ನಲ್ಲಿ ಅರಮನೆ ಮೈದಾನಕ್ಕೆ ಕೊಂಡೊಯ್ಯಲಾಯಿತು. ಆದರೆ ಅಲ್ಲಿ ಮೃತದೇಹನ್ನು ಅಂತಿಮ ದರ್ಶನಕ್ಕೆ ಇಡಲು ಯಾವುದೇ ವ್ಯವಸ್ಥೆ ಆಗಿರದ ಕಾರಣ ಸಿಟ್ಟಿಗೆದ್ದ ಅಭಿಮಾನಿಗಳು ಪಾರ್ಥೀವ ಶರೀರವನ್ನು ವಾಹನದಿಂದ ಕೆಳಗೆ ಇಳಿಸಲು ಬಿಡಲಿಲ್ಲ. ನಂತರ ಸುಮಾರು 7–15ರ ವೇಳೆಗೆ ಪಾರ್ಥಿವ ಶರೀರವನ್ನು ಕಂಠೀರವ ಕ್ರೀಡಾಂಗಣಕ್ಕೆ ತರಲಾಗುತ್ತಿದೆ ಎಂಬ ಸುದ್ದಿ ಹರಡಿತು.

ಈ ರೀತಿಯ ಸರಿಯಾದ ಸಮರ್ಪಕ ವ್ಯವಸ್ಥೆಯ ಕೊರತೆಯಿಂದ ಲಕ್ಷಾಂತರ ಸಂಖ್ಯೆಯಲ್ಲಿ ನೆರೆದಿದ್ದ ಅಭಿಮಾನಿಗಳಲ್ಲಿ ಗೊಂದಲಮಯವಾದ ವಾತಾವರಣ ಏರ್ಪಟ್ಟು ಜನ ಸಹನೆ ಕಳೆದುಕೊಳ್ಳತೊಡಗಿದರು.

ಕೊನೆಗೂ ಕಂಠೀರವ ಕ್ರೀಡಾಂಗಣದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಯಿತು. ರಾಜ್‌ರವರ ಶತಚಿತ್ರ ಸಮಾರಂಭ (1968), ಪದಮಭೂಷಣ ಸಮಾರಂಭ (1983) ಚಲನಚಿತ್ರ ಸುವರ್ಣ ಹಬ್ಬ (1984) ಹೀಗೆ ರಾಜ್ ಮಹತ್ವದ ಘಟನೆಗಳಿಗೆ ಸಾಕ್ಷೀಭೂತವಾಗಿದ್ದೆ ಕಂಠೀರವ ಕ್ರೀಡಾಂಗಣ ಅವರ ಅಂತಿಮ ದರ್ಶನಕ್ಕಾಗಿ ಸಾರ್ವಜನಿಕ ವೀಕ್ಷಣೆಗೂ ವೇದಿಕೆಯಾಗಿದ್ದು ಎಂಥ ಕಾಕತಾಳೀಯ ?

ಅಭಿಮಾನಿಗಳಲ್ಲಿ ದುಃಖ ಮಡುಗಟ್ಟಿತ್ತು. ತಮ್ಮೆಲ್ಲರನ್ನು ಜೀವಮಾನವಿಡೀ ಪ್ರೀತಿಸಿದ, ರಂಜಿಸಿದ, ನಕ್ಕು ನಲಿಸಿದ 'ನಟಸಾರ್ವಭೌಮ'ನ ಅಂತಿಮ ದರ್ಶನಕ್ಕೆ ಲಕ್ಷಾಂತರ ಅಭಿಮಾನಿಗಳು ಹಿಂದೆಂದೂ ಯಾವ ಸಂದರ್ಭದಲ್ಲೂ ಸಂಭವಿಸದ ದಾಖಲೆಯನ್ನು ಸೃಷ್ಟಿಸಿದರು.

ಅಭಿಮಾನಿಗಳು ಪ್ರದರ್ಶಿಸಿದ ಕೆಟ್ಟ ಕೋಪ, ಅಸಹನೆಯಿಂದ ನಡೆಸಿದ ಹಿಂಸಾಚಾರವನ್ನು ತಡೆಯಲು ಪೋಲಿಸರು ಅಶ್ರುವಾಯು ಸಿಡಿಸಬೇಕಾಯಿತು. ಆಗ ಕಂಠೀರವ ಕ್ರೀಡಾಂಗಣದಲ್ಲಿ ಅಲ್ಲಲ್ಲಿ ಕಟ್ಟಿದ್ದ ಜೇನುಗೂಡಿನಿಂದ

ಜೇನುನೊಣಗಳು ಎದ್ದು ಜನ ಸಮೂಹದತ್ತ ಸಾಗಿಬಂದವು. ಅಭಿಮಾನಿಗಳನ್ನು ಕಚ್ಚಿದವು. ಆದರೆ ಅದಕ್ಕೆ ಹೆದರದ ಅಭಿಮಾನಿಗಳು ಜೇನ್ನೊಣಗಳಿಂದ ಕಚ್ಚಿಸಿಕೊಂಡಿದ್ದನ್ನು ಲೆಕ್ಕಿಸದೆ ತಮ್ಮ ವರನಟನ ಅಂತಿಮ ದರ್ಶನ ಪಡೆದರು.

ಗುರುವಾರದಂದು (13-04-2006) ಮಧ್ಯಾಹ್ನ 1-00 ಗಂಟೆಗೆ ಕಂಠೀರವ ಕ್ರೀಡಾಂಗಣದಲ್ಲಿ ಇರಿಸಿದ್ದ ಪಾರ್ಥೀವ ಶರೀರವನ್ನು ಅಂತ್ಯ ಸಂಸ್ಕಾರ ನಡೆಸುವ ಕಂಠೀರವ ಸ್ಟುಡಿಯೋಗೆ ಒಯ್ಯಲು ಹೊತ್ತೊಯ್ಯಲಾಯಿತು.

ಕಂಠೀರವ-ಡಾ॥ ರಾಜ್ ಬಾಂಧವ್ಯ

ರಾಜ್ ಅಂತಿಮ ಯಾತ್ರೆ ಕಂಠೀರವ ಕ್ರೀಡಾಂಗಣದಿಂದ ಕಂಠೀರವ ಸ್ಟುಡಿಯೋಗೆ ಪಯಣಿಸಿದ್ದುದರಲ್ಲಿ ಒಂದು ಐತಿಹ್ಯವಿದೆ. ಕಂಠೀರವ ಸ್ಟುಡಿಯೋಗೂ ಡಾ॥ ರಾಜ್‌ಗೂ ಒಂದು ರೀತಿಯ ಅವಿನಾಭಾವ ಸಂಬಂಧ ಎಂದು ಹೇಳಬಹುದು. ಅವರ ಅನೇಕ ಚಿತ್ರಗಳು ತಯಾರಾಗುತ್ತಿದ್ದುದು ಇಲ್ಲಿಯೇ.

ಅಲ್ಲದೆ ಮೈಸೂರು ಅರಸರಾದ ಕಂಠೀರವ ಒಡೆಯರ್ ಅವರಿಗೂ ಡಾ॥ ರಾಜ್‌ಗೂ ಏನಾದರೂ ನಿಕಟ ಸಂಬಂಧವಿರಬಹುದೇ ಎಂದು ಅನುಮಾನ ಬರುವುದು ಸಹಜ.

ಏಕೆಂದರೆ ರಾಜ್‌ರ ಮೃತ ದೇಹವನ್ನು ಮೊದಲು ಅರಮನೆ ಮೈದಾನದಲ್ಲಿ ಇಡಲು ನಿರ್ಧರಿಸಿದರಾದರೂ ಕೊನೆಗೆ ಅದು ಬದಲಾಗಿ ಕಂಠೀರವ ಸ್ಟೇಡಿಯಂನಲ್ಲಿ ಇಡಲಾಯಿತು.

ಅರವತ್ತರ ದಶಕದಲ್ಲಿ ರಾಜಕುಮಾರ್, ಜಿ.ವಿ. ಅಯ್ಯರ್, ನರಸಿಂಹರಾಜು, ಬಾಲಕೃಷ್ಣ ರವರು ಸೇರಿಕೊಂಡು 'ಕನ್ನಡ ಚಿತ್ರಕಲಾವಿದರು' ಹೆಸರಿನಲ್ಲಿ ತೆಗೆದ ಚಿತ್ರ 'ರಣಧೀರ ಕಂಠೀರವ'. ಆ ಚಿತ್ರದಲ್ಲಿ ರಾಜ್ ಪಾತ್ರ ಮಾಡಿದ್ದು ಕಂಠೀರವ ಅರಸರ ಪಾತ್ರ ಅದು ಕನ್ನಡದ 100ನೇ ವಾಕ್ಚಿತ್ರವಾಗಿದ್ದುದೂ ಅಲ್ಲದೆ ಕನ್ನಡದ ಮೊದಲ ಐತಿಹಾಸಿಕ ಚಿತ್ರವೂ ಆಗಿದ್ದು ವಿಶೇಷ.

ರಾಜ್‌ರ ಅಂತ್ಯಕ್ರಿಯೆ ಮೊದಲಿಗೆ ಅವರ ಹುಟ್ಟೂರು ಗಾಜನೂರು ಅಥವಾ ಬೆಂಗಳೂರು ಹೊರವಲಯದ ಕುಂಬಳಗೋಡು ಸಮೀಪದ ಪುನೀತ್ ಫಾರಂನಲ್ಲಿ ನಡೆಯಬೇಕೆಂದು ತೀರ್ಮಾನಿಸಲಾಯಿತು. ಆದರೆ ಕೊನೆಗೆ ಅದು ನಡೆದದ್ದು ಅವರ ಮೆಚ್ಚಿನ ಕಂಠೀರವ ಸ್ಟುಡಿಯೋದಲ್ಲಿ. ಪಾರ್ಥಿವ ಶರೀರದ ಮೆರವಣಿಗೆಯಲ್ಲಿ

ಕಿಲೋಮೀಟರ್‌ಗಟ್ಟಲೆ ಜನಸಾಗರ ಪಾಲ್ಗೊಂಡಿದ್ದು ರಸ್ತೆಯ ಎರಡೂ ಬದಿಗಳಲ್ಲಿ ಕಟ್ಟಡಗಳ ಮೇಲಿನಿಂದ ಮಹಿಳೆಯರು ಮಕ್ಕಳು ಕಣ್ಣೀರು ಸುರಿಸುತ್ತಿದ್ದರು.

ಡಾ॥ ರಾಜ್ ಪಾರ್ಥಿವ ಶರೀರವಿದ್ದ ವಾಹನದಲ್ಲಿ ಶಿವರಾಜ್‌ಕುಮಾರ್, ಪುನೀತ್‌ರಾಜ್‌ಕುಮಾರ್ ಹಾಗೂ ರಾಮ್‌ಕುಮಾರ್ ಕುಳಿತಿದ್ದರು. ಸುಮಾರು ಐದುಗಂಟೆಗಳ ಕಾಲ ನಡೆದ ಧೀರ್ಘ ಮೆರವಣಿಗೆಯಲ್ಲಿ ಸಾಗರದ ಜನಸ್ತೋಮವಿತ್ತು. ಭಾವನೆಗಳ ಉನ್ಮಾದವಿತ್ತು. ಅಣ್ಣಾವ್ರ ಅಗಲಿಕೆಯ ಆಕ್ರೋಶವಿತ್ತು. ಇವೆಲ್ಲದರ ಮಧ್ಯೆ ಕೆಲವರ ದುಂಡಾವರ್ತಿಯೂ ನಡೆಯುತ್ತಿದ್ದುದು ವಿಷಾದವನ್ನು ಉಂಟುಮಾಡುತ್ತಿತ್ತು.

ಇದೇನು ಅಭಿಮಾನವೋ, ಅತಿರೇಕವೋ ಒಂದು ಅರ್ಥವಾಗುತ್ತಿರಲಿಲ್ಲ. ಯಾರಿಗೆ ಯಾರೂ ಹೇಳುವಂತಿರಲಿಲ್ಲ. ಜನ ಸಮೂಹ ಸಾಮೂಹಿಕ ಸನ್ನಿಗೆ ಒಳಗಾದಂತಿತ್ತು ಎಂಬುದರಲ್ಲಿ ಅನುಮಾನವೇ ಇರಲಿಲ್ಲ. ಏಕೆಂದರೆ ರಸ್ತೆಯಲ್ಲಿ ಸಿಕ್ಕ ಎಲ್ಲ ವಸ್ತುಗಳನ್ನು ಅಸ್ತ್ರದಂತೆ ಉಪಯೋಗಿಸಲಾಗುತ್ತಿತ್ತು. ಎದುರಿಗೆ ಸಿಕ್ಕ ವಾಹನಗಳನ್ನು ಮನಬಂದಂತೆ ಒದೆಯುತ್ತಿದ್ದರು. ಸಮಯ ಸಾಧಿಸಿ ಕೆಲವಕ್ಕೆ ಅಗ್ನಿ ಸ್ಪರ್ಶ ಮಾಡುತ್ತಿದ್ದರು. ಕಟ್ಟಡ ಮನೆ ಅಂಗಡಿ ಯಾವುದನ್ನೂ ಲೆಕ್ಕಿಸದೆ ಕಲ್ಲು ತೂರುತ್ತಿದ್ದರು. ರಾಜ್‌ಕುಮಾರ್ ಮಕ್ಕಳು ಮಾಡಿಕೊಳ್ಳುತ್ತಿದ್ದ ಮನವಿಯನ್ನು ಯಾರೂ ಕೇಳಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ.

ರಾಜ್ ಪಾರ್ಥಿವ ಶರೀರದ ಅಂತ್ಯಕ್ರಿಯೆ ನಡೆಯುವುದೇ ಅನುಮಾನ ಎಂಬಷ್ಟರ ಮಟ್ಟಿಗೆ ಪರಿಸ್ಥಿತಿ ವಿಕೋಪಕ್ಕೆ ಹೋಯಿತು. ಅನಿವಾರ್ಯವಾಗಿ ಪೋಲೀಸರು ಗುಂಡು ಹಾರಿಸಿದರು. ಹಲವರು ಮೃತಪಟ್ಟರು.

ಈ ಎಲ್ಲ ಗಲಭೆ ಹಿಂಸಾಚಾರದ ಮಧ್ಯೆಯೂ 5–10ರ ಹೊತ್ತಿಗೆ ಶವವನ್ನು ಹೊತ್ತ ವಾಹನ ಕಂಠೀರವ ಸ್ಟುಡಿಯೋವನ್ನು ಸೇರಿತು. 6 ಗಂಟೆಗೆ ಅಂತ್ಯ ಸಂಸ್ಕಾರ ನಡೆಯಿತು. ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್ ಸೇರಿದಂತೆ ರಾಜ್ ಕುಟುಂಬದ ಎಲ್ಲಾ ಸದಸ್ಯರು ಚಿತ್ರನಟರು ಅಭಿಮಾನಿಗಳೂ ಈ ಸಂದರ್ಭದಲ್ಲಿ ಹಾಜರಿದ್ದರು. ಆದರೆ ಕಂಠೀರವ ಸ್ಟುಡಿಯೋದವರೆಗೂ ಆಗಮಿಸಿದ್ದ ಮುಖ್ಯಮಂತ್ರಿಗಳೇ ಮೊದಲಾಗಿ ಇನ್ನು ಹಲವರಿಗೆ ಒಳಗೆ ಬರಲು ಸಾಧ್ಯವಾಗದೆ ಹಿಂತಿರುಗಬೇಕಾಯಿತು.

ಅಭಿಮಾನಿ ದೇವರುಗಳ ಉತ್ಸಾಹದ ಅತಿರೇಕದಿಂದ ರಾಜ್ ಕುಟುಂಬದ ಸದಸ್ಯರೂ ಸಹ ಅಂತ್ಯ ಸಂಸ್ಕಾರದಲ್ಲಿ ಭಾಗವಹಿಸಲಾಗಲಿಲ್ಲ. ಆಗ ಪಾರ್ವತಮ್ಮ ರಾಜ್‌ಕುಮಾರ್ ಅವರು ಉದ್ಧರಿಸಿದ್ದು ಹೀಗೆ – "ಡಾ॥ ರಾಜ್ ನಮ್ಮ ಮನೆಯವರಾಗಿ ಮಾತ್ರವಲ್ಲದೆ 5 ಕೋಟಿ ಕನ್ನಡಿಗರ ಆರಾಧ್ಯದೈವವಾಗಿದ್ದು ನಾವು ವಿಧಿ ಪೂರಕವಾಗಿ ಅಂತ್ಯಸಂಸ್ಕಾರ ನಡೆಸಲಾಗಲಿಲ್ಲ."

ಸಾರ್ವಜನಿಕರೆಲ್ಲ ಹಿಂತಿರುಗಿದ ನಂತರ ರಾತ್ರಿ 9–30ಕ್ಕೆ ರಾಜ್ ಮಕ್ಕಳು ಮತ್ತು ಮನೆಯವರು ಬಂದು ವಿದ್ಯುಕ್ತವಾಗಿ ಧಾರ್ಮಿಕ ಪೂಜೆಯೊಂದಿಗೆ ಅಂತಿಮ ವಿಧಿ ಕ್ರಿಯೆಗಳನ್ನು ನೆರವೇರಿಸಿದರು.

ತಮ್ಮ ಚಿತ್ರಗಳ ಮೂಲಕ ನಾಡಿನ ಚಿತ್ರರಸಿಕರ ಮನವನ್ನು ಗೆದ್ದಿದ್ದ ಡಾ॥ ರಾಜ್‌ರವರ ಆತ್ಮ ಈ ಎಲ್ಲ ಗಲಭೆ, ಆಸ್ತಿ ಪಾಸ್ತಿಯ ಹಾನಿ ನೋಡಿ ಅದೆಷ್ಟು ಕಣ್ಣೀರಿಟ್ಟಿರಬಹುದು !?

ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಅಂತಿಮ ದರ್ಶನ

ಜನನಾಯಕರು ಜನಪ್ರಿಯ ವ್ಯಕ್ತಿಗಳು ನಿಧನ ಹೊಂದಿದಾಗ ಅಂತಹ ಸುದ್ದಿಯನ್ನು ನೀಡುವುದೇ ಅಲ್ಲದೆ ಅಂತಹ ನಾಯಕರ ಸಾಧನೆಯನ್ನು, ವಿಶೇಷತೆಗಳನ್ನು ಜನತೆಯ ಎದುರಿಗಿಡುವುದು ಮಾಧ್ಯಮಗಳು ನಿರ್ವಹಿಸಬೇಕಾದ ಅಗಾಧ ಕರ್ತವ್ಯ

ಅದರಲ್ಲಿಯೂ ಎಲೆಕ್ಟ್ರಾನಿಕ್ ಮಾಧ್ಯಮಗಳು ಇಂಥ ಸಂದರ್ಭದಲ್ಲಿ ಅತ್ಯಂತ ಶೀಘ್ರವಾಗಿ ಕಾರ್ಯೋನ್ಮುಖವಾಗಬೇಕಾಗುತ್ತದೆ. ಸುದ್ದಿಯನ್ನು ಆದ್ಯತೆಯನ್ನಾಗಿ ತೆಗೆದುಕೊಂಡು ತಕ್ಷಣದಲ್ಲಿಯೇ ನೀಡಬೇಕಾಗುತ್ತದೆ.

ರಾಜಕುಮಾರ್ ನಿಧನವಾದಾಗ ಮೊದಲು ಸುದ್ದಿ ನೀಡಿದ್ದು ಸಿ.ಎನ್.ಎನ್. ಐ.ಬಿ.ಎನ್.

ಕನ್ನಡದ ವಾಹಿನಿಗಳಲ್ಲಿ ಪ್ರಮುಖವಾದ ಎರಡು ವಾಹಿನಿಗಳು – ಈಟಿ.ವಿ. ಮತ್ತು ಉದಯ ತಮ್ಮ ಸಂಗ್ರಹದಲ್ಲಿದ್ದ ರಾಜ್ ಅಭಿನಯದ ಚಿತ್ರಗಳನ್ನು ಸುದ್ದಿಯ ಮಧ್ಯೆ ನಿರಂತರವಾಗಿ ಪ್ರಸಾರ ಮಾಡಿದರವು.

ಉಳಿದ ರಾಷ್ಟ್ರೀಯ ವಾಹಿನಿಗಳು ರಾಜ್ ನಿಧನದ ಬಗ್ಗೆ ವಿಶೇಷ ಗಮನ ಕೊಟ್ಟು ಪ್ರಮುಖವಾಗಿ ಕಾರ್ಯಕ್ರಮಗಳನ್ನು ಪ್ರಸಾರ ಮಾಡಿದವು.

ರಾಷ್ಟ್ರೀಯ ವಾಹಿನಿಗಳಲ್ಲೊಂದಾದ ಎನ್.ಡಿ.ಟಿ.ವಿ.ಯಂತೂ ಈ ಸಂದರ್ಭದಲ್ಲಿ ಕರ್ನಾಟಕದಲ್ಲಿ ರಾಜ್ ಬಗೆಗಿನ ಜನತೆಯ ಅಭಿಮಾನವನ್ನೇ ಪ್ರಮುಖವಾಗಿಟ್ಟು ಕೊಂಡು 'ದಕ್ಷಿಣ ಭಾರತದಲ್ಲಿ ಚಿತ್ರನಟರ ಬಗ್ಗೆ ಅಷ್ಟೊಂದು ಗೀಳು ಏಕೆ?' ಎಂಬುದರ ಬಗ್ಗೆ ವಿಶೇಷ ಚರ್ಚೆ ಕಾರ್ಯಕ್ರಮವನ್ನು ಏರ್ಪಡಿಸಿ ಪ್ರಸಾರ ಮಾಡಿತು.

ಆದರೆ ಒಂದು ದುರದೃಷ್ಟಕರ ಸಂಗತಿ ಎಂದರೆ ಡಾ॥ ರಾಜ್ ಸಂಸ್ಕಾರದ ದಿನ ನಡೆದ ಗಲಭೆ ದೊಂಬಿಯ ಕಾರಣದಿಂದಾಗಿ ಯಾವೊಂದು ವಾಹಿನಿಯೂ ಅಂತಹ ನಟ ಸಾರ್ವಭೌಮನ ಅಂತ್ಯ ಸಂಸ್ಕಾರದ ಚಿತ್ರಣವನ್ನು ಪ್ರಸಾರ ಮಾಡಲಿಕ್ಕೆ ಸಾಧ್ಯವಾಗದಿದ್ದುದು. ಕೆಲವೊಂದು ವಾಹಿನಿಗಳು ತನ್ನ ವೀಕ್ಷಕರಿಗಾಗಿ ನೇರಪ್ರಸಾರ ಮಾಡುವ ವ್ಯವಸ್ಥೆಗಳನ್ನು ಮಾಡಿಕೊಂಡಿದ್ದರೂ ಸಹ ಫಲಪ್ರದವಾಗಲಿಲ್ಲ. ಹಾಗೊಂದು ವೇಳೆ ಅಂತ್ಯ ಸಂಸ್ಕಾರದ ಚಿತ್ರಣ ಮತ್ತು ಪ್ರಸಾರ ಸಾಧ್ಯವಾಗಿದ್ದಿದ್ದಲ್ಲಿ ದೃಶ್ಯಮಾಧ್ಯಮದಲ್ಲಿ ಅದು ಮಹತ್ತರ ಕೃತಿಯಾಗಿ ಉಳಿಯಬಹುದಿತ್ತು.

ರಾಜ್‌ಗೆ ಸಂದ ವಿಶಿಷ್ಟ ನಮನ

ರಾಜ್ ಅಂತ್ಯಕ್ರಿಯೆಯ ಸಮಯದಲ್ಲಿ ಏನೇ ಗಲಭೆ ದೊಂಬಿಗಳು ನಡೆದಿರಲಿ, ಅವರಿಗೆ ಸಂದ ಅಶ್ರುತರ್ಪಣ ನಮನಗಳು ದಾಖಲೆ ಮೀರಿದ ರೀತಿಯಲ್ಲಿ ನಡೆದಿದೆ.

ಕೇವಲ ರಾಜ್ಯದಲ್ಲಿಯೇ ಅಲ್ಲದೆ ನಮ್ಮ ರಾಷ್ಟ್ರಾಧ್ಯಕ್ಷರಿಂದ ಮೊದಲುಗೊಂಡು ವಿದೇಶಗಳಲ್ಲಿಯೂ ಸಹ 'ರಾಜ್ ನಮನ' ಕಾರ್ಯಕ್ರಮಗಳು ನಡೆದಿವೆಯೆಂದರೆ ಅವರ ಜನಪ್ರಿಯತೆಯ ಹರವು ಎಷ್ಟರ ಮಟ್ಟಿಗೆ ಇತ್ತೆಂದು ತಿಳಿಯುತ್ತದೆ.

ಆಸ್ಟ್ರೇಲಿಯ ಅನಿವಾಸಿ ಕನ್ನಡಿಗರ ವತಿಯಿಂದ ಏಪ್ರಿಲ್ 13ರಂದು ಆಸ್ಟ್ರೇಲಿಯಾದ ಅಡಿಲೇಡ್‌ನಲ್ಲಿ ವಿಶೇಷ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಆಸ್ಟ್ರೇಲಿಯಾ ಕನ್ನಡ ಸಮುದಾಯದ ಪರವಾಗಿ ರಾಜ್‌ಕುಮಾರ್ ಅವರ ಸಾಧನೆ ಸಿದ್ಧಿ ಜನಪ್ರಿಯತೆಗಳ ಗುಣಗಾನ ಮಾಡಲಾಯಿತು.

ಅಲ್ಲದೆ ದೇಶವಿದೇಶಗಳಿಂದ ರಾಜ್ ಅಭಿಮಾನಿಗಳು ತಮ್ಮ ಸಂತಾಪ ಸೂಚಕ ಸಂದೇಶಗಳ ಹೊಳೆಯನ್ನೇ ಹರಿಸಿದರು.

ರಾಜ್ ನಿಧನದ ಸಂದರ್ಭದಲ್ಲಿ ಇಂದೋರ್‌ನಲಿ ಇಂಗ್ಲೆಂಡ್ ವಿರುದ್ಧ ಏಳನೇ ಮತ್ತು ಅಂತಿಮ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಭಾರತ ತಂಡದಲ್ಲಿದ್ದ ಕರ್ನಾಟಕದ ಕ್ರಿಕೆಟ್ ಆಟಗಾರರು ತಮ್ಮದೇ ಆದ ರೀತಿಯಲ್ಲಿ ರಾಜ್ ನಿಧನಕ್ಕೆ ತೋರಿಸಿದ ಸಂತಾಪ ಮತ್ತು ಗೌರವ ವಿಶಿಷ್ಟ ಬಗೆಯದು.

ಕರ್ನಾಟಕದ ಕ್ರಿಕೆಟ್ ಕಲಿಗಳಾದ ರಾಹುಲ್ ದ್ರಾವಿಡ್, ರಾಬಿನ್ ಉತ್ತಪ್ಪ, ತೋಳಿಗೆ ಕಪ್ಪು ಪಟ್ಟಿ ಕಟ್ಟಿಕೊಂಡು ಆಟವಾಡಿ ಅಗಲಿದ ಧೀಮಂತ ನಟನಿಗೆ ಗೌರವನ್ನು ಸೂಚಿಸಿದರು. ಅವರ ಈ ವಿಶಿಷ್ಟ ರೀತಿಯ ತಮ್ಮ ಸಂತಾಪ ಸೂಚನೆ ಅತ್ಯಂತ ಗಮನಾರ್ಹವಾಗಿತ್ತು. ಈ ಆಟಗಾರರೊಂದಿಗೆ ಕರ್ನಾಟಕದವರೇ ಆದ ಅಂಪೈರ್ ಎ.ವಿ. ಜಯಪ್ರಕಾಶ್ ಅವರೂ ಸಹ ತೋಳಿಗೆ ಕಪ್ಪು ಪಟ್ಟಿ ಕಟ್ಟಿಕೊಂಡು ತಮ್ಮ ಅಂಪೈರ್‌ಗಿರಿಯನ್ನು ನಿರ್ವಹಿಸಿದರು.

ಕರ್ನಾಟಕದ ಈ ಕ್ರಿಕೆಟಿಗರ ವಿಶಿಷ್ಟ ಗೌರವ ಪ್ರದರ್ಶನ ವಿಶ್ವದ ಮಟ್ಟದಲ್ಲಿ ಎಲ್ಲ ಕ್ರೀಡಾಸಕ್ತರ ಗಮನ ಸೆಳೆಯುವಂತಾಯಿತು.

ರಾಜ್ ಅಂತ್ಯ ಸಂಸ್ಕಾರದ ನಂತರ

"ಇದೇ ನಮ್ಮ ಕರ್ಮಭೂಮಿ. ಇದೇ ನಮ್ಮ ದೇವಸ್ಥಾನ ಈ ಸ್ಥಳಗಳಲ್ಲಿ ಓಡಾಡುತ್ತಿದ್ದರೆ ಶಾಂತಿ ಸಿಗುತ್ತದೆ" ಎಂದು 1968ರಲ್ಲಿ ಕಂಠೀರವ ಸ್ಟೂಡಿಯೋ ಬಗ್ಗೆ ಡಾ॥ ರಾಜ್ ಹೇಳುತ್ತಿದ್ದ ಮಾತಿದು. ಅವರ ಅನೇಕ ಚಿತ್ರಗಳ ಚಿತ್ರೀಕರಣ ನಡೆದದ್ದು ಇಲ್ಲಿಯೇ ಚಿತ್ರೀಕರಣ ಆರಂಭವಾಗುವುದಕ್ಕೆ ಮುನ್ನ ಆವರಣದಲ್ಲಿರುವ ಮುನೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಲು ರಾಜ್ ಎಂದೂ ಮರೆಯುತ್ತಿರಲಿಲ್ಲ. ಈ ಸ್ಟೂಡಿಯೋ ಅಂಗಳವೇ ಇಂದು ಅವರ ಶಾಶ್ವತ ನೆಲೆಯಾಗಿದೆ.

ನಗರದ ಯತಿರಾಜು, ಶಂಕರ್, ಮೈಕೋ ಚಂದ್ರು, ಲಕ್ಷ್ಮೀನಾರಾಯಣ, ಗಣೇಶ ಹಾಗೂ ನರಸಿಂಹ ಈ ಆರು ಜನ ಅಭಿಮಾನಿಗಳು ಜನ ಜಾತ್ರೆಯಿಂದ ರಾಜ್ ಸಮಾಧಿಗೆ ಹಾನಿಯಾಗದಂತೆ ಎಚ್ಚರವಹಿಸಿ ಹಗಲು ರಾತ್ರಿ ಕಾಯುತ್ತಾ ರಾಜ್ ಮೇಲಿನ ತಮ್ಮ ಗೌರವವನ್ನು ವ್ಯಕ್ತ ಪಡಿಸುತ್ತಿದ್ದರು. ಸಮಾಧಿಯಿಂದ ಮಣ್ಣು ಅಥವಾ ಹೂ ಪಡೆಯಲು ಜನರ ಪೈಪೋಟಿಯಲ್ಲಿ ಸಮಾಧಿಗೆ ಧಕ್ಕೆಯಾಗುವ ಸಾಧ್ಯತೆ ಇದ್ದು ಇವರು ಅದರ ಬಗ್ಗೆ ಕಾಳಜಿ ವಹಿಸಿ ಬರುವ

ಜನರು ಯಾವುದೇ ರೀತಿಯಲ್ಲಿ ಸಮಾಧಿಗೆ ಧಕ್ಕೆ ತರದ ರೀತಿಯಲ್ಲಿ ಪೂಜೆ ನಡೆಸಲು ಸಹಕರಿಸುತ್ತಿದ್ದರು. ಅಲ್ಲದೆ ದುಃಖತಪ್ತರಿಗೆ ಸಮಾಧಾನ ಹೇಳುತ್ತಿದ್ದರು. ನಿಧನದ ಎರಡು ದಿನಗಳ ನಂತರ ಮಳೆ ಬಂದಾಗ ಈ ಜನರೇ ಜಮಖಾನ ಮತ್ತು ಜಾಹೀರಾತಿನ ಹಾಳೆಗಳಿಂದ ಮರೆಮಾಡಿ ರಾಜ್ ಸಮಾಧಿಗೆ ಮಳೆ ನೀರು ಬರದಂತೆ ನೋಡಿಕೊಂಡಿದ್ದರು. ರಾಜ್ ಸಮಾಧಿಗೆ ಅಭಿಮಾನಿಗಳ ಮಹಾಪೂರ ಬಂದು ಪೂಜೆ ಸಲ್ಲಿಸುತ್ತಿತ್ತು. ಪಕ್ಕದಲ್ಲಿ ಶ್ಯಾಮಿಯಾನ ಹಾಕಿ ಡಾ॥ ರಾಜ್ ಫೋಟೊ ಇಡಲಾಗಿತ್ತು. ಪೂಜಾಸ್ಥಳವಾದ ಸಮಾಧಿಗೆ ಪ್ರತಿ ದಿನ 25ರಿಂದ 30 ಸಾವಿರದವರೆಗೂ ಕರ್ನಾಟಕದ ವಿವಿಧ ಭಾಗಳಿಂದ ನಮನ ಸಲ್ಲಿಸಲು ಬರುತ್ತಿದ್ದರು. ಇದರಿಂದ ವ್ಯಾಪಾರಿಗಳಿಗೂ ಭರ್ಜರಿ ವ್ಯಾಪಾರವಾಗುತ್ತಿತ್ತು. ಹೂವು, ಹಾರ, ಊದುಬತ್ತಿಗಳ ಜೊತೆಗೆ ಎಳನೀರು, ಕಿತ್ತಲೆ, ಕಲ್ಲಂಗಡಿ ಹಣ್ಣುಗಳ ಮಾರಾಟವೂ ಆಗುತ್ತಿತ್ತು. ಛಾಯಾಚಿತ್ರಕಾರರು ಸಹ 20ರೂನಂತೆ ಫೋಟೊ ತೆಗೆದುಕೊಡುತ್ತಿದ್ದರು. ವ್ಯಾಪಾರಸ್ಥರು ಆಯಾವಸ್ತುವಿನ ಬೆಲೆ ಏರಿಸಲಿಲ್ಲ. ಏರಿಸಿದರೆ ಅದು ಅಣ್ಣಾವ್ರಿಗೆ ಮಾಡುವ ಅಪಮಾನ ಎಂಬ ಭಾವನೆಯಿಂದಿದ್ದರು.

14-04-2006ರಂದು ಸಂಜೆ ರಾಜ್ ಬಂಧುಗಳೆಲ್ಲರೂ ಭಾಗವಹಿಸಿ ಸಂಪ್ರದಾಯದಂತೆ ಹಾಲುತುಪ್ಪ ಜೊತೆಗೆ ಡಾ॥ ರಾಜ್‌ಗೆ ಪ್ರಿಯವಾದ ಹಣ್ಣು, ತಿಂಡಿ, ಪಾನೀಯವನ್ನು ಸಮಾಧಿಯ ಮೇಲೆ ಇಟ್ಟು, ಪಾರ್ವತಮ್ಮ ಅವರ ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಬಂದುಭಾಂದವರು ಸಮಾಧಿ ಸುತ್ತ ಪ್ರದಕ್ಷಿಣೆ ಹಾಕಿ ಹೂ ಅರ್ಪಿಸಿ ಮಂಗಳಾರತಿ ಮಾಡಿ ಹಿಂತಿರುಗಿದರು. ಈ ಕುಟುಂಬ ವರ್ಗ ನಂತರ ಪ್ರತಿ ತಿಂಗಳೂ ಬಂದು ಪೂಜಾಕಾರ್ಯಗಳನ್ನು ನೆರವೇರಿಸುತ್ತಿದೆ. ಪಾರ್ವತಮ್ಮನವರು ರಾಜ್ ಇಚ್ಛೆಯಂತೆ ಗಾಜನೂರಿನ ಮಣ್ಣನ್ನು ಸಮಾಧಿಗೆ ಸೇರಿಸಿದ್ದಾರೆ.

ಸರ್ಕಾರದ ವತಿಯಿಂದ ಸ್ಮಾರಕ ನಿರ್ಮಾಣ ಆಗುವವರೆಗೆ ಸಮಾಧಿಯ ಬಳಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಸಮಾಧಿಯ ಸುತ್ತ ಕಬ್ಬಿಣದ ಬ್ಯಾರಿಕೇಡ್ ನಿರ್ಮಾಣ, ಕುಡಿಯುವ ನೀರಿನ ವ್ಯವಸ್ಥೆ, ವಿದ್ಯುತ್ ಸರಬರಾಜ್‌ಗಾಗಿ ಜನರೇಟರ್ ಮತ್ತು ಬಿಸಿಲು ಮಳೆಯಿಂದ ರಕ್ಷಿಸಲು ತಾತ್ಕಾಲಿಕ ಮೇಲ್ಚಾವಣಿ ಮೊದಲಾದ ಕಾಮಗಾರಿಗಳನ್ನು ಮಹಾನಗರಪಾಲಿಕೆ ಕೈಗೆತ್ತಿಕೊಂಡಿತ್ತು.

ಸಮಾಧಿ ಸ್ಥಳದ ಬಳಿ ವಿವಿಧ ಧರ್ಮಗಳವರಿಂದ ಹಾಡು, ಭಜನೆ ನಡೆಯುತ್ತಿತ್ತು. ಅಭಿಮಾನಿಗಳ ಜೊತೆ ರಾಜಕೀಯ ಪಕ್ಷಗಳ ಮುಖಂಡರೂ, ಸಂಘಸಂಸ್ಥೆಗಳ ಪದಾಧಿಕಾರಿಗಳೂ, ಚಲನಚಿತ್ರರಂಗದ ಗಣ್ಯರೂ ಭೇಟಿ ಕೊಟ್ಟು ಅಣ್ಣಾವ್ರಿಗೆ ಗೌರವ ಸಲ್ಲಿಸಿದರು. ರಾಜ್ಯದ ಹಾಗೂ ದೇಶದ ವಿವಿಧ ಭಾಗಗಳಿಂದಲ್ಲದೆ ಅಮೆರಿಕ ಕನ್ನಡ ಸಂಘ (ಅಕ್ಕ), ಆಸ್ಟ್ರೇಲಿಯಾ ಕನ್ನಡ ಸಂಘ, ಸಿಂಗಪುರ್ ಕನ್ನಡ ಸಂಘ ಮತ್ತು ಕೆನಡ ಕನ್ನಡ ಸಂಘದ ಸದಸ್ಯರೂ ಸಹ ರಾಜ್ ಸಮಾಧಿ ದರ್ಶನ ಮಾಡಿದರು. ವರನಟ ವಿಧಿವಶರಾಗಿ ಒಂದು ತಿಂಗಳ ನಂತರವೂ ದರ್ಶನ ಪಡೆಯಲು ಬರುವವರ ಜನಪ್ರವಾಹ ತಗ್ಗಿರಲಿಲ್ಲ. ಜನ ಕೈಯಲ್ಲಿ ಹೂವು, ಹಾರ, ಹಣ್ಣು, ಅಗರಬತ್ತಿ, ತೆಂಗಿನಕಾಯಿ ಮತ್ತೆ ಕೆಲವರು ಅಭಿಷೇಕಕ್ಕೆ ಹಾಲು ತೆಗೆದುಕೊಂಡು ಬರುತ್ತಿದ್ದುದು ಸಾಮಾನ್ಯವಾಗಿತ್ತು.

ರಾಜ್ ಅಂತ್ಯ ಸಂಸ್ಕಾರದಲ್ಲಿ ಭಾವಹಿಸಲು ಸಾಧ್ಯವಾಗದ ಮುಖ್ಯಮಂತ್ರಿ ಕುಮಾರಸ್ವಾಮಿಯವರು ಡಾ॥ ರಾಜ್ ಮನೆಗೆ ಭೇಟಿ ನೀಡಿ ಪಾರ್ವತಮ್ಮ ನವರೊಂದಿಗೆ ಸ್ಮಾರಕ ನಿರ್ಮಾಣದ ಬಗ್ಗೆ "ನಿಮ್ಮ ಕುಟುಂಬ ವರ್ಗದವರೊಂದಿಗೆ, ಚಿತ್ರರಂಗದ ಗಣ್ಯರೊಂದಿಗೆ ಚರ್ಚಿಸಿ ಸರ್ಕಾರ ತೀರ್ಮಾನತೆಗೆದುಕೊಳ್ಳಲಿದೆ. ಚಿತ್ರರಂಗ ಮತ್ತು ರಂಗಭೂಮಿಗೆ ರಾಜ್ ನೀಡಿರುವ ಕೊಡುಗೆಯನ್ನು ಶಾಶ್ವತವಾಗಿ ಉಳಿಸಿಕೊಳ್ಳುವ ಮೂಲಕ ಗೌರವ ಸಲ್ಲಿಸಲು ಅಗತ್ಯ ಕ್ರಮವನ್ನು ಸರ್ಕಾರ ತೆಗೆದುಕೊಳ್ಳಲಿದೆ" ಎಂದರು.

ಚಲನಚಿತ್ರ ವಾಣಿಜ್ಯ ಮಂಡಳಿ ಏರ್ಪಡಿಸಿದ್ದ ಡಾ॥ ರಾಜ್ ನುಡಿನಮನ ಕಾರ್ಯಕ್ರಮದಲ್ಲಿಯೂ "ವರನಟನ ಶಾಶ್ವತ ನೆನಪಿಗೆ ಯೋಜನೆ ರೂಪಿಸಿ ಅವರ ಆಕಾಂಕ್ಷೆ ಪೂರೈಸಲಾಗುವುದು" ಎಂದಿದ್ದರು.

ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ನಿರ್ಮಾಣವಾಗುವ ಗಾಜಿನ ಮನೆಗೆ ಕೆಂಪೇಗೌಡ ದಿನಾಚರಣೆಯಂದು ಶಂಕುಸ್ಥಾಪನೆ ನೆರವೇರಿಸಿ "ಡಾ॥ ರಾಜ್ ಹೆಸರನ್ನಿಡಲಾಗುವುದು ಮತ್ತು ಪುರಭವನದ ಬಳಿ ಕಿತ್ತೂರು ಚನ್ನಮ್ಮ ಪ್ರತಿಮೆಯ ಪಕ್ಕ ಇರುವ ಉದ್ಯಾನವನದಲ್ಲಿ ಮೇಯರ್ ಮತ್ತು ಉಪಮೇಯರ್ ಅವರ ನಿಧಿಯಲ್ಲಿ ಕಂಚಿನ ಪುತ್ಥಳಿ ಸ್ಥಾಪಿಸಲು ನಗರಪಾಲಿಕೆಯಲ್ಲಿ ನಿರ್ಣಯ ಅನುಮೋದಿಸಲಾಗಿದೆ" ಎಂದು ಮೇಯರ್ ಮುಮ್ತಾಜ್ ಬೇಗಂ ಹೇಳಿದರು. ಅದರಂತೆಯೇ ಕಂಚಿನ ಪ್ರತಿಮೆಗೆ ಮಂಜೂರಾಗಿರುವ ಮೊಬಲಗನ್ನು ಅದರ ಶಿಲ್ಪಿಗೆ ನೀಡಲಾಗಿದೆ.

ಅಭಿಮಾನಿಗಳು ಹೀಗೂ ಇರುತ್ತಾರೆ

1. ಕೆಲವರು ಸಮಾಧಿಯನ್ನು ದೇವಾಲಯವನ್ನಾಗಿ ಮಾಡಲು ಒಂದು ದೊಡ್ಡ ಗಂಟೆಯುನ್ನು ಕಟ್ಟಲು ತಂದಿದ್ದರು. ಆದರೆ ಪೊಲೀಸಿವರು ಅನುವುಮಾಡಿಕೊಡಲಿಲ್ಲ.
2. ನಂದಿನಿ ಲೇಔಟ್‌ನ ಒಬ್ಬರು ಡಾ॥ ರಾಜ್ ಸಮಾಧಿಗೆ ಭಕ್ತಿಪೂರಕ ನಮಿಸಿ "ನನ್ನ ತಮ್ಮ ಡಿಗ್ರಿ ಮಾಡಿದ್ದಾನೆ, ಕೆಲಸ ಸಿಕ್ಕಿಲ್ಲ ಆದ್ದರಿಂದ ಕೆಲಸ ಕೊಡ್ಸಿ ಅಂತ ಬೇಡಲು ಬಂದಿದ್ದೀನಿ ಎಂದರು.
3. ಚನ್ನಪಟ್ಟಣದಿಂದ ಬಂದವರೊಬ್ಬರು ತಮ್ಮ ಏಳು ತಿಂಗಳ ಮಗುವಿಗೆ "ರಾಜ್‌ಕುಮಾರ" ಎಂದು ಹೆಸರಿಡುವುದಾಗಿ ಹೇಳಿದರು.
4. ತಿಪಟೂರಿನ ಅಭಿಮಾನಿಯೊಬ್ಬರು ಸಮಾಧಿಸುತ್ತ ಉರುಳು ಸೇವೆ ಮಾಡಿದ್ದರು.
5. ತಮ್ಮ ಚಿನ್ನದ ಒಡವೆ ಒತ್ತೆ ಇಟ್ಟು ಬೆಳಗಾವಿಯಿಂದ ಮಹಿಳೆಯರು ಬಂದಿದ್ದರು.
6. "ಸ್ವಲ್ಪ ಸಮಾಧಿಯ ಮಣ್ಣುಕೊಡುತ್ತೀರಾ ನಮ್ಮ ತುಳಸಿಗಿಡಕ್ಕೆ ಹಾಕುತ್ತೇವೆ" ಎಂದಿದ್ದರು ಕೆಲವರು.
7. ಟಿ. ನರಸೀಪುರದಿಂದ ಬಂದಿದ್ದ ಮುಸ್ಲಿಂ ಕುಟುಂಬದವರು ಪ್ರಾರ್ಥನೆ ಸಲ್ಲಿಸಿ ಧಾರ್ಮಿಕ ಪುಸ್ತಕ ಸಮಾಧಿಯ ಮೇಲೆ ಇಟ್ಟಿದ್ದಾರೆ.
8. ಮಕ್ಕಳನ್ನು ಸಮಾಧಿಯ ಮೇಲೆ ಮಲಗಿಸಿ "ಬುದ್ಧಿ ಕೊಡಪ್ಪ" ಎನ್ನುವವರಿದ್ದಾರೆ.
9. ಬಯಕೆ ತೀರುವುದಕ್ಕಾಗಿ ಕೆಲವು ಮನೆಯವರು ಬಸುರಿಯನ್ನು ಸಮಾಧಿಯ ದರ್ಶನಕ್ಕೆ ಕರೆ ತಂದಿದ್ದರು.
10. ಮೇಣದ ಬತ್ತಿ ಇಡುವ ಕ್ರಿಸ್ತರ ಸಂಖ್ಯೆ ಗಣನೀಯವಾಗಿದೆ.
11. ಬೆಂಗಳೂರಿಗೆ ಕೆಲಸದ ಮೇಲೆ ಅಥವಾ ಮದುವೆ ಸಮಾರಂಭಗಳಿಗೆ ಬರುವ ಪರಸ್ಥಳದವರೂ ಸಹ ಸಮಾಧಿ ದರ್ಶನ ಮಾಡಿ ಹೋಗುತ್ತಿದ್ದಾರೆ.

12. ಮೇ 2006ರ ಮೊದಲ ವಾರದಲ್ಲಿ ಒಂದು ಕೋಳಿ ಸಮಾಧಿ ಸುತ್ತ ತಿರುಗುತ್ತಿತ್ತು. ಓಡಿಸಿದರೂ ಸಹ ಮತ್ತೆ ಮತ್ತೆ ಬರುತ್ತಿತ್ತು. ರಾತ್ರಿ ಸಹ ಅಲ್ಲಿಯೇ ಮಲಗಿರುತ್ತಿತ್ತು. ಮೂರು ದಿನಗಳ ನಂತರ ಆ ಕೋಳಿ ರಾಜ್ ಸಮಾಧಿ ಬಳಿಯೇ ಪ್ರಾಣ ಬಿಟ್ಟಿತ್ತು.

ರಾಜ್ ನೆನಪಿನಲ್ಲಿ

ರಾಜ್ ನಿಧನದ ನಂತರ ಬೆಂಗಳೂರು ಹಾಗೂ ರಾಜ್ಯದ ನಾನಾ ಕಡೆಗಳಲ್ಲಿ ರಾಜ್ ನೆನಪನ್ನು ಚಿರಸ್ಥಾಯಿಗೊಳಿಸಲು ಹಲವಾರು ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಶ್ರದ್ಧಾಂಜಲಿ ಸಭೆಗಳನ್ನು ನಡೆಸಿ ಅಶ್ರುತರ್ಪಣ ನೀಡಲಾಯಿತು.

ಅಭಿಮಾನಿಗಳು ಅನೇಕ ರಸ್ತೆಗಳಿಗೆ ರಾಜ್‌ಕುಮಾರ್ ರಸ್ತೆ ಎಂದು ಹೆಸರಿಟ್ಟರು, ಮುತ್ತು ಕುಮಾರ ರಸ್ತೆ ಎಂದು ನಾಮಕರಣ ಮಾಡಿದರು. ಉದ್ಯಾನವನಗಳಿಗೆ ಅವರ ಹೆಸರನ್ನಿಟ್ಟರು.

ರಾಜ್‌ರ ಪ್ರತಿಮೆಗಳನ್ನು ನಾನಾಕಡೆಗಳಲ್ಲಿ ಸ್ಥಾಪಿಸಿದರು. ರಾಜ್ ಪಾತ್ರವಹಿಸಿದ ವಿಶಿಷ್ಟ ಅಭಿನಯದ ಭಂಗಿಗಳಲ್ಲಿ ರಾಜ್ ಮೂರ್ತಿಗಳನ್ನು ಪ್ರತಿಷ್ಠಾಪಿಸಿದರು.

ಇಷ್ಟೆಲ್ಲ ಆದರೂ ರಾಜ್ ಸಮಾಧಿಯ ಸ್ಥಳದಲ್ಲಿ ಸ್ಮಾರಕ ನಿರ್ಮಾಣಕ್ಕೆ ಸೂಕ್ತ ವ್ಯವಸ್ಥೆ ಆಗಿಲ್ಲವೆಂಬುದು ಅಭಿಮಾನಿಗಳಲ್ಲಿ ಬೇಸರ ಮೂಡಿಸಿದೆ. ಮುಖ್ಯಮಂತ್ರಿ ಕುಮಾರಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸ್ಮಾರಕ ನಿರ್ಮಾಣಕ್ಕಾಗಿ ಒಂದು ಸಮಿತಿಯನ್ನೇನೊ ರಚಿಸಲಾಗಿದೆ. ಆ ಸಮಿತಿಯಲ್ಲಿ ಪಾರ್ವತಮ್ಮ ರಾಜ್‌ಕುಮಾರ್, ಸಚಿವರಾದ ಎಂ.ಪಿ.ಪ್ರಕಾಶ್ ಹಾಗೂ ಅಶೋಕ್ ಅವರಲ್ಲದೆ ಹಲವು ಉನ್ನತ ಅಧಿಕಾರಿಗಳೂ ಇದ್ದಾರೆ. ಆದರೆ ಸ್ಮಾರಕದ ನಿರ್ಮಾಣದ ಬಗ್ಗೆ ಯಾವುದೇ ರೀತಿಯ ಪ್ರಗತಿ ಕಾಣಬರುತ್ತಿಲ್ಲ.

ಮುಖ್ಯಮಂತ್ರಿಗಳಾದ ಶ್ರೀ ಕುಮಾರಸ್ವಾಮಿಯವರು "ರಾಜ್‌ರವರಂತಹ ಶ್ರೇಷ್ಠ ಕಲಾವಿದರ ನೆನಪು ಶಾಶ್ವತವಾಗಿ ಉಳಿಯುವಂತಹ ಸ್ಮಾರಕ ನಿರ್ಮಾಣವಾಗಬೇಕು. ಆಬಗ್ಗೆ ಅಧಿಕಾರಿಗಳು ನೀಲನಕ್ಷೆ ತಯಾರಿಸುತ್ತಿದ್ದಾರೆ. ಅದು ಪೂರ್ಣಗೊಂಡ ನಂತರ ಸಮಿತಿ ಸಭೆಯಲ್ಲಿ ಚರ್ಚಿಸಿ ಆದಷ್ಟು ಬೇಗ ಸ್ಮಾರಕ ನಿರ್ಮಾಣ ಕೆಲಸ ಆರಂಭವಾಗುತ್ತದೆ" ಎಂದು ಇತ್ತೀಚೆಗೆ ಹೇಳಿದ್ದಾರೆ.

ಅಲ್ಲದೆ ಹಣಕಾಸಿನ ಮಂತ್ರಿಗಳಾದ ಶ್ರೀ ಯಡಿಯೂರಪ್ಪವರು 2007–08ರ ಮುಂಗಡ ಪತ್ರವನ್ನು ಮಂಡಿಸುವಾಗ ಸ್ಮಾರಕ ನಿರ್ಮಾಣ ಕಾರ್ಯಕ್ಕೆ 2 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿರುವುದು ಹಣಕಾಸಿನ ವಿಷಯದ ಕೊರತೆಯನ್ನು ನಿವಾರಿಸುವ ಭರವಸೆಯನ್ನು ಇತ್ತಿದೆ.

♦♦♦♦♦





ಆ ದೇವನಾಡುವ ಗೊಂಬೆಯಾಟವಯ್ಯ

- ವೇದಪುಷ್ಪ

ನಟವರ್ಯ ಡಾ॥ ರಾಜ್‌ಕುಮಾರ್‌ರರ ಒತ್ತೆಯಾಳು-ಸ್ಥಿತಿಯಾ
ಮುಕ್ತಿಗಾಗಿ ದೇವನಲ್ಲಿ ಪ್ರಾರ್ಥಿಸುತೆ
ನಟಸಾರ್ಭೌಮರಾ ಕ್ಷಮಯಕೋರಿಕೆಯೊಂದಿಗಾದುದೀ ಎನ್ನ ಕವನ

ನಟನಕಲೆಯ ವೃತ್ತಿಪಿಡಿದು - ನಾನಾಪಾತ್ರಧರಿಸಿ-ವರಿಸಿ
ನಟಸಾರ್ವಭೌಮನೆಂಬಾ ಬಿರುದ ಪಡೆದು
ಜನಮನವ ತಣಿಸಿ ಮಾನ್ಯನಾದೆ ನೀ...
ದೈವಭಕ್ತಿ-ದಾರಿ ಹಿಡಿದು ಮನುಜ ಜೀವನದಾಳ-ಅಗಲ
ತಿಳಿದು-ತಿಳಿಯಪೇಳಿಸಂತೆ ಪಕ್ವ-ಪವಿತ್ರನಾಗಿ
ಯೋಗಿಯೆನಿಸಿ ಸಾಧುವಾದೆ ನೀ...

ನಿಜವಾಯ್ತಲ್ಲವೇ ಆ ನಿನ್ನ ಬೇಡರಕಣ್ಣಪ್ಪನಾ ಅಡವಿ ವಾಸ
ಗುರುರಾಘವೇಂದ್ರರೊಡನಾ-ಎಲ್ಲಾದರು ಇಡು
ನಾ ಹಾಯಾಗಿರುವೆ ಎನ್ನುವಾ ನಿನ್ನಾ ಆಶ್ವಾಸನೆ...
ಹಿಂದೆ-ಕೇಳಿದಂತೆ
ದೈವದಾ ಮಹಿಮೆಯಾ ಉಳಿಸಿಬೆಳೆಸಿದಾ ಶುಕ-ಶೌನಕಾದಿ ಭಾಗವತರ
ಮೀರಿದಂತೆ ಭಗವಂತನಾ ಭ್ರಷ್ಟ ಅಜಮಿಳನ ಕರೆಗೆ ಓಗೊಟ್ಟ ತೆರದಿ
ತೆರಳಿದೆ ನೀ ವೀರಪ್ಪನಾ ಭಂಟನೆಂಬಂತವನನುಸರಿಸಿ...

ಸಾಕ್ಷಿಯಾದೆ ನೀ-ನಿಮಿತ್ತಮಾತ್ರವಷ್ಟೆ ನೀನ್ ಅರ್ಜುನಾ-ಎಂಬಾ
ಭಗವದ್ಗೀತೆಯ ಕೃಷ್ಣನಾ ತತ್ವ ನುಡಿಗೆ
ಝಲ್ಲೆನಿಸುತೆ ನಿನ್ನೀ ಮಾನವ ಜನಸ್ತೋಮಕೆ...
ಛನ್ನವಾ ಋಣ-ಮಾರ್ಗ ಈ ಸಾಧುತ್ವ-ಕ್ರೌರ್ಯಗಳಾ ಸಮಾಗಮ
ಅಗಲದು ನಿಮ್ಮೀರ್ವರಾ ಸಮ್ಮಿಲನ ಬ್ರಹ್ಮಾಂಡದಾ ಅವಿಚ್ಛನ್ನತೆಯ-
ನ್ನರುಹುವಾ ನಿಜ ನಟನ-ಧನ್ಯತೆಯು..
(ಡಾ॥ ರಾಜ್ ದಂಪತಿಗಳು ಮೆಚ್ಚಿದ ಕವನ)

♦♦♦♦♦

ನಿನ್ನುಸಿರು ಕನ್ನಡಕೆ ಎಂದೂ ಹರುಷವ ತರಲಿ

– ಕೆ.ಎಸ್.ಎಲ್. ಸ್ವಾಮಿ

ಕನ್ನಡದ ಹೊನ್ನುಡಿಯ ಮುನ್ನಡೆಗೆ ಮೆಟ್ಟಲು
ತಾಯ್ನುಡಿಯ ರಸಸುಧೆಯ ಉಣಿಸುವ ಬಟ್ಟಲು
ಮಮತೆಯಾ ಮಡಿಲಿನಾ ಹಸುಗೂಸ ಹರಸಲು
ನಾಡಿನಾ ಜನತೆಗೆ ಈ ದಿನವು ಮೀಸಲು

ವರದ ಕಾಣಿಕೆಯಾಗಿ ತಾಯ್ ನಮಗೆ ನೀಡಿರಲು
ನಟನೆ ಹಸಿರುಸಿರಾಗಿ ಕಡೆ ತನಕ ನಿಂದಿರಲು
ರಾಜ ಗಂಭೀರತೆಯ ತನ್ನೊಡನೆ ತಂದಿರಲು
ಕುವರ ನೀನು ಚಿರಾಯು ತಾಯ್ ನಿನ್ನ ಹರಸಿಹಳು

ನಿನ್ನ ಬಾಳ್ವೆಯು ಕನ್ನಡಕೆ ರನ್ನ ಕಲಶವಾಗಿರಲ್ಲಿ
ನಿನ್ನ ನುಡಿ ಕನ್ನಡಕೆ ಹೊನ್ನ ನುಡಿಯಾಗಿರಲಿ
ಕನ್ನಡದ ತಾಯ್ ನಿನಗೆ ಮುಂದಾರಿ ತೋರಲಿ
ನಿನ್ನುಸಿರು ಕನ್ನಡಕೆ ಎಂದೂ ಹರುಷವ ತರಲಿ

♦♦♦♦♦



ಡಾ॥ ರಾಜ್ ಸಮಾಧಿಯ ಬಗ್ಗೆ ಗಣ್ಯರು ಮತ್ತು ಅಭಿಮಾನಿಗಳು ನೀಡಿದ ಸಲಹೆ ಸೂಚನೆಗಳು

ಕಂಠೀರವ ಸ್ಟುಡಿಯೋದಲ್ಲೇ ಸ್ಮಾರಕ ಕಟ್ಟಬೇಕು ಅದರಲ್ಲಿ ಬದಲಾವಣೆ ಇಲ್ಲ. ನಮಗೆ ನಾವು ಹೇಳಿದ ರೀತಿಯಲ್ಲೇ ಸ್ಮಾರಕ ಕಟ್ಟಬೇಕು ಎಂಬ ಹಠವಿಲ್ಲ. ಆದರೆ ಸ್ಮಾರಕದ ಬಗ್ಗೆ ಈಗಲೇ ಏನು ಹೇಳುವುದಕ್ಕೆ ಇಷ್ಟಪಡುವುದಿಲ್ಲ.

– ಪಾರ್ವತಮ್ಮ ರಾಜ್‌ಕುಮಾರ್

ದೆಹಲಿಯ ಶಾಂತಿಪಥ್ ಮಾದರಿಯಲ್ಲಿ ಸ್ಮಾರಕ ನಿರ್ಮಿಸುವ ಬಯಕೆ ಇದೆ. ಅಲ್ಲಿ ಭೇಟಿ ನೀಡುವವರಿಗೆ ಡಾ॥ ರಾಜ್‌ಕುಮಾರ್ ಅವರ ಸ್ಮಾರಕ ಇದು ಎನ್ನು ಭಾವನೆ ಮೂಡಬೇಕು. ಅದು ರಾಜ್ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಂತಿರಬೇಕು. ಪುಸ್ತಕ ಭಂಡಾರ ಇರಬೇಕು. ಅವು ಕನ್ನಡದಲ್ಲಿದ್ದರೆ ಸಾಲದು, ಇಂಗ್ಲಿಷ್‌ನಲ್ಲಿಯೂ ಇರಬೇಕು. ಹೊರಗಡೆಯಿಂದ ಬಂದವರಿಗೆ ಇಂಗ್ಲಿಷ್ ಪುಸ್ತಕಗಳು ಸಹಾಯಕವಾಗುತ್ತದೆ. ಅವರ ದೊಡ್ಡ ಸ್ಟಿಲ್‌ಗಳನ್ನು ಹಾಕಬೇಕು, ಕಂಠೀರವ ಸ್ಟುಡಿಯೋದಲ್ಲೇ ಸ್ಮಾರಕ ನಿರ್ಮಾಣವಾದರೆ ಚಿತ್ರರಂಗಕ್ಕೂ ಅನುಕೂಲ. ಮಕ್ಕಳ ಪಾರ್ಕ್ ಕಟ್ಟಬೇಕು. ಪಕ್ಕದಲ್ಲೇ ಹೋಟೆಲ್ ಇರಬೇಕು ಆದರೆ ಹೆಚ್ಚು ಬೆಲೆ ಇರಬಾರದು. ಅದೇ ರೀತಿ ವಿನ್ಯಾಸ ಮಾಡುವ ಆಸೆ ಇದೆ.

– ಶಿವರಾಜ್‌ಕುಮಾರ್

ಅಪ್ಪಾಜಿ ಸ್ಮಾರಕ ಚಿತ್ರರಂಗದವರಿಗೆ ಮಾತ್ರ ಇಷ್ಟವಾದರೆ ಸಾಲದು. ಜನಸಾಮಾನ್ಯರಿಗೂ ಇಷ್ಟವಾಗುವಂತಹ ರೀತಿಯಲ್ಲಿರಬೇಕು.

– ರಾಘವೇಂದ್ರ ರಾಜ್‌ಕುಮಾರ್

ಅಪ್ಪಾಜಿಯವರ ಫೋಟೊ ಸಂಗ್ರಹವಿರಬೇಕು. ಇದುವರೆವಿಗೂ ಯಾವುದೇ ಮಾಧ್ಯಮಗಳಲ್ಲಿ ಪ್ರಕಟವಾಗದ ಫೋಟೊಗಳು ಅಲ್ಲಿರಬೇಕು. ಅಪ್ಪಾಜಿಯ ವ್ಯಕ್ತಿತ್ವ ಜನಕ್ಕೆ ಫೋಟೋ ಮೂಲಕ ಅರಿವಾಗಬೇಕು.

– ಪುನೀತ್ ರಾಜ್‌ಕುಮಾರ್

ಶಾಂತಿಧಾಮವಂತಿರಬೇಕು. ಸ್ಥಳಕ್ಕೆ ಕಾಲಿಟ್ಟರೆ ಮನಸ್ಸಿಗೆ ಆಹ್ಲಾದವಾಗಬೇಕು. ಅವರ ವ್ಯಕ್ತಿತ್ವ ಸರಳ. ಅವರ ಸ್ಮಾರಕ ಕೂಡ ಅಷ್ಟೇ ಸರಳವಾಗಿರಬೇಕು.

– ಡಾ॥ ವಿಷ್ಣುವರ್ಧನ

ಅವರ ನೆನಪಿನಲ್ಲಿ ಸರ್ಕಾರವಾಗಲಿ ಖಾಸಗಿಯವರಾಗಲೀ ನಿರ್ಮಿಸುವ ಸ್ಮಾರಕಗಳು ರಾಜ್‌ರವರು ನಂಬಿದ ಮೌಲ್ಯಗಳಿಗೆ ಅನುಷ್ಠಾನಕ್ಕೆ ತಂದ ಆದರ್ಶಗಳಿಗೆ ಪೂರಕವಾಗಬೇಕಿದೆ ಅವರೊಬ್ಬ ಸಮಗ್ರ, ಸಂಪೂರ್ಣ ಕನ್ನಡಿಗರಾಗಿದ್ದು ಇಡೀ ಜೀವನವನ್ನು, ಕನ್ನಡ ನಾಡಿಗೆ, ನುಡಿಗೆ ಮುಡುಪಾಗಿಟ್ಟದ್ದುದರಿಂದ ಅವರ ಅಸೀಮ ಕನ್ನಡಾಭಿಮಾನ ಭಾಷಾ ಶುದ್ಧಿ, ಕರ್ತವ್ಯ ಪ್ರಜ್ಞೆ, ಸಮಯಪ್ರಜ್ಞೆಗಳು ಮುಂದಿನ ಪೀಳಿಗೆಗೆ ದಾರಿ ದೀಪಗಳು. ಈ ಎಲ್ಲ ಅಪರೂಪದ ಗುಣಗಳ ಪ್ರತಿಬಿಂಬವಾಗುವುದು ಸ್ಮಾರಕಕ್ಕೆ ಅತ್ಯಂತ ಮುಖ್ಯ.

– ವಿ.ಎನ್. ಸುಬ್ಬರಾವ್.

ರಾಜ್ ಅವರಿಗಾಗಿ ನಿರ್ಮಿಸುತ್ತಿರುವ ಸ್ಮಾರಕ, ಮಮ್ತಾಜ್‌ಳ ಪ್ರೀತಿಗಾಗಿ ಶಹಜಾನ್ ನಿರ್ಮಿಸಿದ ತಾಜ್‌ಮಹಲ್‌ನಷ್ಟೆ ಅದ್ಭುತವಾಗಿರಲಿ. ನಾಡಿನ ಜನತೆಯ ಅಭಿಮಾನ, ಪ್ರೀತಿಯ ದ್ಯೋತಕವಾಗಿರಲಿ. ಈ ಭವ್ಯ ಸ್ಮಾರಕ ನಿರ್ಮಿಸಲು ರಾಜ್ಯ ಸರ್ಕಾರ, ನಗರ ಪಾಲಿಕೆ, ರಾಜ್‌ಕುಟುಂಬ, ರಾಜ್ ಅಭಿಮಾನಿಗಳು, ಕರ್ನಾಟಕ ಜನತೆ ಎಲ್ಲ ರೀತಿಯ ಸಹಕಾರ ನೀಡಿ ಭರತಖಂಡದಲ್ಲೇ ಈ ಸ್ಮಾರಕ ಶಾಶ್ವತ ಹೆಸರು ಪಡೆಯಲಿ, ಅಗಲಿದ ದಿವ್ಯಚೇತನದ ಘನತೆಗೆ ಗೌರವವನ್ನು ಈ ಸ್ಮಾರಕ ದಿವ್ಯವಾಗಿ ಪ್ರತಿನಿಧಿಸಲಿ.

– ವಿ. ಸೋಮಣ್ಣ

ಡಾ॥ ರಾಜ್ ಅಧ್ಯಯನ ಪೀಠ ಸ್ಥಾಪಿಸಬೇಕು.

– ಪ್ರೊ ಡಿ.ಎಸ್. ಕಾಮತ್, ಬೆಂಗಳೂರು ವಿವಿ

ಮಹಾನಗರ ಪಾಲಿಕೆ ಹಳೆಯ ಕಾರಾಗೃಹದ ಜಾಗದಲ್ಲಿ ಎರಡು ಎಕರೆ ಕೊಟ್ಟರೆ ಅಣ್ಣಾವ್ರ ನೆನಪಿಗಾಗಿ "ರಾಜ್‌ಕುಮಾರ್ ಕಲಾ ಸಂಗ್ರಹಾಲಯ" ನಿರ್ಮಿಸುತ್ತೇವೆ.

– ಸಾ.ರಾ. ಗೋವಿಂದು

ರಾಜಣ್ಣನ ಸ್ಮಾರಕ ಸಮಾಧಿಗಷ್ಟೇ ಸೀಮಿತವಾಗಬಾರದು. ಕೇವಲ ಅವರ ಪ್ರತಿಮೆ ಸ್ಥಾಪಿಸುವುದರಲ್ಲಿಯೂ ಅರ್ಥವಿಲ್ಲ. ಅದು ಪ್ರವಾಸಿ ತಾಣವಾಗಬೇಕು. ಒಟ್ಟಾರೆ ಅದೊಂದು ಬೃಹತ್ ರಾಜ್ ಕಾಂಪ್ಲೆಕ್ಸ್ ಆಗಬೇಕು. ಜತೆಗೆ ಕನ್ನಡ ಚಿತ್ರರಂಗಕ್ಕೆ ರಂಗಭೂಮಿಗೆ ಉತ್ತಮ ಕೊಡುಗೆಯಾಗಬೇಕು. ಉಳಿದಂತೆ ಎಲ್ಲವೂ ರಾಜ್‌ಮಯವಾಗಬೇಕು.

– ಬರಗೂರು ರಾಮಚಂದ್ರಪ್ಪ

ಡಾ॥ ರಾಜ್ ಚಿತ್ರರಂಗದ ಮಹಾನ್ ವ್ಯಕ್ತಿ. ಅವರ ಸಮಾಧಿ ಆಲಯಕ್ಕೆ ಸಮ. ರಾಜ್ ವ್ಯಕ್ತಿತ್ವದ ಪೂರ್ಣ ಚಿತ್ರಣ ಕೊಡುವಂತಹ ಸ್ಮಾರಕ ನಿರ್ಮಾಣವಾಗಬೇಕು. ಅವರ ಕುರಿತ ಪುಸ್ತಕಗಳಿರಬೇಕು. ಫೋಟೋಗಳಿರಬೇಕು.

– ಅಂಬರೀಷ್

ಚಿತ್ರರಂಗದ ಇತಿಹಾಸ ಪುರುಷ ಡಾ. ರಾಜ್. ಅವರ ಘನತೆಗೆ ಚ್ಯುತಿ ಬರದಂತೆ ಸ್ಮಾರಕ ಕಟ್ಟಬೇಕು. ಅದಕ್ಕೂ ಮೊದಲು ಸೂಕ್ತ ಅಧ್ಯಯನ ಮಾಡಬೇಕು. ಸ್ಮಾರಕ ಅಂದ್ರೆ ಒಂದಷ್ಟು ಫೋಟೋಗಳಿಗೆ ಸೀಮಿತವಾಗಬಾರದು. ಅದಕ್ಕೆ ಅಂತಾರಾಷ್ಟ್ರೀಯ ಗುಣಮಟ್ಟವಿರಬೇಕು.

– ಉಪೇಂದ್ರ

ಚೆನ್ನೈನಲ್ಲಿರುವ ಎಂಜಿಆರ್ ಸ್ಮಾರಕದ ಮಾದರಿಯಲ್ಲಿ ಸ್ಮಾರಕ ತಲೆಎತ್ತಬೇಕು. ದಿ. ರಾಜ್‌ರನ್ನು ಫೋಟೋಗಳಲ್ಲಿ ನೋಡುವುದಕ್ಕಿಂತ ಪೇಂಟಿಂಗ್‌ನಲ್ಲಿ ಅವರನ್ನು ಕಾಣು ವಂತಾಗಬೇಕು. ತೈಲ ವರ್ಣದ ಚಿತ್ರಗಳಿದ್ದರೆ ಚೆನ್ನ. ಸಾಕ್ಷ್ಯ ಚಿತ್ರಗಳೂ ಇರಲಿ.

– ತಾರಾ

ಸ್ಮಾರಕದಲ್ಲಿ ರಾಜ್‌ಗೆ ಸಂಬಂಧಪಟ್ಟ ವಿಡಿಯೋ, ಆಡಿಯೋ ಲೈಬ್ರರಿ ಹಾಗೂ ಸ್ಟಿಲ್ ಲೈಬ್ರರಿ ಇರಬೇಕು. ಬಹಳ ಮುಖ್ಯವಾಗಿ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಪ್ರಾರಂಭಿಸಬೇಕು. ಅವರ ಹಳೆಯ ಚಿತ್ರಗಳ ಸ್ಕ್ರಿಪ್ಟ್‌ಗಳಿರಬೇಕು. ಮುದ್ರಣ ಮಾಧ್ಯಮ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳಿಗೆ ಅವರು ನೀಡಿರುವ ಸಂದರ್ಶನವ

ಭಾಗಗಳನ್ನು ಸಂಗ್ರಹಿಸಿಡಬೇಕು. ಅವರ ಅಭಿನಯದ ಹಳೆಯ ಚಿತ್ರಗಳ ಪ್ರಿಂಟ್‌ಗಳನ್ನು ಸಂರಕ್ಷಿಸಿಡಬೇಕು.

–ಗಿರೀಶ್ ಕಾಸರವಳ್ಳಿ

ಅವರ ಹೆಸರಲ್ಲಿ ಕಟ್ಟುವ ಸ್ಮಾರಕ ಭವ್ಯವಾಗಿರಬೇಕು. ಸಾಮಾನ್ಯ ಜನರಿಂದ ಶ್ರೀಮಂತರವರೆಗೂ ಇಷ್ಟವಾಗುವಂತೆ ಕಟ್ಟಬೇಕು. ಅಲ್ಲಿ ಗದ್ದಲವಿರಬಾರದು. ದೇಶೀ ಶೈಲಿ ಬಳಸುವುದು ಉತ್ತಮ.

– ಜಯಂತಿ

ರಿಯಲಿ ಇಟ್ ಈಸ್ ಫೆಂಟಾಸ್ಟಿಕ್ ಐಡಿಯಾ. ಒಂದು ದೇವಾಲಯ ಕಟ್ಟುವಾಗಿನ ಸಂಭ್ರಮದಲ್ಲಿ ರಾಜ್ ಸ್ಮಾರಕ ಕಟ್ಟಲು ಮುಂದಾಗಬೇಕು. ಅಲ್ಲಿ ಅವರ ಸಾಧನೆಗಳ ಪರಿಚಯವಿರಬೇಕು. ವಿದೇಶೀ ಪ್ರವಾಸಿಗರಿಗೆ ಮಾರ್ಗದರ್ಶಿಯಾಗಬೇಕು.

– ರಮೇಶ್

ಸ್ಮಾರಕದಲ್ಲಿ ಆಸ್ಟ್ರೇಲಿಯಾದ ಒಪೆರಾ ಹೌಸ್ ಮಾದರಿ ದೊಡ್ಡ ಆಡಿಟೋರಿಯಂ ಕಟ್ಟಬೇಕು. ಅಲ್ಲಿ ಮೈಕ್ ಹಿಡಿದು ಮಾತನಾಡುವ ಅಗತ್ಯವಿರುವುದಿಲ್ಲ. ವೇದಿಕೆಯಲ್ಲಿ ಪಿಸುಗುಟ್ಟಿದರೂ ಕೊನೆಯಲ್ಲಿ ಕುಳಿತಿರುವವರಿಗೆ ಆ ಶಬ್ಧ ಕೇಳಿಸುವಂತಿರಬೇಕು.

– ಮಂಜುಳ ಗುರುರಾಜ್

ಸ್ಮಾರಕ ಭವನ ನಿರ್ಮಾಣವಾದರೆ ಅದು ಕರ್ನಾಟಕದ ಹೆಮ್ಮೆ. ರಾಜ್ ಸರಳತೆಗೆ ಹೆಸರಾದವರು. ಸ್ಮಾರಕವೂ ಸರಳವಾಗಿರಬೇಕು. ವಿದೇಶಿಗ ಕಣ್ಣರಳಿಸಿ ನೋಡುವಂತಿರಬೇಕು. ವಾಷಿಂಗ್‌ಟನ್‌ನಲ್ಲಿರುವ ಅಬ್ರಹಾಂಲಿಂಕನ್ ಸ್ಮಾರಕ ದಂತೆಯೇ ರಾಜ್ ಸ್ಮಾರಕವೂ ಅಷ್ಟೇ ಬೃಹತ್ ಮತ್ತು ಸರಳವಾಗಿರಬೇಕು.

– ಗುರುಕಿರಣ್


ರಾಜ್ ಸ್ಮಾರಕದಲ್ಲಿ ಪ್ರಶಾಂತತೆ ನೆಲೆಸಬೇಕು. ರಾಜ್ ಅಭಿನಯದ ಐತಿಹಾಸಿಕ ಮತ್ತು ಭಕ್ತಿ ಪ್ರಧಾನ ಚಿತ್ರಗಳ ಸ್ಟಿಲ್‌ಗಳನ್ನು ಶಿಲ್ಪಕಲೆಯಲ್ಲಿ ಕೆತ್ತಬೇಕು.

– ಸಿ. ಅಶ್ವಥ್

ರಾಜ್ ನಟರಷ್ಟೇ ಅಲ್ಲ. ಗಾಯಕರೂ ಆಗಿದ್ದರು. ಅವರು ಹಾಡುವುದಕ್ಕೆ ಮೊದಲು ಹೇಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದರು ಎಂಬುದನ್ನು ಸ್ಮಾರಕ ಭವನದಲ್ಲಿ ವಿವರಿಸಿದರೆ ಯುವ ಕಲಾವಿದರಿಗೆ ಅನುಕೂಲವಾಗುತ್ತದೆ. ಅವರ ಶ್ರದ್ಧೆ, ತತ್ವಗಳನ್ನು ಜನ ಮಾತ್ರವಲ್ಲ ಕಲಾವಿದರೂ ಕೂಡ ನೋಡಿ ಕಲಿಯುವಂತಹ ವ್ಯವಸ್ಥೆಯಾಗಬೇಕು.

– ಎಸ್.ಪಿ. ಬಾಲಸುಬ್ರಹ್ಮಣ್ಯಂ








ಎಲ್ಲಿಗೇ ಪಯಣಾ.......?

ಅಭಿಮಾನಿಗಳ ಕಣ್ಣೀರಧಾರೆಯ ದೃಶ್ಯಗಳು









































ಡಾ॥ ರಾಜ್‌ಕುಮಾರ್ ಗೀತನಮನ

ಸಂಪಾದಕ :

ಎನ್.ಎಸ್. ಶ್ರೀಧರಮೂರ್ತಿ

ಪ್ರಸ್ತಾವನೆ

ಇದು ಡಾ॥ ರಾಜ್‌ಕುಮಾರ್ ಅವರ ಆಯ್ದ 50 ಸೋಲೋ ಗೀತೆಗಳ ಸಂಕಲನ. ಒಟ್ಟಾಗಿ ರಾಜ್‌ಕುಮಾರ್ ಚಲನಚಿತ್ರಕ್ಕೆಂದು 113 ಸೋಲೋ ಗೀತೆಗಳನ್ನು ಹಾಡಿದ್ದಾರೆ. 147 ಡ್ಯುಯೆಟ್‌ಗಳನ್ನು ಹಾಡಿದ್ದಾರೆ ಮತ್ತು 2480 ಚಿತ್ರಗೀತೆಗಳಿಗೆ ಅಭಿನಯ ನೀಡಿದ್ದಾರೆ.

ಪ್ರಸ್ತುತ ಆಯ್ಕೆಯಲ್ಲಿ ಒಂದು ಚಿತ್ರಕ್ಕೆ ಒಂದು ಗೀತೆ ಎಂಬ ನಿಯಮ ಅನುಸರಿಸಲಾಗಿದೆ. ಒಂದಕ್ಕಿಂತ ಹೆಚ್ಚು ಗೀತೆಗಳಿದ್ದಾಗ ಜನಪ್ರಿಯತೆ ಮತ್ತು ಸಾಹಿತ್ಯಿಕ ಮೌಲ್ಯದೆಡೆಗೆ ಗಮನ ಹರಿಸಲಾಗಿದೆ. "ಹೊಸಬೆಳಕು" ಚಿತ್ರದಲ್ಲಿ ಶೀರ್ಷಿಕೆ ಗೀತೆ ಬದಲು 'ಕಣ್ಣೀರ ಧಾರೆ' ಆರಿಸುವಾಗ ಈ ನಿಯಮವೇ ಅಳವಡಿಕೆಯಾದದ್ದು "ತ್ರಿಮೂರ್ತಿ"ಯಲ್ಲಿ ರಾಜ್‌ಕುಮಾರ್ ಹಾಡಿರುವ ಮೂರು ಗೀತೆಗಳಿವೆ. 'ಮೂಗನ ಕಾಡಿದರೇನು' ಸಾಹಿತ್ಯಿಕ ಕಾರಣಕ್ಕಾಗಿ ಸ್ಥಾನ ಪಡೆದಿದೆ. "ಆಕಸ್ಮಿಕ" ಚಿತ್ರದಲ್ಲಿ ಮಾತ್ರ 'ಹುಟ್ಟಿದರೆ ಕನ್ನಡನಾಡಲ್ಲಿ ಹುಟ್ಟಬೇಕು' ಜನಪ್ರಿಯ ಗೀತೆ ಬದಲು 'ಬಾಳುವಂತ ಹೂವೆ' ಆಯ್ಕೆ ಮಾಡಲಾಗಿದೆ. ಇದು ರಾಜ್‌ಕುಮಾರ್ ಮತ್ತು ರಚನೆಕಾರ ಹಂಸಲೇಖಾ ಇಬ್ಬರಿಗೂ ಪ್ರಿಯವಾಗಿತ್ತು ಎಂಬುದು ಇದಕ್ಕೆ ಕಾರಣ. "ಭಾಗ್ಯದ ಲಕ್ಷ್ಮಿ ಬಾರಮ್ಮ" ಚಿತ್ರದ 'ಯಾವ ಕವಿಯು ಬರೆಯಲಾರ ' ಬಹು ಜನಪ್ರಿಯವಲ್ಲದಿದ್ದರೂ ಚಿ. ಉದಯಶಂಕರ್ ಅವರಿಗೆ ತಾವು ರಾಜ್‌ಕುಮಾರ್ ಅವರಿಗೆ ಬರೆದ ಅತ್ಯುತ್ತಮ ಗೀತೆ ಎಂಬ ನೆಮ್ಮದಿ ತಂದ ಗೀತೆ ಅದು. ಅಷ್ಟೇ ಅಲ್ಲ ಅದು ವಾಸ್ತವವಾಗಿ ರಾಜ್‌ಕುಮಾರ್ ಅವರ ಕುರಿತೇ ಬರೆದ ಗೀತೆ. ಚಿತ್ರದಲ್ಲಿ ಪ್ರೇಮಗೀತೆಯಾಗಿ ಬದಲಾಯಿಸಲಾಗಿತ್ತು. ಈ ಚಾರಿತ್ರಿಕ ಕಾರಣವನ್ನು ಗಮನಿಸಿ ಅದನ್ನು ಆಯ್ಕೆ ಮಾಡಲಾಗಿದೆ.

ರಾಜ್‌ಕುಮಾರ್ 'ಯಾರೇ ಕೂಗಾಡಲಿ' ಎಂಬ ಎಮ್ಮೆ ಗೀತೆ ಮೂಲಕವೇ ಗಾಯಕರಾದರು ಎಂದು ದಾಖಲೆಗಳು ಹೇಳುತ್ತವೆ. ಅದು ವಾಸ್ತವವಲ್ಲ. "ದೇವಸುಂದರಿ" ಅವರು ಮೊದಲು ಹಾಡಿದ ಚಿತ್ರ, 'ಕಾವಿ ತೊಟ್ಟವರೆಲ್ಲ' ಎಂಬ ಬಾಲಕೃಷ್ಣ ಅವರ ರಚನೆ ಮೊದಲಗೀತೆ. ನಂತರ "ಓಹಿಲೇಶ್ವರ" ಚಿತ್ರಕ್ಕೆ ಸೋಲೋ ಹಾಡಿದ್ದರು. "ದಶಾವತಾರ", "ಮಹಿಷಾಸುರ ಮರ್ಧಿನಿ" ಡ್ಯುಯೆಟ್ ಹಾಡಿದ್ದರು. ಚಾರಿತ್ರಿಕ ಮಹತ್ವ ಗಮನಿಸಿ ಅಪರೂಪದ "ಓಹಿಲೇಶ್ವರ" ಚಿತ್ರದ ಗೀತೆಯನ್ನು ಇಲ್ಲಿ ನೀಡಲಾಗಿದೆ. "ವೀರಮಹದೇವ" ಚಿತ್ರಕ್ಕಾಗಿ

ಗುಬ್ಬಿವೀರಣ್ಣನವರನ್ನು ಕುರಿತ ನಟ ಬಾಲಕೃಷ್ಣ ರಚಿಸಿದ ಗೀತೆಯನ್ನು ರಾಜ್‌ಕುಮಾರ್ ಹಾಡಿದ್ದರು. ಚಿತ್ರ ಪೂರ್ತಿಯಾಗಲಿಲ್ಲ. ಆದರೆ ಈ ಹಾಡು ಹಲವು ವರ್ಷಗಳ ಕಾಲ ಆಕಾಶವಾಣಿಯಲ್ಲಿ ಕೇಳಿ ಬಂದಿತ್ತು. ಇದನ್ನು ಈ ಆಯ್ಕೆಯಲ್ಲಿ ಸೇರಿಸಿಕೊಳ್ಳಲಾಗಿದೆ. ಹಿರಿಯ ಗೀತರಚನೆಕಾರರಾದ ಆರ್.ಎನ್. ಜಯಗೋಪಾಲ್, ಗೀತಪ್ರಿಯ ಅವರ ಒಂದೊಂದು ಗೀತೆಗಳನ್ನು ರಾಜ್‌ಕುಮಾರ್ ಹಾಡಿದ್ದಾರೆ. ಅದರ ಮಹತ್ವದ ಹಿನ್ನೆಲೆಯಲ್ಲಿ ಆಯ್ಕೆ ಮಾಡಲಾಗಿದೆ. ವಿಜಯನಾರಸಿಂಹ ಅವರ 'ನಾ ಬಿಡಲಾರೆ ಎಂದೂ ನಿನ್ನ' (ಪ್ರೇಮದ ಕಾಣಿಕೆ) ಡ್ಯುಯೆಟ್‌ನ್ನು ಮಾತ್ರ ರಾಜ್‌ಕುಮಾರ್ ಹಾಡಿದ್ದಾರೆ. ನಾಗತಿಹಳ್ಳಿ ಚಂದ್ರಶೇಖರ್ ಅವರ ರಚನೆಗೂ ಇದೇ ನೆಲೆಯಲ್ಲಿ ಆಧಾರ ನೀಡಲಾಗಿದೆ. ಹೀಗೆ ಒಟ್ಟು ಆಯ್ಕೆಯಲ್ಲಿ ವೈವಿಧ್ಯತೆಯನ್ನು ಕಾಪಾಡಿ ಕೊಳ್ಳಲು ಪ್ರಯತ್ನಿಸಲಾಗಿದೆ.

ಕೆಲವು ಗೀತೆಳು ತಾಂತ್ರಿಕ ಕಾರಣಕ್ಕಾಗಿ ಬಳಕೆಯಾಗಿಲ್ಲ. ಉದಾಹರಣೆಗೆ 'ಅಳ್ಬೇಡ್ಕಣೆ ಸುಮ್ಕಿರೆ' (ಕವಿರತ್ನ ಕಾಳಿದಾಸ) ಇದಕ್ಕಾಗಿ ಕ್ಷಮೆ ಇರಲಿ. ಸಾಧ್ಯವಾದಷ್ಟು ಸಕ್ರಮ ಸಾಹಿತ್ಯಕ್ಕೆ ಪ್ರಯತ್ನಿಸಲಾಗಿದೆ. ನಮ್ಮ ಕೈ ಮೀರಿ ತಪ್ಪುಗಳು ಆಗಿದ್ದರೆ ಸಹೃದಯರು ಗಮನಕ್ಕೆ ತಂದರೆ ಸರಿಪಡಿಸಲು ಮುಂದಿನ ಮುದ್ರಣಗಳಲ್ಲಿ ಪ್ರಯತ್ನಿಸಲಾಗುವುದು.

ಇದಕ್ಕೆ ಅವಕಾಶ ನೀಡಿದ ಶ್ರೀ ಗೌರಿಸುಂದರ್ ಅವರಿಗೆ ನಾನು ಕೃತಜ್ಞನಾಗಿದ್ದೇನೆ. ಇದು ಇಂತಹ ಹಲವು ಪ್ರಯತ್ನಗಳಿಗೆ ನಾಂದಿಯಾಗಲಿ ಎಂಬುದೇ ನಮ್ಮ ಆಶಯ.

– ಎನ್.ಎಸ್. ಶ್ರೀಧರ ಮೂರ್ತಿ


ಚಿತ್ರ : ಓಹಿಲೇಶ್ವರ (೧೯೫೬)
ಸಾಹಿತ್ಯ : ಜಿ.ವಿ. ಅಯ್ಯರ್
ಸಂಗೀತ : ಜಿ.ಕೆ. ವೆಂಕಟೇಶ್

ಶರಣು ಶಂಭೋ ಶಿವ ಶರಣು ಶಂಭೋ
ಎನ್ನ ಗುರು ತೋರಿದೆ ಸೋಮೇಶ ಪ್ರಭೋ ಶರಣು ॥ಪ॥

ದಿನ ನೂರು ನೋವು ಕೊನೆಗೊಂದು ಸಾವು
ದೇಹ ಬರಬೇಕೆ ಪರಮೇಶಾ ಈ ಚಿರನಾಶ
ಸುರುಚಿರ ಮೊತ್ತವೊಂದೆ ಅವಿನಾಶ
ಅದನು ಪಡೆವೆನೇ ಪ್ರಭುವೇ ॥೧॥

ಆದಿ ಮೂಲ ಕರುಣಾಲ ಪಾಲ
ಪರಿಪೂರ್ಣ ಶಾಂತಿ ಗುಣ ಸುಶೀಲ
ನೀಲಕಂಠ ನಿಗಮಾಂತನಾದ
ಭವನಾಶ ಕ್ಲೇಶ ಭಯ ನಿವಾಸ
ಎನ್ನ ಅತಿ ಸೌಖ್ಯದಿಂದ ಮತಿಗೇಡಿಯಾದೆ
ಜಾಡಿಗೆ ಬರುವಲ್ಲಿ ತಡವಾದೆ ನಾ ಕಡಯಾದೆ ॥೨॥

♦♦♦♦♦



ಚಿತ್ರ : ವೀರ ಮಹಾದೇವ (೧೯೭೩)
ಸಾಹಿತ್ಯ : ಟಿ.ಎನ್. ಬಾಲಕೃಷ್ಣ
ಸಂಗೀತ : ಟಿ.ಜಿ. ಲಿಂಗಪ್ಪ

ರಂಗ ಮಂದಿರದಲ್ಲಿ ತಿಂಗಳಾ ಬೆಳಕಾಗಿ
ರಸಿಕರಾ ಮನದಲ್ಲಿ ಹರುಷದಾ ಹೊನಲಾಗಿ
ಕರ್ನಾಟಕ ನಾಟಕಕಾಂದ್ರ ಸಾರ್ವಭೌಮ
ವಿನೋದ ರತ್ನಾಕರನೆಂಬ ಬಿರುದುಗಳ ಪಡೆದೇ
ಮೈಸೂರು ವಿಶ್ವವಿದ್ಯಾಲಯ ನೀಡಿದ ಗೌರವಕೆ ಪಾತ್ರನಾದೆ
ರಾಷ್ಟ್ರಪ್ರಶಸ್ತಿ ಪಡೆದೆ ಕಿರಿಯರಿಗೆ
ದಾರಿಯಾ ತೋರಿ ನೀ ನಡೆದೆ ॥ಅ.ಪ.॥

ಆರದ ನಂದಾ ದೀಪ
ನಮ್ಮ ನೆನಪಿನಲಿ ನಿಮ್ಮ ರೂಪ ॥ಪ॥

ಕಲೆಯ ಕಡಲು ತಂದ ಬಲು ಬೆಲೆ ಬಾಳುವ ಮುತ್ತು
ಕಿರಿಯರ ಬಾಳಿಗೆ ನಿನ್ನ ಸ್ನೇಹವೇ ಸಿರಿ ಸಂಪತ್ತು ॥೧॥

ಬಾಡದ ಹೂವು ನೀನಾದೆ ಕಲಾದೇವಿ ಅಡಿಗೆ
ಹೊನ್ನ ಕಲಶ ನೀನಾದೆ ನಾಟಕ ರಂಗದ ಗುಡಿಗೆ ॥೨॥

ಹೊಗಳಲು ಕಿವಿಗೊಡಲಿಲ್ಲ ಬಿರುದಿಗೆ ಮೆರೆಯಲೂ ಇಲ್ಲ
ವಿನಯವೆ ನಿನ್ನುಸಿರು ಎಂದು ನಂಬಿ ಬಾಳಿದೆಯಲ್ಲಾ ॥೩॥

ಹಾಸ್ಯದ ಹೊನಲನು ಹರಿಸಿ ಜನತೆಯ ಜಡತನ ಅಳಿಸಿ
ಬಾಳಿದೆ ಎಲ್ಲರ ನಗಿಸಿ ನಾಟಕ ರತ್ನ ಎನಿಸೀ ॥೪॥

♦♦♦♦♦


ಚಿತ್ರ : ಸಂಪತ್ತಿಗೆ ಸವಾಲ್ (೧೯೭೪)
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ಜಿ.ಕೆ. ವೆಂಕಟೇಶ್

ಯಾರೇ ಕೂಗಾಡಲಿ ಊರೇ ಹೋರಾಡಲಿ
ನಿನ್ನ ನೆಮ್ಮದಿಗೆ ಭಂಗವಿಲ್ಲ ಎಮ್ಮ ನಿನಗೆ ಸಾಟಿಯಿಲ್ಲ
ಬಿಸಿಲು ಮಳೆಗೆ ಬಿರುಗಾಳಿ ಚಳಿಗೆ
ನೀ ಅಳುಕದೆ ಮುಂದೆ ಸಾಗುವೆ
ಅರೆ ಹುಯ್.. ಅರೆ ಹುಯ್.. ವುರ್‌ರ.... ॥ಪ॥

ಗುಣದಲ್ಲಿ ನೀ ಉಪಕಾರಿ ಮಾನವಗೆ ನೀ ಸಹಕಾರಿ
ಕಸವನ್ನೇ ತಿಂದರು ಕೊನೆಗೆ ಹಾಲನ್ನೇ ನೀಡುವೆ ನಮಗೆ
ಹಾಲನ್ನು ಕುಡಿದಾ ಜನರು ವಿಷವನ್ನೇ ಕಕ್ಕುತಲಿಹರು
ಸದಾ ರೋಷ ಸದಾ ದ್ವೇಷಾ ಅದಕ್ಕೇ ಹೀಗಿದೆ ಈ ದೇಶ ॥೧॥

ಪ್ರಾಣಿಗಳೇ ಗುಣದಲಿ ಮೇಲು ಮಾನವನದಕಿಂತ ಕೀಳು
ಉಪಕಾರ ಮಾಡಲಾರ ಬದುಕಿದರೆ ಸೈರಿಸಲಾರ
ಸತ್ಯಕ್ಕೆ ಗೌರವವಿಲ್ಲ ವಂಚನೆಗೆ ಪೂಜ್ಯತೆ ಎಲ್ಲಾ
ಇದೇ ನೀತಿ ಇದೇ ರೀತಿ ಇನ್ನೆಲ್ಲಿ ಗುರುಹಿರಿಯರ ಭೀತಿ ॥೨॥

♦♦♦♦♦



ಚಿತ್ರ : ಮಯೂರ (೧೯೭೫)
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ಜಿ.ಕೆ. ವೆಂಕಟೇಶ್

ನಾನಿರುವುದೇ ನಿಮಗಾಗಿ ನಾಡಿರುವುದು ನಮಗಾಗಿ
ಕಣ್ಣೀರೇಕೆ ಬಿಸಿಯುಸಿರೇಕೆ ಬಾಳುವಿರೆಲ್ಲಾ ಹಾಯಾಗಿ ॥ಪ॥

ಒಂದೇ ನಾಡಿನ ಮಕ್ಕಳು ನಾವು ಸೋದರರಂತೆ ನಾವೆಲ್ಲ
ನಿಮ್ಮೊಡನಿಂದೂ ನಾನೂ ನೊಂದು ಮಿಡಿದ ಕಂಬನಿ ಆರಿಲ್ಲ
ಭರವಸೆ ನೀಡುವೆನೆಂದು ನಾ ನಿಮ್ಮೊಡನಿರುವೆನು ಎಂದು
ತಾಯಿಯ ಆಣೆ ನಿಮ್ಮನು ಕಾಡುವ ವೈರಿಯ ಉಳಿಸೋಲ್ಲ ॥೧॥

ವೀರ ಜನುಮದ ಪುಣ್ಯವೋ ಏನೋ ನಾನೀ ನಾಡಲಿ ಜನಿಸಿರುವೆ
ತಪಸಿನ ಫಲವೋ ಹಿರಿಯರ ಒಲವೋ ನಿಮ್ಮೀ ಪ್ರೀತಿಯ ಗಳಿಸಿರುವೆ
ವೈರಿಯ ಬಡಿದೋಡಿಸುವ ಈ ನಾಡಿಗೆ ಬಿಡುಗಡೆ ತರುವ
ಜನತೆಗೆ ನೆಮ್ಮದಿ ಸೌಖ್ಯವ ತರಲು ಪ್ರಾಣವನೇ ಕೊಡುವೆ ॥೨॥

♦♦♦♦♦



ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ಜಿ.ಕೆ. ವೆಂಕಟೇಶ್

ಮೂಗನ ಕಾಡಿದರೇನು
ಸವಿಮಾತನು ಆಡುವನೇನು ॥ಪ॥

ಕೋಪಿಸಲು ನಿಂದಿಸಲು
ಮೌನವು ಮೀರುವವನೇನು ॥ಅ.ಪ॥

ಬೆಳಕೆಲ್ಲೊ ಕಾಣಿಸದು
ಕತ್ತಲೆಯೇ ತುಂಬಿಹುದು
ನಿಜವೆಲ್ಲೊ ಓಡಿಹುದು
ವಂಚನೆಯೇ ಕಾಣುವುದು
ದಾರಿಯೇ ತೋರದೇ ಅಲೆಯುತಲಿರುವಾಗ ॥೧॥

ನನ್ನವರು ದೂರಾಗಿ
ಬಂಧುಗಳು ಹಗೆಯಾಗಿ
ನೆಮ್ಮದಿಯು ಮರೆಯಾಗಿ
ಅಳುತಿರಲು ನೋವಾಗಿ
ಏನನು ಹೇಳಲಿ ಕೆಣಕಲು ನನ್ನೀಗ ॥೨॥

♦♦♦♦♦



ಚಿತ್ರ : ಬಹದ್ದೂರ್ ಗಂಡು (೧೯೭೬)
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ಎಂ. ರಂಗರಾವ್

ಮಾನವನಾಗುವೆಯಾ ಇಲ್ಲ ದಾನವನಾಗುವೆಯಾ
ನೀ ಮಾನವ ಕುಲಕೆ ಮುಳ್ಳಾಗುವೆಯಾ
ಹೇಳು... ನೀ ಹೇಳು ॥ಪ॥

ಎಲ್ಲಾ ಗುಣಗಳು ನಿನ್ನಲೆ ಅಡಗಿ
ಕಾಳಗ ಮಾಡುತಿದೆ
ಮನ ತುಂಬಿರುವ ಶಾಂತಿಯ ನುಂಗಿ
ಕುಣಿಯಲು ನೋಡುತಿದೆ
ರೋಷವಾ ಬಿಡುವೆಯಾ
ದ್ವೇಷವಾ ಮರೆವೆಯಾ
ರಕ್ಕಸನಾ ಬಿರುಗಾಳಿಯ ನುಂಗಿ
ಬದುಕಿ ಎಲ್ಲರಾ ಉಳಿಸುವೆಯಾ ॥೧॥

ಧನಕನಕಗಳ ಕೇಳುವುದಿಲ್ಲ
ಸ್ನೇಹದ ಹವ್ಯಾಸ
ನಿನ್ನಭಿಮಾನವ ಕೆಣಕುವುದಿಲ್ಲ
ಪ್ರೇಮದ ಸಂತೋಷ
ಅಂದದಾ ತುಟಿಯಲಿ
ಹುಸಿನಗೆ ತೇಲಲಿ
ಅಕ್ಕರೆ ನುಡಿಯಾ ಸಕ್ಕರೆ ರುಚಿಯಾ
ನೀಡಿ ಎಲ್ಲರಾ ಗೆಲ್ಲುವೆಯಾ
ನೀನು ಎಲ್ಲರಾ ಗೆಲ್ಲುವೆಯಾ ॥೨॥

♦♦♦♦♦

ಚಿತ್ರ : ಪ್ರೇಮದ ಕಾಣಿಕೆ (೧೯೭೬)
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ಉಪೇಂದ್ರ ಕುಮಾರ್

ಬಾನಿಗೊಂದು ಎಲ್ಲೆ ಎಲ್ಲಿದೆ
ನಿನ್ನಾಸೆಗೆಲ್ಲಿ ಕೊನೆಯಿದೆ
ಏಕೆ ಕನಸು ಕಾಣುವೆ
ನಿಧಾನಿಸು ನಿಧಾನಿಸು ॥ಪ॥

ಆಸೆಯೆಂಬ ಬಿಸಿಲು ಕುದುರೆ ಏಕೆ ಏರುವೆ
ಮರಳು ಗಾಡಿನಲ್ಲಿ ಸುಮ್ಮನೇಕೆ ಅಲೆಯುವೆ
ಅವನ ನಿಯಮ ಮೀರಿ ಇಲ್ಲಿ ಏನು ಸಾಗದು
ನಾವು ನೆನಸಿದಂತೆ ಬಾಳಲೇನು ನಡೆಯದು
ವಿಷಾದವಾಗಲಿ ವಿನೋದವಾಗಲಿ
ಅದೇನೆ ಆಗಲಿ ಅವನೆ ಕಾರಣ ॥೧॥

ಹುಟ್ಟು ಸಾವು ಬಾಳಿನಲ್ಲಿ ಎರಡು ಕೊನೆಗಳು
ಬಯಸಿದಾಗ ಕಾಣದಿರುವ ಎರಡು ಮುಖಗಳು
ಹರುಷವೊಂದೆ ಯಾರಿಗುಂಟು ಹೇಳು ಜಗದಲಿ
ಹೂವುಮುಳ್ಳು ಎರಡು ಉಂಟು ಬಾಳ ಲತೆಯಲಿ
ದುರಾಸೆ ಏತಕೆ ನಿರಾಸೆ ಏತಕೆ
ಅದೇನೇ ಬಂದರೂ ಅವನ ಕಾಣಿಕೆ ॥೨॥

♦♦♦♦♦



ಚಿತ್ರ : ಬಡವರ ಬಂಧು (೧೯೭೬)
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ಎಂ. ರಂಗರಾವ್

ನಿನ್ನ ಕಂಗಳ ಬಿಸಿಯ ಹನಿಗಳು
ನೂರು ಕತೆಯಾ ಹೇಳಿವೆ
ನಿನ್ನ ಪ್ರೇಮದ ನುಡಿಯ ಕೇಳಿ
ನೂರು ನೆನಪು ಮೂಡಿವೆ ॥ಪ॥

ತಂದೆಯಾಗಿ ತಾಯಿಯಾಗಿ ಮಮತೆಯಿಂದಾ ಬೆಳೆಸಿದೆ
ಬಿಸಲು ಮಳೆಗೆ ನರಳದಂತೆ ನಿನ್ನ ನೆರಳಲಿ ಸಲಹಿದೆ
ಆ ಪ್ರೀತಿಯ ಮನ ಮರೆಯುವುದೆ ॥೧॥

ಬಳ್ಳಿಯಂತೆ ಹಬ್ಬಿ ನಿನ್ನ ಆಸರೆಯಲಿ ಬೆಳೆದನು
ನಿನ್ನ ತಾಯಿಯ ಪಾದದಾಣೆ ಬೇರೆ ಏನನು ಅರಿಯೆನು
ನೀನೆ ನನ್ನ ದೇವನು ॥೨॥

ನೀನು ನಕ್ಕರೆ ನಾನು ನಗುವೆ
ಅತ್ತರೇ ನಾ ಅಳುವೆನು
ನಿನ್ನ ಉಸಿರಲಿ ಉಸಿರು ಬೆರೆತಿರೆ
ನಿನ್ನಲೊಂದಾಗಿರುವೆನು
ನಾ ನಿನ್ನ ಕಾಣದೆ ಬದುಕೆನು ॥೩॥

♦♦♦♦♦



ಚಿತ್ರ : ಭಾಗ್ಯವಂತರು (೧೯೭೭)
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ರಾಜನ್-ನಾಗೇಂದ್ರ

ನಿನ್ನ ನನ್ನ ಮನವು ಸೇರಿತು
ನನ್ನ ನಿನ್ನ ಹೃದಯ ಹಾಡಿತು
ರಾಗವೂ ಒಂದೇ ಭಾವವು ಒಂದೇ
ಜೀವ ಒಂದಾಯಿತು ಬಾಳು ಹಗುರಾಯಿತು ॥ಪ॥

ಏಕಾಂಗಿಯಾಗಿರಲು
ಕೈ ಹಿಡಿದೆ ಜೊತೆಯಾದೆ
ತಾಯಂತೆ ಬಳಿ ಬಂದೆ
ಆದರಿಸಿ ಪ್ರೀತಿಸಿದೆ
ಬಾಳಲಿ ಸುಖ ನೀಡಿದೆ
ನನ್ನೀ ಬದುಕಿಗೆ ಶೃತಿಯಾದೆ
ನನ್ನೀ ಮನೆಯ ಬೆಳಕಾದೆ ॥೧॥

ಎಂದೂ ಜೊತೆಯಲಿ ಬರುವೆ
ನಿನ್ನ ನೆರಳಿನ ಹಾಗೆ ಇರುವೆ
ಕೊರಗದಿರು ಮರುಗದಿರು
ಹಾಯಾಗಿ ನೀನಿರು
ಎಂದೂ ಜೊತೆಯಲಿ ಬರುವೆ
ನಿನ್ನ ಉಸಿರಲಿ ಉಸಿರಾಗಿರುವೆ
ನೋವುಗಳು ನನಗಿರಲಿ
ಆನಂದ ನಿನದಾಗಲಿ
ನಗುವಿನ ಹೂಗಳ ಮೇಲೆ
ನಡೆಯುವ ಭಾಗ್ಯ ನಿನಗಿರಲಿ
ನೋಡುವ ಭಾಗ್ಯ ನನಗಿರಲಿ ॥೨॥

♦♦♦♦♦

ಚಿತ್ರ : ಗಿರಿಕನ್ಯೆ (೧೯೭೭)
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ರಾಜನ್-ನಾಗೇಂದ್ರ

ಏನೆಂದು ನಾ ಹೇಳಲಿ
ಮಾನವನಾಸೆಗೆ ಕೊನೆಯೆಲ್ಲಿ ॥ಪ॥

ಕಾಣೊದೆಲ್ಲ ಬೇಕು ಎಂಬ ಹಠದಲ್ಲಿ
ಒಳ್ಳೇದೆಲ್ಲ ಬೇಕು ಎಂಬ ಛಲದಲ್ಲಿ
ಯಾರನ್ನು ಪ್ರೀತಿಸನು ಮನದಲ್ಲಿ
ಏನೊಂದು ಬಾಳಿಸನು ಜಗದಲ್ಲಿ ॥ಅ.ಪ॥

ಜೇನುಗಳೆಲ್ಲಾ ಅಲೆಯುತ ಹಾರಿ
ಕಾಡೆಲ್ಲಾ ಕಾಡೆಲ್ಲಾ
ಹನಿ ಹನಿ ಜೇನು ಸೇರಿದರೇನು
ಬೇಕು ಎಂದಾಗ ತನದೆನ್ನುವ
ಕೆಸರಿನ ಹೂವು ವಿಷದ ಹಾವು
ಭಯವಿಲ್ಲ ಭಯವಿಲ್ಲ
ಚೆಲುವಿನದೆಲ್ಲಾ ರುಚಿಸುವುದೆಲ್ಲಾ
ಕಂಡು ಬಂದಾಗ ಬೇಕೆನ್ನುವಾ ॥೧॥

ಪ್ರಾಣಿಗಳೇನು ಗಿಡಮರವೇನು
ಬಿಡಲಾರ ಬಿಡಲಾರ
ಬಳಸುವನೆಲ್ಲಾ ಉಳಿಸುವುದಿಲ್ಲಾ
ತನ್ನ ಹಿತಕೆ ಹೋರಾಡುವ
ನುಡಿಯುವುದೊಂದು ನಡೆಯುವುದೊಂದು
ಎಂದೆಂದು ಎಂದೆಂದು
ಪಡೆಯುವುದೊಂದು ಕಾಡುವುದೊಂದು
ಸ್ವಾರ್ಥಿ ತಾನಾಗಿ ಮೆರೆದಾಡುವ ॥೨॥

♦♦♦♦♦

ಚಿತ್ರ : ಸನಾದಿ ಅಪ್ಪಣ್ಣ (೧೯೭೭)
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ಜಿ.ಕೆ. ವೆಂಕಟೇಶ್

ನಿನಗಾಗಿ ಓಡೋಡಿ ಬಂದೆ ನಾನು
ಕಾಣದೆ ಹೀಗೇಕೆ ಮರೆಯಾಗಿ ಹೋದೆ ನೀನು ||ಪ||

ತಣ್ಣನೆ ಗಾಳಿ ಬೀಸಿದ ಹಾಗೆ
ಬಾಳಿನ ಬಾನಲಿ ಬೆಳಕನು ತಂದೆ
ಸ್ನೇಹದಿ ಸೇರಿ ಮೋಹವ ತೋರಿ
ಸನಿಹಕೆ ಸಾರಿ ಮನವನು ಸೇರಿ
ಏಕೆ ನೀ ಮರೆಯಾದೆ ||೧||

ಬಿಸಿಲಿಗೆ ಹೂವು ಬಾಡುವ ಹಾಗೆ
ಕಾಣದೆ ನೊಂದೆ ವಿರಹದಿ ಬೆಂದೆ
ಮುಳ್ಳಿನ ಬಲೆಯೆ ಗಿಳಿಯಂತಾಗಿ
ಅಳುಕಿದೆ ಮನವು ಬೆದರಿದೆ ತನುವು
ತೀರದ ನೋವ ತಾಳದು ಜೀವ
ಕಾಣದೆ ನೀನು ಉಳಿಯನು ನಾನು
ಏಕೆ ನೀ ದೂರಾದೆ ||೨||

♦♦♦♦♦



ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ಟಿ.ಜಿ. ಲಿಂಗಪ್ಪ

ಆರಾಧಿಸುವೆ ಮದನಾರಿ
ಆಧರಿಸು ನೀ ದಯತೋರಿ ॥ಪ॥

ಅಂತರಂಗದಲಿ ನೆಲೆಸಿರುವೆ
ಅಂತರ್ಯ ತಿಳಿಯದೆ ಏಕಿರುವೆ
ಸಂತತ ನಿನ್ನ ಸಹವಾಸ ನೀಡಿ
ಸಂತೋಷದಿಂದೆನ್ನ ನಲಿಸೆಂದು ಕೋರುವೆ ॥೧॥

ಮೈದೋರಿ ಮುಂದೆ ಸಹಕರಿಸು
ಆ ಮಾರ ಮೃಗವನು ಪರಿಹರಿಸು
ಪ್ರೇಮಾಮೃತವನು ನೀನುಣಿಸು
ತನ್ಮಯಗೊಳಿಸು ಮೈಮರೆಸು
ಚಿನ್ಮಯಭಾವ ತುಂಬುತ ಜೀವ
ಆನಂದ ಆನಂದ ಆನಂದವಾಗಲಿ ॥೨॥

◆◆◆◆◆




ಚಿತ್ರ : ಒಲವು ಗೆಲುವು (೧೯೭೭)
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ಜಿ.ಕೆ. ವೆಂಕಟೇಶ್

ನಾ ಹೇಳಲಾರೆ ನಾ ತಾಳಲಾರೆ
ಹರುಷ ತುಂಬಿ ಬಂದು
ಮನದಲಿಂದು ಏನೋ ಕಾತುರ ॥ಪ॥

ಯಾರಿಗುಂಟು ಇಂಥ ಭಾಗ್ಯವಿಂದು
ಜಗದಲಿ ಯಾರಿಗುಂಟು ಇಂಥ ಸೌಖ್ಯವಿಂದು
ಈ ಸೋದರಿ ಆ ಸೋದರ
ಹಿತವನ್ನೇ ಕೋರುವ ಆನಂದ ನೀಡುವ
ಇವರೇ ನನ್ನ ಜೀವ ॥೧॥

ಅಣ್ಣ ನಿನ್ನರೂಪ ಮರೆಯಲಾರೆ
ಎಂದಿಗೂ ನಿನ್ನ ಅಂತರಂಗ ಅರಿಯಲಾರೆ
ಆ ಸ್ನೇಹವ ಆ ಪ್ರೇಮವ
ಇನ್ನೆಲ್ಲಿ ನೋಡುವೆ ನಿನ್ನನ್ನೆ ಕಾಣುವೆ
ನೀನು ದೇವರಂತೆ ॥೨॥

♦♦♦♦♦



ಚಿತ್ರ : ಅಪರೇಷನ್ ಡೈಮಂಡ್ ರಾಕೆಟ್ (೧೯೭೮)
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ಜಿ.ಕೆ. ವೆಂಕಟೇಶ್

If you come today
It's too early
If you come tomorrow
It's too late
You pick the time
Tick tick tick - Darling ||p||

Did you say morning ?
No, no it's not good !
Did you say evening ?
No, no it's too bad !
Did you say noon ?
No, no it's not the time !
What did you say ?
Nothing ! Oh, it's allright
You pick the time
Tick tick tick - Darling ||1||

Million drums beat in my heart !
Million dreams hurt my heart !
Million desire spring in my heart !
Million memories tease my heart !
You pick the time
Tick tick tick - Darling ||2||

♦♦♦♦♦



ಚಿತ್ರ : ತಾಯಿಗೆ ತಕ್ಕ ಮಗ
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ಟಿ.ಜಿ. ಲಿಂಗಪ್ಪ

ಎಂಥ ಸೊಗಸು ಮಗುವಿನ ಮನಸು
ಎಂಥ ಸೊಗಸು ಪ್ರೇಮದ ಕನಸು ||ಪ||

ಎಲ್ಲಾ ಕಾಲವು ವಸಂತವಾದರೆ
ಋತುವಿನ ಸೊಗಸೇ ಸಗಸು
ಎಲ್ಲಾ ವಯಸು ಯೌವನವಾದರೆ
ಜೀವನವೆಂಥ ಸೊಗಸು ||೧||

ಬಯಸಿದ ಹಾಗೆ ನಡೆದರೆ ಎಲ್ಲಾ
ಬಾಳುವ ರೀತಿಯೆ ಸೊಗಸು
ನುಡಿಯುವುದೆಲ್ಲ ಕವನವೇ ಆದರೆ
ಕವಿಯೂ ಕಾಣದ ಸೊಗಸು ||೨||

ರಾತ್ರಿಗಳೆಲ್ಲ ಹುಣ್ಣಿಮೆಯಾದರೆ
ರಸಿಕರಿಗೆಂಥಾ ಸೊಗಸು
ಮಾತಿನಲ್ಲೆಲ್ಲಾ ಪ್ರೀತಿಯೇ ಹರಿದರೆ
ಆ ಅನುಭವವೇ ಸೊಗಸು ||೩||

♦♦♦♦♦



ಚಿತ್ರ : ಶಂಕರ್‌ಗುರು (೧೯೭೮)
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ಉಪೇಂದ್ರ ಕುಮಾರ್

ಚೆಲುವೆಯ ನೋಟ ಚೆನ್ನ
ಒಲವಿನ ಮಾತು ಚೆನ್ನ
ಮಲ್ಲಿಗೆ ಹೂವೇ ನಿನ್ನ
ನಗುವು ಇನ್ನೂ ಚೆನ್ನ ॥ಪ॥

ಕಾಮನ ಬಿಲ್ಲು ಚೆನ್ನ
ಸುಳಿವಾ ಮಿಂಚು ಚೆನ್ನ
ಹೊಳೆಯುವ ನಿನ್ನ ಕಣ್ಣ
ಕಾಂತಿ ಇನ್ನೂ ಚೆನ್ನ ॥೧॥

ತಣ್ಣನೆ ಗಾಳಿ ಚೆನ್ನ
ಹುಣ್ಣಿಮೆ ಚಂದ್ರ ಚೆನ್ನ
ನಿನ್ನನು ಸೇರಿ ನಿಂತ
ನನ್ನ ಬಾಳೇ ಚೆನ್ನ ॥೨॥

ಜಿಂಕೆಯ ಕಣ್ಣೇ ಚೆನ್ನ
ಹವಳದ ಬಣ್ಣ ಚೆನ್ನ
ಅರಗಿಳಿ ನಿನ್ನ ರೂಪ
ಚೆನ್ನದಲ್ಲಿ ಚೆನ್ನ ॥೩॥

ಬೆಳಗಿನ ಬಿಸಿಲು ಚೆನ್ನ
ಹೊಂಗೆಯ ನೆರಳು ಚೆನ್ನ
ಗೆಳತಿಯೆ ನಿನ್ನ ಸ್ನೇಹ
ಚೆನ್ನಕ್ಕಿಂತ ಚೆನ್ನ ॥೪॥

♦♦♦♦♦

ಚಿತ್ರ : ಹುಲಿಯಹಾಲಿನ ಮೇವು (೧೯೭೯)
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ಜಿ.ಕೆ. ವೆಂಕಟೇಶ್

ಬೆಳದಿಂಗಳಾಗಿ ಬಾ
ತಂಗಾಳಿಯಾಗಿ ನೀನು
ಆನಂದವಾ ನೀಡುವೆ ಒಂದಾಗುವೆ ॥ಪ॥

ಕಣ್ಣಲ್ಲಿ ತುಂಬಿ ಚೆಲುವ
ಎದೆಯಲ್ಲಿ ತುಂಬಿ ಒಲವ
ಬಾಳಲ್ಲಿ ನೀಡಿದೆ ಉಲ್ಲಾಸವ
ನನ್ನೆದೆಯ ತಾಳ ನೀನು
ನನ್ನುಸಿರ ರಾಗ ನೀನು
ನನ್ನೊಡಲ ಜೀವ ನೀ ಸಂತೋಷವ
ನೀನಿಲ್ಲವಾದರೆ
ಈ ಪ್ರಾಣ ನಿಲ್ಲದೇ ॥೧॥

ಕಾವೇರಿ ತಾಯಿ ನನ್ನ
ಬಾ ಎಂದು ಕೂಗಿ ನಿನ್ನ
ನೀಡಿದಳು ಬಾಳಿಗೆ ಬೆಳಕಾಗಲು
ಆ ದೇವಿಯಾಣೆ ನೀನೆ
ಸಂಗಾತಿ ಕೇಳೆ ಜಾಣೆ
ನೀಡುವೆ ಭಾಷೆಯಾ ಬಿಡುಚಿಂತೆಯಾ
ಈ ನಮ್ಮ ಪ್ರೇಮಕೆ
ನಾ ಕೊಡಲೆ ಕಾಣಿಕೆ ॥೨॥

◆◆◆◆◆



ಚಿತ್ರ : ನಾನೊಬ್ಬ ಕಳ್ಳ (೧೯೭೯)
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ರಾಜನ್-ನಾಗೇಂದ್ರ

ನಾನೊಬ್ಬ ಕಳ್ಳನು ನಾನೊಬ್ಬ ಸುಳ್ಳನು
ಬಲು ಮೋಸಗಾರನು ಸರಿಯೇನು
ನಾ ಕನ್ನ ಹಕಿ ನುಗ್ಗೋದೆ ಬಾಕಿ
ದೋಚೋದು ದೋಚಿ ಬಾಚೋದು ಬಾಚಿ
ನಾಸೂರೆ ಮಾಡುವೆ ನಿನಗೇನು ॥ಪ॥

ಚೆಲುವೆಯನು ನೋಡಿದೆನು
ಸನಿಹದಲಿ ಸೇರಿದೆನು
ಅಪಹರಿಸಿ ಹೃದಯವನು
ಹೇಳದೆ ಕೇಳದೆ ಹೋದವನು
ರುಚಿಯಾದ ಹಣ್ಣನು ಸೊಗಸಾದ ಹೆಣ್ಣನು
ಬೇಡೆಂದು ಹೋಗೋನು ನಾನೇನು
ಎದೆಯಲ್ಲು ನೀನೆ ಎದುರಲ್ಲೂ ನೀನೆ
ಇದಕಿಂಥ ಸೌಭಾಗ್ಯ ಬೇಕೇನು ॥೧॥

ಮನಸಿಗೆ ನಾ ಕನ್ನವನು
ಹಾಕಿದೆನು ನುಗ್ಗಿದೆನು
ಒಲವನ್ನು ಕದ್ದವನು
ಬಳಿಯಲ್ಲೇ ಕಾದಿಹೆನು
ಕೈಹಿಡಿದು ಬರಸೆಳೆದು
ದಂಡಿನೆ ಕೊಡದಿರೆ ನಾ ಬಿಡೆನು
ಯಾರೇನೇ ಅನ್ನಲಿ ಊರಾಚೆ ತಳ್ಳಲಿ
ನಾಕದ್ದ ಹೃದಯವ ಕೊಡಲಾರೆ
ನಾಗೆದ್ದ ಹುಡುಗಿಯ ಬಿಡಲಾರೆ
ನಿನ್ನಿಂದ ತಾನೆ ನಾಕಳ್ಳನಾದೆ
ನೀತಾನೆ ನನಗೆ ಗುರುವಾದೆ ॥೨॥

♦♦♦♦♦

ಚಿತ್ರ : ವಸಂತಗೀತ (೧೯೮೦)
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ಎಂ. ರಂಗರಾವ್

ಕಣ್ಣಲ್ಲಿ ಏನೋ ಮಿಂಚೊಂದು ಕಂಡಿತಲ್ಲ
ನಿನ್ನಾಸೆ ಏನೋ ನಾನಿಂದು ಕಾಣೆನಲ್ಲ
ಕೋಪವೋ ತಾಪವೋ
ನಡುಗಿದೆ ತುಟಿ ಏತಕೆ ॥ಪ॥

ಒಳ್ಳೆ ವಯಸು ಒಳ್ಳೆ ಸೊಗಸು
ಏಕೆ ಹೀಗಾಯ್ತು ಮನಸು
ಕಣ್ಣು ಚೆನ್ನ ಬಣ್ಣ ಚೆನ್ನ
ನಾ ಕಾಣೆ ಹೀಗೇಕೆ ಮುನಿಸು
ಈ ರೋಷವೂ ಆವೇಷವೂ
ಈ ದ್ವೇಷವೂ ಆಕ್ರೋಶವೂ
ಚೆಲುವೆಯೇ ನಿನಗೇತಕೆ ? ॥೧॥

ಚೆಲುವೆ ಮೊಗದಿ ಗೆಲುವ ಕಂಡೆ
ಎಲ್ಲಿ ಏನಾಯ್ತೋ ಕಾಣೆ
ಗೆಲುವ ಹಿಂದೆ ಛಲವ ಕಂಡೆ
ಅಮ್ಮಮ್ಮ ನೀನೆಂಥ ಜಾಣೆ
ನಿನ್ನಾಸೆಯಾ ನಾ ಬಲ್ಲೆನು
ಇನ್ನಾರನು ನಾ ಒಲ್ಲೆನು
ಸರಸಕೆ ಬರಲಾರೆಯಾ ಹೇಳು ॥೨॥

ನಿನ್ನಂಥ ನೂರು ಹೆಣ್ಣನ್ನು ನಾನು ಬಲ್ಲೆ
ನನ್ನಲ್ಲಿ ಇಂದು ನಿನ್ನಾಟ ಸಾಗದಲ್ಲೆ ॥ಅ.ಪ॥

ಬಳಿಗೆ ಬರುವ ಮನವ ಗೆಲುವ
ಆಸೆ ನನ್ನಲ್ಲಿ ಬಂತೆ
ಸರಸದಿಂದ ನಿನ್ನ ಬೆರೆವೆ
ಬಾ ಹೇಳು ಇನ್ನೇಕೆ ಚಿಂತೆ
ನಿನಗಾಗಿಯೇ ನಾನಿಲ್ಲವೇ
ನನ್ನಾಸೆಯೂ ನಿನಗಿಲ್ಲವೇ
ನಿಜವನು ನುಡಿ ಸುಂದರಿ ॥೩॥

♦♦♦♦♦

ಚಿತ್ರ : ರವಿಚಂದ್ರ (೧೯೮೦)
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ಉಪೇಂದ್ರ ಕುಮಾರ್

ನಸು ನಗುತ ಬಾ ಚಿನ್ನ
ನಲಿಯುತಿರೆ ನೀ ಚೆನ್ನ
ಅಗಲೆನು ಅಳಿಸೆನು
ಇನ್ನೆಂದು ನಿನ್ನ ॥ಪ॥

ಬಿಸಿಲು ಮಳೆಗೆ
ನೆರಳನ್ನು ನೀಡುವೆ
ಸಿಡಿಲೂ ಗುಡುಗೂ
ಜೊತೆಯಲ್ಲಿ ನಿಲ್ಲುವೆ
ನೋವಾ ನುಂಗುವೆ
ಸುಖವಾ ನೀಡುವೆ
ಜೀವದ ಜೀವವು
ನಾನಾಗಿ ಬಾಳುವೆ ॥೧॥

ನಿನ್ನ ನೆಡೆಗೆ
ಹೃದಯವಾ ಹಾಸುವೆ
ನಿನ್ನ ನುಡಿಗೆ
ಜೀವವಾ ತುಂಬುವೆ
ನಿನ್ನ ಕಣ್ಣಲೇ
ಎಲ್ಲಾ ಕಾಣುವೆ
ಕಂಬನಿ ಮಿಡಿದರೆ
ನಾ ಸೋತು ಹೋಗುವೆ ॥೨॥

♦♦♦♦♦

ಚಿತ್ರ : ನೀ ನನ್ನ ಗೆಲ್ಲಲಾರೆ (೧೯೮೧)
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ಇಳಯರಾಜ

ಐ ಲವ್ ಯೂ ಐ ಲವ್ ಯೂ
ಅನುರಾಗ ಏನಾಯ್ತು
ಮನಸೇಕೆ ಕಲ್ಲಾಯ್ತು
ನಿನ್ನ ಸವಿಮಾತು ಕಹಿ ಏಕಾಯ್ತು
ನಿನ್ನ ಒಲವೆಲ್ಲಾ ಇಂದೇನಾಯ್ತು ॥ಪ॥

ನೀಲಿ ಬಾನನು ಬಿಡುವಾಗ
ಮುಗಿಲೆಲ್ಲಾ ಕರಗಿ ಅಳುವಂತೆ
ನಿನ್ನ ಪ್ರೇಮದಿಂದ ನಾ ದೂರಾಗಿ
ನನ್ನ ಕಂಗಳೆಲ್ಲಾ ಕಣ್ಣೀರಾಗಿ
ಹಗಲಿರುಳೆಲ್ಲಾ ನಿನ್ನ ನೆನಪಾಯ್ತು
ಸರಸ ಹರುಷ ಬರಿ ಕನಸಾಯ್ತು ॥೧॥

ಓಡಿ ಬರುವ ನದಿಯಲ್ಲಿ
ಕಡಲಾಸೆ ತುಂಬಿ ಹರಿವಂತೆ
ನಿನ್ನ ಸೇರೊ ಆಸೆ ನಾ ಕಂಡಾಗ
ಜೊತೆ ಬಾಳಲೆಂದು ಬಳಿ ಬಂದಾಗ
ಸಿಡಿಲೊಂದೆರಗಿ ಬಡಿದಂತಾಗಿ
ವಿರಸ ವಿರಹ ಗತಿ ನನಗಾಯ್ತು ॥೨॥

♦♦♦♦♦



ಚಿತ್ರ : ಹಾವಿನ ಹೆಡೆ (೧೯೮೧)
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ಜಿ.ಕೆ. ವೆಂಕಟೇಶ್

ಹೂವಿಂದ ಬರೆದ ಕಥೆಯ
ಮುಳ್ಳಿಂದ ಬರೆದೆ ನಾನು
ಆನಂದ ತರುವ ಮನಕೆ
ನೋವನ್ನು ತಂದೆ ನಾನು ॥ಪ॥

ತಿಳಿಯಾದ ನೀರಿನಲ್ಲಿ
ಕಲ್ಲೊಂದು ಜಾರಿದಂತೆ
ಇಂಪಾಗಿ ಹಾಡುವಾಗ
ಅಪಸ್ವರವು ಮೂಡಿದಂತೆ
ನಾನಾದಿನ ಆಡಿದಾ ನುಡಿ
ಒರಟಾಯಿತು ಕಹಿಯಾಯಿತು
ಇನ್ನೆಂದು ಹೀಗೆ ನಾ ಮಾಡೆನು
ನನ್ನಾಣೆ ನಂಬು ನೀ ನನ್ನನು ॥೧॥

ನಿನ್ನಂತೆ ನೊಂದೆ ನಾನು
ಸುಳ್ಳೊಂದ ಹೇಳಿನು
ನಮ್ಮೊಲವು ಬಾಡಿತೆಂದು
ಮಿಡಿದೆ ಕಣ್ಣೀರನು
ಆ ವೇದನೆ ತಾಳದೆ
ದಿನಾ ಅಲೆದಾಡಿದೆ ಹುಡುಕಾಡಿದೆ
ವಿಷಾದವನ್ನು ಬಿಡು ಬಿಡು
ಸಂತೋಷವನ್ನು ಕೊಡುಕೊಡು ॥೨॥

♦♦♦♦♦

ಚಿತ್ರ : ಭಾಗ್ಯವಂತ (೧೯೮೧)
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ಟಿ.ಜಿ. ಲಿಂಗಪ್ಪ

ತಿಳಿದವರೊ ಇಲ್ಲಾ ಮೂಢರೋ
ಆಡುವ ಮಾತಲಿ ವಿಷವ ಸೇರಿಸಿ
ಕೊಲ್ಲುವರು ಇವರು
ನಂಜಿನ ನಾಲಿಗೆ ಚಾಚುತ
ಬಾಳನೆ ಉರಿಸುವರು ಇವರು ॥ಪ॥

ಮೂಢನಂಬಿಕೆ ಸುಳಿಯಲ್ಲಿ ಎಲ್ಲರ ತಳ್ಳುವರು ಇವರು
ಪಾಪ ಪುಣ್ಯದ ಭಯವೇ ಇಲ್ಲದೆ ಮೆರೆಯುವರು ಇವರು
ಆಡಬಾರದ ಮಾತಲಿ ನೋವನು ತುಂಬುವರು ಇವರು
ಅತ್ತವರ ಕಣ್ಣೀರನು ಕುಡಿದು ತೇಗುವರು ಇವರು
ಮನುಷ್ಯರೋ ಇಲ್ಲ ರಾಕ್ಷಷಸರೊ ॥೧॥

ಪುಟ್ಟ ಕಂದನ ದಾರಿಗೆ ಮುಳ್ಳಿನ ರಾಶಿಯ ಹಾಕಿದರು
ಕೆಟ್ಟ ಮಾತಲಿ ಚುಚ್ಚಿ ವೇದನೆ ತುಂಬುತ ಅಟ್ಟಿದರು
ಇಂಥ ಜನರನು ನೋಡಲಾರದೆ ದೇವರು ಕಲ್ಲಾದ
ಇವರಿಗೆ ಏನನು ಹೇಳಲಾಗದೆ ಹೀಗೆ ಮೂಕಾದ
ದೇವನು ಹೀಗೆ ಮೂಕಾದ
ಮನುಷ್ಯರೂ ಇಲ್ಲ ರಾಕ್ಷಸರೂ ॥೨॥

♦♦♦♦♦



ಚಿತ್ರ : ಕೆರಳಿದ ಸಿಂಹ (೧೯೮೨)
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ಸತ್ಯಂ

ಏಯ್ ನಿಂತ್ಕೊ ಅಲ್ಲಿ
ತಿಳಿಯದೇ ನನಗೆ ತಿಳಿಯದೇ
ಬದುಕುವ ದಾರಿ ತಿಳಿಯದೇ
ವಿಷಯ ಏನೆಂದು ಅರಿಯದೆ
ಇಂಥ ಮಾತನ್ನು ನುಡಿವುದೇ
ಕಾಲ ಸುಮ್ಮನೇ ಬಿಡುವುದೇ
ಬಡಿದು ಬುದ್ದಿಯನು ಕಲಿಸದೇ ||ಪ||

ಕತ್ತಿಯ ಮೇಲೆ ಹೆಜ್ಜೆಯ ಇಡಲು
ಕಾಲಲಿ ರಕ್ತ ಸುರಿಯದೆ
ಸತ್ಯದ ಹಾದಿ ಕಷ್ಟದ ಹಾದಿ
ನೋವನು ಕೊಡದೆ ಬಿಡುವುದೇ
ಆ ವೇದನೆ ಕೊನೆಯಾಗದೆ
ಎಂದೆಂದಿಗೂ ಹೀಗಿರುವುದೇ
ಎದೆಗುಂದದೇ ಮುಂದಕೆ ನಡೆಯುತ ಹೋದರೆ
ಜಯವು ದೊರಕದೆ ||೧||

ನಿನ್ನನು ನೋಡಿ ಬದುಕುವ ರೀತಿ
ಕಲಿಯುವ ಮೂರ್ಖ ನಾನಲ್ಲ
ನಂಬಿದಾ ನನ್ನ ಕೊರಳನು ಕೊಯ್ದ
ನಾರಿಯೆ ನೀನು ಹೆಣ್ಣಲ್ಲ
ಹಣದಾಸೆಗೆ ಮನಸಾಕ್ಷಿಯ
ದಯೆ ಇಲ್ಲದೆ ನೀ ಕೊಂದೆಯಾ
ನೀ ನಾಚಿಕೆ ಇಲ್ಲದೆ
ಬುದ್ಧಿಯ ಹೇಳಲು ಇಲ್ಲಿ ಬಂದೆಯಾ? ||೨||

♦♦♦♦♦

ಚಿತ್ರ : ಹೊಸಬೆಳಕು (೧೯೮೨)
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ಎಂ. ರಂಗರಾವ್

ಕಣ್ಣೀರ ಧಾರೆ ಇದೇಕೆ ಇದೇಕೆ
ನನ್ನೊಲವಿನಾ ಹೂವೆ ಈ ಶೋಕವೇಕೆ ॥ಪ॥

ವಿಧಿಯಾಟವೇನು ಬಲ್ಲವರು ಯಾರು
ಮುಂದೇನು ಎಂದು ಹೇಳುವರು ಯಾರು
ಬರುವುದು ಬರಲೆಂದು
ನಗುನಗುತ ಬಾಳದೆ
ನಿರಾಶೆ ವಿಷಾದ ಇದೇಕೆ ಇದೇಕೆ ॥೧॥

ಬಾಳೆಲ್ಲ ನನಗೆ ಇರುಳಾದರೇನು
ಜೊತೆಯಾಗಿ ಎಂದೆಂದೂ ನೀನಿಲ್ಲವೇನು
ನಾನಿನ್ನ ಕಣ್ಣಿಂದ ನೋಡುತಿದೆ ಸೊಗಸೆಲ್ಲ
ನಿನ್ನಲ್ಲಿ ನೋವು ಇದೇಕೆ ಇದೇಕೆ ॥೨॥

♦♦♦♦♦




ಚಿತ್ರ : ಹಾಲು ಜೇನು (೧೯೮೨)
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ಜಿ.ಕೆ. ವೆಂಕಟೇಶ್

ಹಾಲು ಜೇನು ಒಂದಾದ ಹಾಗೆ
ನನ್ನ ನಿನ್ನ ಜೀವನ
ನೀ ನಗುತಲಿ ಸುಖವಾಗಿರೆ
ಆನಂದದ ಹೊನಲಾಗಿರೆ
ಬಾಳೆ ಸವಿಗಾನ ॥ಪ॥

ಬಿಸಿಲಾಗಲಿ ಮಳೆಯಾಗಲಿ
ನೆರಳಾಗಿ ನಾನು ಬರುವೆನು ಜೊತೆಗೆ
ಸವಿಮಾತಲಿ ಸುಖ ನೀಡುವೆ
ಎಂದೆಂದಿರೂ ಹೀಗೆ
ಹೂವಾಗಲಿ ಈ ಮೊಗವರಳಿ
ಸಂತೋಷದ ಪರಿಮಳ ಚೆಲ್ಲಿ ಹಾಯಾಗಿರು ॥೧॥

ಈ ತಾವರೆ ಮೊಗವೇತಕೆ
ಮೊಗ್ಗಿನ ಹಾಗೆ ಸೊರಗಿದೆ ಚೆಲುವೆ
ಇಂದೇತಕೆ ಈ ಮೌನವು
ಹೀಗೇಕೆ ನೀನಿರುವೆ
ನೀನೇತಕೆ ಬಾಡುವೆ ಕೊರಗಿ
ನಾನಿಲ್ಲವೆ ಆಸರೆಯಾಗಿ ಹಾಯಾಗಿರು ॥೨॥

♦♦♦♦♦



ಚಿತ್ರ : ಚಲಿಸುವ ಮೋಡಗಳು (೧೯೮೨)
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ರಾಜನ್-ನಾಗೇಂದ್ರ

ಜೇನಿನ ಹೊಳೆಯೊ ಹಾಲಿನ ಮಳೆಯೋ
ಸುಧೆಯೋ ಕನ್ನಡ ಸವಿ ನುಡಿಯೋ
ವಾಣಿಯ ವೀಣೆಯ ಸ್ವರಮಾಧುರ್ಯವೋ
ಸುಮಧುರ ಸುಂದರ ನುಡಿಯೋ ಆಹಾ.. ॥ಪ॥

ಕವಿ ನುಡಿ ಕೋಗಿಲೆ ಹಾಡಿದ ಹಾಗೆ
ಸವಿ ನುಡಿ ಗಾಳಿಯ ತಣ್ಣನೆ ಹಾಗೆ
ಒಲವಿನ ಮಾತುಗಳಾಡುತಲಿರಲು
ಮಲ್ಲಿಗೆ ಹೂಗಳು ಅರಳಿದ ಹಾಗೆ
ಮಕ್ಕಳು ನುಡಿದರೆ ಸಕ್ಕರೆಯಂತೆ
ಅಕ್ಕರೆ ನುಡಿಗಳು ಮುತ್ತುಗಳಂತೆ
ಪ್ರೀತಿಯ ನೀತಿಯ ಮಾತುಗಳೆಲ್ಲ
ಸುಮಧುರ ಸುಂದರ ನುಡಿಯೊ ಆಹಾ ॥೧॥

ಕುಮಾರವ್ಯಾಸನ ಕಾವ್ಯದ ಚಂದ
ಕವಿ ಸರ್ವಜ್ಞನ ಪದಗಳ ಅಂದ
ದಾಸರು ಶರಣರು ನಾಡಿಗೆ ನೀಡಿದ
ಭಕ್ತಿಯ ಗೀತೆಗಳ ಪರಮಾನಂದ
ರನ್ನನು ರಚಿಸಿದ ಹೊನ್ನಿನ ನುಡಿಯು
ಪಂಪನು ಹಾಡಿದ ಚಿನ್ನದ ನುಡಿಯು
ಕನ್ನಡ ತಾಯಿಯು ನೀಡಿದ ವರವು
ಸುಮಧುರ ಸುಂದರ ನುಡಿಯೊ ಆಹಾ ॥೨॥

♦♦♦♦♦

ಚಿತ್ರ : ಕಾಮನಬಿಲ್ಲು (೧೯೮೩)
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ಉಪೇಂದ್ರ ಕುಮಾರ್

ಬಾ ಮುತ್ತು ಕೊಡುವೆ ಕಂದನೆ
ನನ್ನ ಮುದ್ದು ರಾಜಾ
ಬಾ ಮುತ್ತು ಕೊಡುವೆ ಕಂದನೆ
ನನ್ನ ಮುದ್ದು ರಾಜಾ ॥ಪ॥

ನಿನ್ನ ಹವಳದಂಥ ತುಟಿಗೆ ಇಂದು
ಚ್ಚ್... ಎಂದು ನಾನು ॥ಅ.ಪ॥

ನಿನ್ನ ಮೊಗವನ್ನು ಕಂಡಾಗ ನಾಚಿ
ಶಶಿ ಮೋಡದಲಿ ಮರೆಯಾದನು
ನಿನ್ನ ತುಂಟಾಟ ನೋಡಿ ಬೆರಗಾಗಿ
ಕೃಷ್ಣ ಗುಡಿಯಲ್ಲಿ ಶಿಲೆಯಾದನು
ನೀನಾಡೋ ತೊದಲು ನುಡಿ ಅರಗಿಳಿಯ ಮಾತಂತೆ
ನಿನ್ನ ಸವಿಜೇನ ಹನಿಯಂತೆ
ನನ್ನ ಮುದ್ದುರಾಜ ॥೧॥

ನಕ್ಕು ನಲಿದಾಗ ಬೆಳದಿಂಗಳಂತೆ
ನೀನು ಅತ್ತಾಗ ಸಂಗೀತವೂ
ಅಂದ ಬಂಗಾರದ ಬೊಂಬೆಯಂತೆ
ಕಂದ ಈ ಮನೆಗೆ ನೀ ಪ್ರಾಣವೂ
ನಿನ್ನನ್ನು ಬಣ್ಣಿಸಲು ನನ್ನಲ್ಲಿ ಮಾತಿಲ್ಲ
ನೀ ನನ್ನ ಉಸಿರಂತೆ ನನ್ನ ಮುದ್ದು ರಾಜ ॥೨॥

♦♦♦♦♦

ಚಿತ್ರ : ಎರಡು ನಕ್ಷತ್ರಗಳು (೧೯೮೩)
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ಜಿ.ಕೆ. ವೆಂಕಟೇಶ್

ಗೆಳತಿ ಬಾರದು ಇಂಥಾ ಸಮಯ
ಅನುರಾಗ ಬೇಕೆಂದಿದೆ ಹೃದಯ ॥ಪ॥

ನೋಡು ಹಿತವಾಗಿ ತಂಗಾಳಿ ಬೀಸಿ
ಹೂವ ಕಂಪನ್ನು ಎಲ್ಲೆಲ್ಲೂ ಹಾಸಿ
ಮೈಗೆ ಸೋಕಿ ತಂಪನ್ನು ಬೆರೆಸಿ
ಬಯಕೆ ಹೊಮ್ಮಿ ಹೊಮ್ಮಿ ಕಾಡುತಿರೆ
ಹಿತವಾದ ನೋವಿಂದ ನಾ ಬೆಂದೆ ॥೧॥

ಮನದಾಸೆ ನೀನೇತಕೆ ಕಾಣೆ
ನಿನ್ನಾಸೆ ಅದೇನಿದೆ ಜಾಣೆ
ಚೆಲುವೆ ತಾಳೆನು ಇನ್ನೂ ವಿರಹ
ಎದೆಯ ತುಂಬಿದೆ ನಿನ್ನ ಮೋಹ
ಒಲವಿಂದ ನೀ ಬಾರೆಯ ಸನಿಹ ॥೨॥

◆◆◆◆◆



ಚಿತ್ರ : ಸಮಯದ ಗೊಂಬೆ (೧೯೮೪)
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ಎಂ. ರಂಗರಾವ್

ಚಿನ್ನದ ಗೊಂಬೆಯಲ್ಲ ದಂತದ ಗೊಂಬೆಯಲ್ಲ
ಬುದ್ದಿ ಇರುವ ಬೊಂಬೆಯು
ಕಾಲವು ಕುಣಿಸಿದಂತೆ ಆ ವಿಧಿ ಎಣಿಸಿದಂತೆ
ಆಡುವ ಸಮಯದ ಗೊಂಬೆ ಮಾನವ
ಆಡುವ ಸಮಯದ ಗೊಂಬೆ ॥ಪ॥

ಹೇ ಸಿಡಿಯುವ ರೋಷದಲಿ
ಬಡಿಯುವ ಸೇಡಿನಲಿ ದಿನವೂ ಹೋರಾಟವೇ
ನಲಿಯುವ ಪ್ರೀತಿಯಲಿ
ನಗಿಸುವ ಮಾತಿನಲಿ
ಮನುಜ ಜೊತೆಯಾಗಿ ಒಂದಾಗಿ ಬಾಳುವ
ಅವನು ಸಂತೋಷ ಎಲ್ಲೆಂದು ಹುಡುಕುವ
ಬಿಸಿಲಲ್ಲಿ ಮಳೆಯಲ್ಲಿ ಚಳಿಯಲ್ಲಿ
ವಿನೋದವೊ ವಿಷಾದವೊ ಹೊಂದಿಕೊಳ್ಳುವ ॥೧॥

ಹೇ ಜನಿಸಿದ ಊರೊಂದು
ಬೆಳೆಯುವ ನಾಡೊಂದು
ಬೆರೆಯುವ ಮಣ್ಣೊಂದು
ಮನುಜ ಇರುವಲ್ಲೆ ಹಾಯಾಗಿ ಬಾಳುವ
ಸುಖದ ಕನಸಲ್ಲೇ ದಿನವೆಲ್ಲ ತೇಲುವ
ನೆನಪಿನ ಸುಳಿಯಲಿ ಮರೆವಿನ ಮರೆಯಲಿ
ವಿನೋದವೊ ವಿಷಾದವೊ ಹೊಂದಿಕೊಳ್ಳುವ ॥೨॥

♦♦♦♦♦

ಚಿತ್ರ : ಶ್ರಾವಣ ಬಂತು (೧೯೮೪)
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ಎಂ. ರಂಗರಾವ್

ಹೊಸ ಬಾಳಿನ ಹೊಸಿಲಲಿ ನಿಂತಿರುವ
ಹೊಸ ಜೋಡಿಗೆ ಶುಭವಾಗಲಿ
ಹೊಸ ಆಸೆಯ ಅಲೆಯಲಿ ತೇಲುತಿಹ
ನವ ಜೋಡಿಗೆ ಶುಭವಾಗಲಿ ॥ಪ॥

ಆ ದೇವತೆಗಳು ಉಲ್ಲಾಸದಿ ಬಂದರು
ನಿಮ್ಮನು ಹರಸುತಲಿ
ಆ ಮಂಜುನಾಥನ ಕೃಪಾ ಕಟಾಕ್ಷವು
ಎಂದೆಂದು ನಿಮಗಿರಲಿ
ಇದು ಬ್ರಹ್ಮನು ಬೆಸೆದಾ ಅನುಬಂಧ
ಅನುಗಾಲವು ನೀಡಲಿ ಆನಂದ ॥೧॥

ಈ ಹಚ್ಚನೆ ಹಸುರಿನ ತೋರಣವು
ಸುಸ್ವಾಗತವೆಂದು ಹೇಳುತಿದೆ
ಈ ಮಂಗಳ ವಾದ್ಯವು ಮೊಳಗಿರಲು
ಶುಭಕಾರ್ಯದ ಸಂಭ್ರಮ ತೋರುತಿದೆ
ಜನುಮ ಜನುಮದ ಸ್ನೇಹವಿದು
ಸಂಸಾರದ ಬಾಳಿಗೆ ನಾಂದಿ ಇದು ॥೨॥

ಈ ಶ್ರಾವಣ ಮಾಸವು ತಂದಾ ಉಡುಗೊರೆ
ಉಲ್ಲಾಸವ ತರಲಿ
ಆ ಮಂಜುನಾಥನ ಕೃಪಾಕಟಾಕ್ಷವು
ಎಂದೆಂದೂ ನಿಮಗಿರಲಿ
ಒಂದೇ ವರುಷದ ಅವಧಿಯಲಿ
ಹಸುಕಂದನು ಮಡಿಲಲಿ ನಗುತಿರಲಿ ॥೩॥

♦♦♦♦♦

ಚಿತ್ರ : ಯಾರಿವನು (೧೯೮೪)
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ರಾಜನ್-ನಾಗೇಂದ್ರ

ಕಾವೇರಿ ಏಕೆ ಓಡುವೆ
ನನ್ನಲ್ಲಿ ಪ್ರೀತಿ ಇಲ್ಲವೆ
ಬಳಿ ಸೇರದೆ ಮಾತಾಡದೆ
ಹೀಗೇಕೆ ನೋಡುವೆ
ನನ್ನಲೇಕೆ ಕೋಪವು
ನೀನೆ ನನ್ನ ಜೀವವು
ನಿನಗೊಂದು ಕಿವಿಮಾತು ಇದೆ ಬಾರೆ ॥ಪ॥

ಬಿಸಿಲಲ್ಲಿ ಬಾಯಾರಿ ಓಡಿ ಬಂದೆನು
ನನ್ನ ದಾಹ ಮುಗಿದಾಗ ಜಾರಿಕೊಳುವೆನು
ದೇವಿ ಕನಿಕರಿಸು ಅರೆಕ್ಷಣಾ
ಬಲ್ಲೆ ನಿನ್ನ ಮನವನಾ
ನಿನ್ನ ಅಂದ ಇನ್ನೆಲ್ಲೂ ನಾಕಾಣೆನು
ನಿನಗಾಗಿ ಈ ನನ್ನ ಜೀವ ಕೊಡುವೆನು
ನನ್ನ ಹೃದಯವನು ಅರಿಯೆಯಾ
ನನ್ನ ಪ್ರೇಮ ಬಯಸೆಯಾ
ಈ ಮೌನ ಸರಿಯಲ್ಲ ಬಳಿ ಬಾ... ಬಾ...
ನನ್ನಾಸೆ ನಿನಗೆ ಇಲ್ಲವೆ
ನಾ ನಿನ್ನ ನಲ್ಲನಲ್ಲವೆ
ನಿನಗಾಗಿಯೇ ನಾ ಬಾಳುವೆ ಸಂದೇಹ ಬೇಡವೆ
ನೀ ಹೀಗೆ ಹೋದರೆ ಇರುಳೆಲ್ಲ ತೊಂದರೆ
ಸುಖನಿದ್ರೆ ಬರದಲ್ಲ ಬಳಿಬಾರೆ ॥೧॥

ತಂಗಾಳಿ ಸೆರಗೆಳೆದು ಆಟವಾಡಲು
ಮೈ ಅಂದ ಕಂಡಾಗ ಕಣ್ಣು ಹಾಕಲು
ಏಕೆ ದುರದುರನೆ ನೋಡುವೆ
ನನ್ನ ಕಂಡು ಸಿಡುಕುವೆ ಏಕೆ
ಕವಿಯಾಗಿ ನಿನಗೊಂದು ಕವಿತೆ ಹಾಡಲೆ
ಋಷಿಯಾಗಿ ಬಳಿಯಲ್ಲೇ ಧ್ಯಾನ ಮಾಡಲೇ
ಇಲ್ಲೇ ನದಿಯೊಳಗೆ ಮುಳುಗಲೆ
ಹೇಳೆ ನನ್ನ ಚಂಚಲೆ
ನೋಡಿಲ್ಲಿ ಯಾರಿಲ್ಲ ಬಳಿ ಬಾ ಬಾ... ॥೨॥

♦♦♦♦♦


ಚಿತ್ರ : ಅದೇ ಕಣ್ಣು (೧೯೮೫)
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ಜಿ.ಕೆ. ವೆಂಕಟೇಶ್

ಅದೇ ಕಣ್ಣು ಅದೇ ಕಣ್ಣು
ಬೇಟೆ ಆಡುತಿದೆ
ಭಯವಾ ತುಂಬಿದೆ ಭಯವಾ ತುಂಬಿದೆ ॥ಪ॥

ಎಲ್ಲೇ ಹೋದರು ನೆರಳಿನ ಹಾಗೆ
ಹಿಂದೆ ಬರುತಿದೆ
ಇರುಳಲಿ ಸುಳಿವ ಮಿಂಚಿನ ಕಣ್ಣನು ಚುಚ್ಚುತಿದೆ
ನೆಲವನು ಬಗೆದು ಮಣ್ಣಾಗಿರುವ ನಿಜವಾ ಹುಡುಕುತಿದೆ
ಪ್ರಾಣವ ತೆಗೆದರು
ಕಂಗಳು ಬದುಕಿ
ಹೆದರಿಸಿ ನಡುಗುತಿದೆ ॥೧॥

ನನ್ನೆದೆಯಲ್ಲಿ ಶಾಂತಿಯ ಕದಡಿ
ಕಿಚ್ಚನು ಹಚ್ಚುತಿದೆ
ನೆಮ್ಮದಿ ಸುಟ್ಟು ರೋಷವ ಹೆಚ್ಚಿ
ಹುಚ್ಚನ ಮಾಡುತಿದೆ
ಮಾಡಿದ ಪಾಪ ಸೇಡನು ತೀರಿಸೆ
ಹೊಂಚನು ಹಾಕುತಿದೆ ॥೨॥

♦♦♦♦♦



ಚಿತ್ರ : ಭಾಗ್ಯದ ಲಕ್ಷ್ಮಿ ಬಾರಮ್ಮ (೧೯೮೬)
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ಸಿಂಗೀತಂ ಶ್ರೀನಿವಾಸರಾವ್

ಯಾವ ಕವಿಯು ಬರೆಯಲಾರ
ಒಲವಿನಿಂದ ಕಣ್ಣೋಟದಿಂದ
ಹೃದಯದಲ್ಲಿ ನೀ ಬರೆದ
ಈ ಪ್ರೇಮ ಗೀತೆಯ ॥ಪ॥

ನಿನ್ನ ಕವಿತೆ ಎಂಥ ಕವಿತೆ
ರಸಿಕರಾಡೊ ನುಡಿಗಳಂತೆ
ಮೊಲ್ಲೇ ಹೂವು ಅರಳಿದಂತೆ
ಚಂದ್ರಕಾಂತಿ ಚೆಲ್ಲಿದಂತೆ
ಜೀವ ಜೀವ ಅರಿತು ಬೆರೆತು
ಸುಖವ ಕಾಣುವಂತೆ ॥೧॥

ಪ್ರೇಮ ಸುಮವು ಅರಳುವಂತೆ
ಪ್ರಣಯ ಗಂಧ ಚೆಲ್ಲುವಂತೆ
ಕಂಗಳೆರಡು ದುಂಬಿಯಾಗಿ
ಭ್ರಮರ ಗೀತೆ ಹಾಡುವಂತೆ
ಜೇನಿಗಾಗಿ ತುಟಿಗಳೆರಡು
ಸನಿಹ ಸೇರುವಂತೆ ॥೨॥

♦♦♦♦♦



ಚಿತ್ರ : ಅನುರಾಗ ಅರಳಿತು (೧೯೮೬)
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ಉಪೇಂದ್ರ ಕುಮಾರ್

ಶ್ರೀಕಂಠ ವಿಷಕಂಠ
ಲೋಕವನುಳಿಸಲು ವಿಷವನು ಕುಡಿದ ನಂಜುಂಡೇಶ್ವರನೆ
ಗತಿ ನೀನೆಂದರೆ
ಓಡುತ ಬರುವ ಕರುಣಾ ಸಾಗರನೆ ||ಪ||

ಹರಿಯುವ ನದಿಯಲಿ ಕಲರವ ನಾದಕೂಡ
ಶಿವ ಶಿವ ಎನ್ನುತಿದೆ
ಅರಳಿದ ಸುಮದಲಿ ನಲಿಯುವ ಭ್ರಮರವು
ಶಿವ ನಾಮ ಹಾಡುತಿದೆ
ಬೀಸುವ ಗಾಳಿಯು ಪರಿಮಳ ಚೆಲ್ಲುತ
ನಿನ್ನನು ಸ್ಮರಿಸುತಿದೆ ||೧||

ಸಾವಿರ ಜನುಮವು ಬಂದರು ಹೀಗೆ
ನಿನ್ನ ಸನ್ನಿಧಿಯಲಿ ಇರಿಸು
ಉಸಿರಿನ ಉಸಿರಲು
ತಂದೆ ಎಂದೂ ನಿನ್ನ ನಾಮವನೆ ಬೆರೆಸು
ಕತ್ತಲಲಿರುವೆ ನೆಮ್ಮದಿ ತುಂಬಿ ಕೈ ಹಿಡಿದು ನಡೆಸು ||೨||

♦♦♦♦♦



ಚಿತ್ರ : ಗುರಿ (೧೯೮೬)
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ರಾಜನ್-ನಾಗೇಂದ್ರ

ವಸಂತ ಕಾಲ ಬಂದಾಗ
ಮಾವು ಚಿಗುರಲೇ ಬೇಕು
ಕೋಗಿಲೆ ಹಾಡಲೇ ಬೇಕು
ಕಂಕಣ ಕೂಡಿ ಬಂದಾಗ
ಮದುವೆ ಆಗಲೇ ಬೇಕು
ಮಂಗಳ ವಾದ್ಯ ಮೊಳಗಲೇಬೇಕು ॥ಪ॥

ಹೊಸ ಬಾಳ ಹೊಸಲಲ್ಲಿ
ನಸು ನಾಚಿ ನಿಂತಾಗ
ನಿನ್ನಂದ ನಾ ನೋಡಬೇಕು ॥ಅ.ಪ॥

ರೇಷ್ಮೆ ಸೀರೆಯುಟ್ಟು ಹೊಸ ಹೂವ ಮುಡಿಯಲುಟ್ಟು
ಮಧುಮಗಳಾಗಿ ಕುಳಿತಿರುವಾಗ
ನೋಡುವುದೇ ಭಾಗ್ಯ ನಿನ್ನನು
ಮಂತ್ರ ಹೇಳುವಾಗ
ಮಾಂಗಲ್ಯ ಕಟ್ಟುವಾಗ
ಕಳ್ಳಿಯ ಹಾಗೆ ಮಳ್ಳಿಯ ಹಾಗೆ
ನಲ್ಲನ ನೀ ನೋಡೊ ನೋಟವ
ಕಾಣುವಾಸೆ ತಾಳಲಾರೆ ನನ್ನ ಮುದ್ದು ಸೋದರಿ ॥೧॥

ಜೋಡಿ ಬಂದ ಮೇಲೆ
ನಿನ್ನ ಬಾಳ ರೀತಿ ಬೇರೆ
ಬದುಕಲಿ ಜಾಲಿ ವರುಷದಿ ಲಾಲಿ
ಬೊಂಬೆಯ ಹಾಗೊಂದು ಕೈಯಲಿ
ನಾಳೆ ನಿನ್ನ ಮಗನು
ನನ್ನ ಮಾವ ಎಂದು ಕರೆದಾಗ
ತಂಗಿಯೆ ನಿನಗೆ ಅಂದದ ಸೊಸೆಯ
ಎಲ್ಲಿಂದ ನಾ ತಂದು ಕೊಡಲಿ
ಲಕ್ಷ ಲಕ್ಷ ಕೇಳಿದಾಗ
ಎಲ್ಲಿ ಓಡಿ ಹೋಗಲಿ ॥೨॥

♦♦♦♦♦

ಚಿತ್ರ : ರಣರಂಗ (೧೯೮೭)
ಸಾಹಿತ್ಯ : ಹಂಸಲೇಖಾ
ಸಂಗೀತ : ಹಂಸಲೇಖಾ

ಜಗವೇ ಒಂದು ರಣರಂಗ
ಧೈರ್ಯ ಇರಲಿ ನಿನ ಸಂಗ
ಬಾರೋ ಬಾರೋ ನನ್ನ ರಾಜ
ನಿನಗೇ ನೀನೇ ಮಹರಾಜ ॥ಪ॥

ಹಿಡಿಯೋ ಆತ್ಮ ಬಲದಸ್ತ್ರ
ಅದುವೇ ಜಯದ ಮಹಾಮಂತ್ರ
ನಿನ್ನ ದಾರಿಯಲ್ಲಿ ಎಲ್ಲೂ ಸೋಲೆ ಇಲ್ಲ
ಬಾಳ ಯುದ್ಧದಲ್ಲಿ ನಿನ್ನ ಗೆಲ್ಲೋರಿಲ್ಲ
ಛಲವೋ ಬಲವೋ ಮುಂದೆ ನುಗ್ಗಿ ನುಗ್ಗಿ ಬಾ ॥೧॥

ತಿರುಗೋ ಭೂಮಿಯಲ್ಲಿ ನಡೆವಾ
ಬಾಳಿನಲ್ಲಿ ಏನೂ ನಿಲ್ಲದಮ್ಮ ರಾಜ
ಜನನ ಎಂಬುದಿಲ್ಲಿ ಮರಣ ಎಂಬುದನ್ನು
ಎಂದೂ ಗೆಲ್ಲದಮ್ಮ ರಾಜ
ಜನ ಇರುವ ಗೋಳವೋ ಇದು
ದಿನ ಕಳೆವ ಜಾಲವೋ ಇದು
ಜಯ ಭಯದ ಚಿಂತೆ ಮಾಡದೆ
ಇಲ್ಲಿ ಮಾನವರ ಸುಟ್ಟು ಗಾಯವಿದೆ
ಇದ್ದರೆ ಗೆದ್ದರೆ ನ್ಯಾಯವನ್ನು ಉಳಿಸು ಬಾ ॥೨॥

ಯುದ್ಧ ಮಾಡುವಾಗ ಶತ್ರು ಬೀಳುವಾಗ
ಕರುಣೆ ಕಟ್ಟಿ ಇಡು ರಾಜ
ದೇಹಿ ಎನ್ನುವಾಗ ನಿದ್ದೆ ಮಾಡುವಾಗ
ಕತ್ತಿ ಎತ್ತಬೇಡ ರಾಜ
ಭೂಮಿ ಮೇಲೆ ಹುಟ್ಟಿ ಬಂದರೆ
ಆ ಋಣವ ಕಟ್ಟ ಬೇಡವೇ
ಅನ್ಯಾಯ ಗೆಲ್ಲುತ್ತಿದ್ದರೆ
ಸಿಡಿದೆದ್ದು ನಿಲ್ಲಬೇಡವೇ
ಇಲ್ಲಿ ಕ್ರೂರತನ ಅಟ್ಟದಲ್ಲಿ ಇದೆ
ನಿನ್ನ ಜಾಣತನ ಮೆಟ್ಟಿಲಲ್ಲಿ ಇದೆ
ಮೆಟ್ಟು ಬಾ ಅಟ್ಟು ಬಾ ದಿಟ್ಟ ಹೆಜ್ಜೆ ಇಟ್ಟು ಬಾ ॥೩॥

♦♦♦♦♦

ಚಿತ್ರ : ನಂಜುಂಡಿ ಕಲ್ಯಾಣ (೧೯೮೯)
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ಉಪೇಂದ್ರ ಕುಮಾರ್

ಬದುಕೆ ಹಸಿರು ಪ್ರೀತಿ ಬೆರೆತಾಗ
ಬದುಕೆ ಕೆಸರಂತೆ ದ್ವೇಷ ಇರುವಾಗ ||ಪ||

ಗೃಹಣಿಯೆ ಲಕ್ಷ್ಮಿಯು ಮನೆಯೇ ಮಂದಿರ
ಶಾಂತಿಯೆ ಆ ಮನೆಗೆ ಹುಣ್ಣಿಮೆ ಚಂದಿರ
ಇನಿಯನ ಅರಿವುದೆ ಸತಿಯಾ ಧರ್ಮ
ಹೃದಯ ಗೆಲುವುದೆ ಸುಖದಾ ಮರ್ಮ
ಸ್ನೇಹದಿ ಕಲೆತು ಬೆರೆತಾಗ
ಜೊತೆಯಲಿ ಸೇರಿ ನಡೆದಾಗ ||೧||

ಸತಿಪತಿ ಸಂಸಾರದ ಕಣ್ಣುಗಳಂತೆ
ಬದುಕಿನ ಬಂಡಿಗೆ ಗಾಲಿಗಳಂತೆ
ಪ್ರೇಮದ ಮಾತುಗಳೇ ಕೆನೆಹಾಲಂತೆ
ನಗುವೆ ಮಲ್ಲಿಗೆಯೇ ಹೂವುಗಳಂತೆ
ತಿಂಗಳ ಬೆಳಕೆ ದಿನವೆಲ್ಲ
ಈ ನಿಜವನ್ನು ಅರಿತಾಗ ||೨||

♦♦♦♦♦



ಚಿತ್ರ : ಅಶ್ವಮೇಧ (೧೯೭೦)
ಸಾಹಿತ್ಯ : ಡಾ॥ ದೊಡ್ಡರಂಗೇಗೌಡ
ಸಂಗೀತ : ಸಂಗೀತ ರಾಜ

ಹೃದಯ ಸಮುದ್ರ ಕಲಕಿ
ಹೊತ್ತಿದೆ ದ್ವೇಷದ ಬೆಂಕಿ
ರೋಷಾಗ್ನಿ ಜ್ವಾಲೆ ಉರಿದುರಿದು
ದುಷ್ಟ ಸಂಹಾರಕೆ ಸತ್ಯ ಝೇಂಕಾರಕೆ
ಪ್ರಾಣ ಒತ್ತೆ ಇಟ್ಟು ಹೋರಾಡುವೆ
ದಿಟ್ಟ ಹೆಜ್ಜೆ ಇಟ್ಟು ಯಜ್ಞ ದೀಕ್ಷೆ ತೊಟ್ಟು
ನಡೆಸುವೆ ಅಶ್ವಮೇಧ... ಅಶ್ವಮೇಧ... ಅಶ್ವಮೇಧ... ॥ಪ॥

ಸೂರ್ಯ ಚಂದ್ರರೇ ನಿನ್ನ ಕಂಗಳು
ಗಿರಿ ಶೃಂಗವೇ ನಿನ್ನ ಅಂಗವೋ
ದಿಕ್ಪಾಲಕರೇ ನಿನ್ನ ಕಾಲ್ಗಳು
ಮಿಂಚು ಸಿಡಿಲೇ ನಿನ್ನ ವೇಗವು
ಜೀವ ಜೀವದಲಿ ಬೆರೆತು ಹೋದ
ಭಾವ ಭಾವದಲಿ ಕರಗೀ ಹೋದ
ಜೀವಾಶ್ವವೇ ದೂರಾದೆಯಾ
ಪ್ರಾಣಾಶ್ವವೇ ಮರೆಯಾದೆಯಾ
ದಿಟ್ಟ ಹೆಜ್ಜೆ ಇಟ್ಟು... ಯಜ್ಞದೀಕ್ಷೆ ತೊಟ್ಟು
ನಡೆಸುವೆ ಅಶ್ವಮೇಧ... ಅಶ್ವಮೇಧ... ಅಶ್ವಮೇಧ... ॥೧॥

ವಿಷವ್ಯೂಹವ ಕುಟ್ಟಿ ಕೆಡವಲು
ವೀರ ಪೌರುಷ ಎತ್ತಿ ಹಿಡಿದು
ಛದ್ಮ ವೇಷವಾ ಹೊರಗೆಳೆಯಲು
ಕ್ಷಾತ್ರ ತೇಜದಾ ಕತ್ತಿ ಹಿಡಿದು
ಖೂಳ ರಾಕ್ಷಸರ ಕೊಚ್ಚಿ ಕಡಿವೆ
ನೀತಿ ನೇಮಗಳ ಬಿತ್ತಿ ಬೆಳೆವೆ
ಆಕಾಶವೇ ಮೇಲ್ಬೀಳಲಿ
ಭೂತಾಯಿಯೇ ಬಾಯ್ಬಿರಿಯಲಿ
ದಿಟ್ಟ ಹೆಜ್ಜೆ ಇಟ್ಟು ಯಜ್ಞದೀಕ್ಷೆ ತೊಟ್ಟು
ನಡೆಸುವೆ ಅಶ್ವಮೇಧ... ಅಶ್ವಮೇಧ... ಅಶ್ವಮೇಧ... ॥೨॥

♦♦♦♦♦

ಚಿತ್ರ : ಮೋಡದ ಮರೆಯಲ್ಲಿ (೧೯೯೧)
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ರಾಜನ್-ನಾಗೇಂದ್ರ

ಮನದಲ್ಲಿ ಆಸೆಯೇ ಬೇರೆ
ಬದುಕಲ್ಲಿ ನಡೆವುದೇ ಬೇರೆ
ವಿಧಿ ಬರೆದ ಕವಿತೆ ಬೇರೆ
ಆ ಕವಿತೆ ರಾಗ ಬೇರೆ ||ಪ||

ನೀ ನಡೆದ ಹಾದಿ ಬೇರೆ
ಮುಂದೇನು ಕಾಣಲಾರೆ ||ಅ.ಪ||

ಹೆತ್ತೋಳ ಪ್ರೀತಿ ಕಂಡೆ
ನಿನ್ನ ತಂದೆ ದೇವರೆಂದೆ
ಆನಂದದಲ್ಲೇ ನೀ ತೇಲಿಹೋದೆ
ಮಳೆಬಿಲ್ಲ ಆನಂದವನ್ನು
ಕಣ್ತುಂಬ ನೋಡುವಾಗ
ಮಿಂಚೊಂದು ಬಂದು ಕಣ್ಣುಕುಕ್ಕಿದಂತೆ
ಬಾಳೆಲ್ಲ ಇರುಳಾಯ್ತೇ... ಕಣ್ಣೀರೇ ಗತಿಯಾಯ್ತೇ ||೧||

ಒಣ ಹುಲ್ಲ ರಾಶಿ ಮೇಲೆ
ಕಿಡಿಯೊಂದು ಹಾರಿದಾಗ
ಸುಳಿಗಾಳಿ ಬೀಸಿ ಜ್ವಾಲೆ ಮೂಡಿದಂತೆ
ನಸುಗೋಪ ಕಾಣಿಸಿಕೊಂಡು
ಕಡುರೋಷವಾಯಿತೇ
ಅಪರಾಧಿಯಾಗಿ ನೋಡುವಂತೆ
ಮಾಡಿತೆ ನಿನ್ನೋರೇ
ನಿನ್ನಿಂದ ದೂರಾಗಿ ನಿಂತಾಯ್ತೇ ||೨||

♦♦♦♦♦

ಚಿತ್ರ : ಜೀವನಚೈತ್ರ (೧೯೯೨)
ಸಾಹಿತ್ಯ : ಚಿ. ಉದಯಶಂಕರ್
ಸಂಗೀತ : ಎಂ. ರಂಗರಾವ್


ನಾದಮಯಾ ಈ ಲೋಕವೆಲ್ಲ
ಕೊಳಲಿಂದ ಗೋವಿಂದ ಆನಂದ ತಂದಿರಲು ॥ಪ॥

ನದಿಯ ನೀರು ಮುಗಿಲ ಸಾಲು
ಮುರಳಿಯ ಸ್ವರದಿ ಬೆರೆತಿರಲು
ಚೆಲುವ ಮರೆತು ನಿಂದಿರಲು ॥ಅ.ಪ॥

ಸ್ವರಗಳ ಮಾಧುರ್ಯ ರಾಗದ ಸೌಂದರ್ಯ
ಮೃಗಗಳ ತಣಿಸಿ ಖಗಗಳ ಕುಣಿಸಿ
ಸಡಗರದಿಂದಾ... ಗಗನದ ಅಂಚಿಂದಾ
ಸುರರು ಬಂದು ಹರಿಯ ಕಂಡು ಹರುಷದಿ
ಭುವಿಯೇ ಸ್ವರ್ಗ ಎನುತಿರಲು ॥೧॥

ಸ...ಮ...ಗರಿ...ದ ಮ ದ ನಿ ಸ
ದರಿಸ ನಿಸನಿ ಸನಿ ದಮದ ಪಗ ಮದನಿ
ಸರಿಗರಿಸ ನಿಸರಿ ಸರಿ ಗರಿಸ ನಿಗಪ ದನಿ
ತನನ ತನನ ತನನ ತನನನನನಾ
ದೊಂ... ತನನನನ ದೊಂ... ತನನನ ॥೨॥

♦♦♦♦♦



ಚಿತ್ರ : ಆಕಸ್ಮಿಕ (೧೯೯೩)
ಸಾಹಿತ್ಯ : ಹಂಸಲೇಖಾ
ಸಂಗೀತ : ಹಂಸಲೇಖಾ

ಬಾಳುವಂತ ಹೂವೆ ಬಾಡುವ ಆಸೆ ಏಕೆ
ಹಾಡುವಂತ ಕೋಗಿಲೆ ಅಳುವ ಆಸೆ ಏಕೆ
ಕವಲುದಾರಿಯಲ್ಲಿ ಬಾಳು ಸಾಧ್ಯವೇ
ಅವಳಿ ದೋಣಿ ಮೇಲೆ ಯಾನ ಯೋಗ್ಯವೇ ॥ಪ॥

ಯಾರಿಗಿಲ್ಲ ನೋವು ಯಾರಿಗಿಲ್ಲ ಸಾವು
ವ್ಯರ್ಥ ವ್ಯಸನದಿಂದ ಸಿಹಿಯು ಕೂಡ ಬೇವು
ಬಾಳು ಒಂದು ಸಂತೆ ಸಂತೆ ತುಂಬಾ ಚಿಂತೆ
ಮಧ್ಯ ವ್ಯಸನಗಳಿಂದ ಚಿಂತೆ ಬೆಳೆವುದಂತೆ
ಅಂಕೆಯಿರದ ಮನಸನು ದಂಡಿಸುವುದು ನ್ಯಾಯ
ಮೂಕ ಮುಗ್ಧ ದೇಹವ ಹಿಂಸಿಸುವುದು ಹೇಯ
ಸಣ್ಣ ಬಿರುಕು ಸಾಲದೆ ತುಂಬು ದೋಣಿ ತಳ ಸೇರಲು
ಸಣ್ಣ ಅಣಕ ಸಾಲದೆ ತುಂಬು ಬದುಕು ಬರಡಾಗಲು ॥೧॥

ಬಾಳ ಪಯಣದಲ್ಲಿ ಭರವಸೆಗಳು ಬೇಕು
ನಾಳೆ ನನ್ನದೆನ್ನುವ ನಂಬಿಕೆಗಳು ಬೇಕು
ಜೀವರಾಶಿಯಲ್ಲಿ ಮಾನವನಿಗೆ ಆದ್ಯತೆ
ನಾವೇ ಮೂಢರಾದರೆ ಜ್ಞಾನಕೆಲ್ಲಿ ಪೂಜ್ಯತೆ
ಇಲ್ಲಿ ಈಸಬೇಕು ಇದ್ದು ಜೈಸಬೇಕು
ನಾಗರೀಕರಾದ ಮೇಲೆ ಸುಗುಣರಾಗಬೇಕು
ನಿನ್ನ ಹಳದಿ ಕಣ್ಣಲಿ ಜನರನೇಕೆ ನೀ ನೋಡುವೆ
ಮನದ ಡೊಂಕುಗಾಣದಿ ಜಗವನೇಕೆ ನೀ ದೂರುವೆ ॥೨॥

♦♦♦♦♦

ಚಿತ್ರ : ಗಂಧದ ಗುಡಿ-ಭಾಗ ೨ (೧೯೯೪)
ಸಾಹಿತ್ಯ : ಚಿ. ಉದಯ ಶಂಕರ್
ಸಂಗೀತ : ರಾಜನ್-ನಾಗೇಂದ್ರ

ನಾವಾಡುವ ನುಡಿಯೇ ಕನ್ನಡ ನುಡಿ
ಚಿನ್ನದ ನುಡಿ ಸಿರಿಗನ್ನಡ ನುಡಿ
ನಾವಿರುವ ತಾಣವೆ ಗಂಧದ ಗುಡಿ
ಅಂದದ ಗುಡಿ ಚಂದದ ಗುಡಿ ಶ್ರೀಗಂಧದ ಗುಡಿ ॥ಪ॥

ಹಸುರಿನ ಬನಸಿರಿಗೇ ಒಲಿದು
ಸೌಂದರ್ಯ ಸರಸ್ವತಿ ಧರೆಗಿಳಿದು
ಹರಿಯುವ ನದಿಯಲಿ ಈಜಾಡಿ
ಹೂಬನದಲಿ ನಲಿಯುತ ಓಡಾಡಿ
ಚೆಲುವಿನ ಬಲೆಯಾ ಬೀಸಿದಳು
ಈ ಗಂಧದ ಗುಡಿಯಲಿ ನೆಲೆಸಿದಳು
ಇದು ಯಾರ ತಪಸಿನ ಫಲವೋ
ಈ ಕಂಗಳು ಮಾಡಿದ ಪುಣ್ಯವೋ ॥೧॥

ಚಿಮ್ಮುತ ಓಡಿವೆ ಜಿಂಕೆಗಳು
ಕುಣಿದಾಡುತ ನಲಿದಿವೆ ನವಿಲುಗಳು
ಮುಗಿಲನು ಚುಂಬಿಸುವಾಸೆಯಲಿ
ತೂಗಾಡುತ ನಿಂತ ಮರಗಳಲಿ
ಹಾರುತಿದೆ ಬಾನಾಡಿಗಳು
ಎದೆಯಲ್ಲಿ ಸಂತಸದಾ ಹೊನಲು
ಇದು ವನ್ಯ ಮೃಗಗಳ ಲೋಕವೋ
ಈ ಭೂಮಿಗೆ ಇಳಿದ ನಾಕವೋ ॥೨॥

◆◆◆◆◆

ಚಿತ್ರ : ಒಡಹುಟ್ಟಿದವರು (೧೯೯೪)
ಸಾಹಿತ್ಯ : ಗೀತಪ್ರಿಯ
ಸಂಗೀತ : ಉಪೇಂದ್ರ ಕುಮಾರ್

ಸೋಲೇ ಗೆಲುವೆಂದು ಬಾಳಲ್ಲಿ ಅರಿತಾದ ಮೇಲೆ
ಎಲ್ಲ ಅಪನಿಂದೆ ಅಪಮಾನ ಬಹುಮಾನದಂತೆ
ಈ ಸುಖದುಃಖವು ಅಳುವೂ ನಗುವು
ಎಲ್ಲಾ ಆ ದೇವನಾ ಕೊಡುಗೆ ॥ಪ॥

ದೇಹವ ಸವೆಸುತ ಪರಿಮಳ ಕೊಡುವ
ಗಂಧವು ನೋವಿಗೆ ನರಳುವುದೆ
ತನ್ನನೆ ದಹಿಸುತ ಬೆಳಕನು ತರುವ
ದೀಪವು ಅಳಲನು ಹೇಳುವುದೆ
ನಿನ್ನಯ ಸಹನೆಗೆ ಹೋಲಿಕೆ ಧರೆಯ
ಕರುಣೆಯು ನಿನ್ನಲಿ ಮೈತುಂಬಿರಲು
ಈ ಜನ್ಮ ಸಾರ್ಥಕವು ॥೧॥

ಗಾಳಿಯ ಭೀಕರ ದಾಳಿಗೆ ಪರ್ವತ
ಸ್ಥೈರ್ಯವನೆಂದಿಗು ಕಳೆಯುವುದೆ
ಸುಖ ಸಂಸಾರಕೆ ದುಡಿಯುವ ಹೆಣ್ಣು
ಸ್ವಾರ್ಥಕೆ ಮನಸನು ನೀಡುವಳೆ
ನಿಂದನೆ ಮಾತಿಗೆ ಕುಂದದೆ ಇರುವ
ಮಮತೆಯ ಮೂರ್ತಿಯೇ ನೀನಾಗಿರಲು
ಜೀವನ ಪಾವನವು ॥೨॥

♦♦♦♦♦



ಚಿತ್ರ : ಶುಭಲಗ್ನ (೧೯೭೫)
ಸಾಹಿತ್ಯ : ಆರ್.ಎನ್. ಜಯಗೋಪಾಲ್
ಸಂಗೀತ : ರಾಜೇಶ್ ರಾಮನಾಥನ್

ಮದುವೆಯ ಪದವೇ ಮಧುರ ಸೊಗಸು ಎಂದು
ನಗುತಿದೆ ಮನಸು ನೆನೆದು ಅದನು ಇಂದು
ಹೆಣ್ಣಿನ ಬಾಳಿಗೆ ಆ ಸಖನು ಬರಲು
ಅದುವೇ ಸುಖದ ಹೊನಲು ॥ಪ॥

ಹೆಣ್ಣೂ ಗಂಡು ನಿಶ್ಚಿತಾರ್ಥ
ನೋಟದಲ್ಲೇ ನೂರು ಅರ್ಥ
ಹೃದಯ ಬೆರೆತು ಹೊಸದು ಲೋಕವ ಸೇರಿದೆ
ಜಗವ ಮರೆತು... ಸಡಗರ ಸಂಭ್ರಮ ಎಂದೂ ॥೧॥

ತಾಳ ಮೇಳ ಮಂತ್ರ ಘೋಷ
ಜೀರಿಗೆ ಬೆಲ್ಲ ಧಾರೆ ಶಾಸ್ತ್ರ
ವಧುವಿಗೆ ವರನು... ತಾಳಿಯ ಕಟ್ಟುವ ವೇಳೆಯು
ಕೊನೆಯ ತನಕ... ಬಾಳಲಿ ಸೇರಿದ ಚಿನ್ನೆಯ
ಮದುವೆಯ ಬಂಧ... ಏಳು ಜನುಮದ ಬಂಧ

ಬಿಡಿಸುವಾ ಗಂಟು... ಬ್ರಹ್ಮ ಬರೆದ ನಂಟು
ಹೆಣ್ಣಿನ ಬಾಳಿಗೆ... ಒಲುಮೆ... ಚಿಲುಮೆ... ಮದುವೆ
ಸಖನೆ ಅವಳ ಒಡವೆ ॥೨॥

♦♦♦♦♦



ಚಿತ್ರ : ಓಂ (೧೯೯೫)
ಸಾಹಿತ್ಯ : ಉಪೇಂದ್ರ
ಸಂಗೀತ : ಹಂಸಲೇಖಾ

ಓಂ ಬ್ರಹ್ಮಾನಂದ ಓಂಕಾರ
ಆತ್ಮಾನಂದ ಸಾಕಾರ
ಓಂ ವೇದಾಂತವೇ ಝೇಂಕಾರ
ಆಧ್ಯಾತ್ಮಾದಿ ಮಧುಸಾರ ॥ಪ॥

ಹೇ ದಿನಕರ ಶುಭಕರ ಧರೆಗೆ ಬಾ
ಈ ಧರಣಿಯ ದೇಗುಲ ಬೆಳಗು ಬಾ
ನೀಗಿಸು ಬಾಳಿನ ಅಹಂ... ಅಹಂ...
ಮಾನಸ ಮಂದಿರ ಓಂಕಾರ ನಾದ ಓಂ ॥೧॥

ನಗುವ ಮನಸೇ ಸಾಕು
ನಮಗೆ ಹಗಲುಗನಸೇ ಬೇಡ
ಮನೆಯ ತುಂಬ ಪ್ರೀತಿ ಸಾಕು
ಬೆಳ್ಳಿ ಚಿನ್ನ ಬೇಡ
ತಂದೆ ತಾಯಿ ದೈವ
ಗುರುವೇ ನಮ್ಮ ಜೀವ
ಎಂಬ ದಿವ್ಯ ಮಂತ್ರ ನಮ್ಮ ಹೃದಯ ತುಂಬಿಸು ಆಆಆ ॥೨॥

ಸತ್ಯ ಹೇಳೋ ಕನ್ನಡಿಯಂತೆ
ಅಂತರಂಗ ಮಾಡು
ದಯವನೀಡೋ ಧರಣಿಯಂಥ
ಮನೋಧರ್ಮ ನೀಡು
ನೊಂದ ಎಲ್ಲ ಜೀವ
ನನ್ನದೆಂಬ ಭಾವ
ಬಾಳಿನಲ್ಲಿ ವಿದ್ಯೆ ವಿನಯ ಕರುಣಿಸೋ ॥೩॥

♦♦♦♦♦

ಚಿತ್ರ : ಜನುಮದ ಜೋಡಿ (೧೯೯೬)
ಸಾಹಿತ್ಯ : ಅನಾಮಿಕ
ಸಂಗೀತ : ವಿ. ಮನೋಹರ್

ದೇಹವೆಂದರೆ ಓ ಮನುಜ
ಮೂಳೆ ಮಾಂಸಗಳ ತಡಿಕೆ ನಿಜ
ಮನಸು ಆಸೆ ತುಂಬಿದ ಕಣಜ
ಮೋಹದಿಂದ ದುಃಖವು ಸಹಜ ॥ಪ॥

ನಶ್ವರ ಕಾಯ ನಂಬದಿರಯ್ಯ
ಈಶ್ವರನೇ ಗತಿ ಮರೆಯದಿರಯ್ಯ
ತ್ಯಾಗದಿ ಪಡೆಯೊ ಸುಖವು ಶಾಶ್ವತ ॥ಅ.ಪ॥

ಕಟ್ಟಿರುವ ಗುಡಿಯಲ್ಲಿ ಉಟ್ಟಿರುವ ಮಡಿಯಲ್ಲಿ
ಪುಟ್ಟ ಧೂಪ ದೀಪದಿ ಶಿವನಿಲ್ಲ
ಬಗೆ ಬಗೆ ಮಂತ್ರದಲ್ಲಿ ಯಾಗಯಜ್ಞಗಳಲ್ಲಿ
ಜಪತಪ ವ್ರತದಲ್ಲಿ ಅವನಿಲ್ಲ
ಮಣ್ಣು ಕಣ ಕಣದಲ್ಲಿ
ಜೀವ ಜೀವಗಳಲ್ಲೂ
ಒಳಗಿನ ಕಣ್ಣಿಗೆ ಕಾಣುವಾತನು ॥೧॥

ಮೇಲು ಕೀಳಿನ ನಡತೆ
ಹಾದಿ ತಪ್ಪಿದ ಜಡತೆ
ಕುಲ ವ್ಯಾಕುಲಗಳು ಸರಿ ಏನು
ರೋಷ ದ್ವೇಷದ ಉರಿಯು
ಲೋಭ ಮೋಸದ ಪರಿಯು
ಸಾಗುವ ದಾರಿಗೆ ಬೆಳಕೇನು
ಅನ್ಯರ ಗುಣದಿ ಸನ್ಮತಿ ಹುಡುಕು
ಸತ್ಯ ಪಥವೇ ಬೆಳ್ಳಿ ಬೆಳಕು
ಕರುಣೆ ಪ್ರೇಮವೇ ಉಲ್ಲಾಸ
ನಿತ್ಯ ಕಾಯಕವೇ ಕೈಲಾಸ
ಚಿತ್ತ ನಿರ್ಮಲದಿ ಸಂತೋಷ
ನೀತಿ ಮಾರ್ಗವೇ ಭವನಾಶ
ವೈಭವ ಜೀವನ ತ್ಯಾಗವ ಮಾಡಿ
ವೈರಾಗ್ಯ ಯೋಗದ ಸಾಧನೆ ಮಾಡಿ
ಕೈವಲ್ಯ ಹಂಚುವ ಪರಮಪದ ॥೨॥

♦♦♦♦♦

ಚಿತ್ರ : ಜೋಡಿಹಕ್ಕಿ (೧೯೯೭)
ಸಾಹಿತ್ಯ : ವಿ. ಮನೋಹರ್
ಸಂಗೀತ : ವಿ. ಮನೋಹರ್

ಹರಹರ ಗಂಗೆ ಹರಹರ ಗಂಗೆ
ಕೇಳು... ಕೇಳು... ಕೇಳು...
ವಿಧಿ ಬರೆದಂತೆ ನಡೆದರೆ ಹೆಂಗೆ
ಹೇಳು... ಹೇಳು... ಹೇಳು....
ಹೂವು ಮುಳ್ಳಾಯ್ತು ಹಾಲು ನಂಜಾಯ್ತು ॥ಪ॥

ಹೇ ಕಂಗಳ ಕೊಟ್ಟೆ ದೃಷ್ಟಿಯ ಕಿತ್ತೆ
ಕನಸುಗಳೆಲ್ಲಾ ಕಪ್ಪಾಯ್ತು
ಗುಂಡಿಗೆ ಇತ್ತೆ ಪ್ರೀತಿಯ ಕಿತ್ತೆ
ಆಸೆಯ ಬಳ್ಳಿ ಸುಟ್ಹೋಯ್ತು
ಚಿನ್ನದ ಸೂಜಿ ಆದ್ರೂ
ಹ್ಯಾಂಗಿ ಕಣ್ಣಿಗೆ ಚುಚ್ಕೋಕೆ ಆಗುತ್ತೆ
ಒಡಲಿನ ಬೆಂಕಿ ಆದ್ರೂ ಕೂಡ
ಮಡಿಲಲಿ ಮಡಗೋಕೆ ಆಗುತ್ತಾ
ಏನೇನೊ ಕೊಟ್ಟೆ ಶಿವನೆ
ಮಾಯಾ ಭಂಡಾರದವನೆ
ಯಾವ್ದೊ ಜನ್ಮದ ಕೋಪವ
ಈ ಜನ್ಮಕ್ಕಿಂಗೆ ತೋರ್ಸ್ತವ್ನೆ ॥೧॥

ಈ ರೂಪವ ಕೊಟ್ಟೆ...
ರೂಪದ ಕೂಡೆ ಶಾಪವ ಕೊಟ್ಟೆ
ಯಾಕ್ ಹೇಳು
ಚಂದದ ಹೂವು ಸಂಜೆಗೆ ಬಾಡಿ ಹೋಗೂದ್ಯಾಕೆ ನೀ ಹೇಳು
ಮುತ್ತಿನ ಮುತ್ತು ಎದೆಯೊಳಗಿಟ್ಟು
ಮಾಡಿದೆ ನಾನು ಜೋಪಾನ
ಅಯ್ಯೋ ವಿಧಿಯ ಮುತ್ತೆ ಕಳೆದೊಯ್ತು
ಯಾರಿಗೆ ದುಃಖ ಹೇಳೋಣ
ನನ್ಮನೆ ಬಳ್ಳಿ ಕುಸುಮ
ಬೆಂದ್ಹೋಗಿ ಬೂದಿಯೇಯಿತೆ
ಮನಸಾರೆ ಅತ್ತು ಬಿಡಲೆ ಹ್ಯಾಗೆ ಅಳ್ಲಿ ಶಿವನೆ
ಕಣ್ಣೀರೆ ಬತ್ತಿ ಹೋಗ್ಯೆತೆ ॥೨॥

♦♦♦♦♦

ಚಿತ್ರ : ಹೂಮಳೆ (೧೯೯೮)
ಸಾಹಿತ್ಯ : ನಾಗತಿಹಳ್ಳಿ ಚಂದ್ರಶೇಖರ್
ಸಂಗೀತ : ಇಳಯರಾಜ

ಹೂಮಳೆ ಹೂಮಳೆ ಹೂಗಳ ಸುರಿಮಳೆ
ಹೂಮಳೆ ಹೂಮಳೆ ಹೊಸ ಮಳೆ
ಮೇಘ ಮಿಂಚುಗಳ ಮಾಯೆಯೋ
ಸಪ್ತವರ್ಣಗಳ ಛಾಯೆಯೋ
ಆಕಾಶ ಗಂಧ ಕುಸುಮಗಳ ಕರೆಯಿತೋ ॥ಪ॥

ಮಾಘ ಫಾಲ್ಗುಣ ಚೈತ್ರ ವೈಶಾಖ ಮಾಸ
ನಿಂತ ವಸಂತ ಬಾರೋ ಶೃಂಗಾರ ತಾರೋ
ತಾಯಿ ಭೂರಮೆ ನಿನಗೆ ನೂರಾರು ರೂಪ
ನಾವು ಮನುಜರಮ್ಮ ಬೇಕೆಂದು ರೂಪ
ಮಾಗಿ ಕಾಲದಲ್ಲಿ ಮೂಕಾದೆ ಮೌನ ಕೋಗಿಲೆ
ಏಕೆ ಹಾಡಿದೆ ಏನಾಶ್ಚರ್ಯ ನೋಡಿದೆ ಹೋ... ಹೋ... ಹೋ...

ಬಾಳು ಎಂದರೇನು ನಾಳೆಗಳ ಧ್ಯಾನ
ನಾಳೆ ಎಂದರೇನು ನಿನ್ನೆಗಳ ಮೌನ
ಆಸೆ ದೋಣಿಯಲ್ಲಿ ಸಾಗರದ ಯಾನ
ಜೋಡಿ ಸೇರಿದಾಗ ಸುಲಭ ಪ್ರಯಾಣ
ನಾಳೆಗಾಗಿ ಬಾಳಬೇಕು ಕೇಳು ನೊಂದ ಜೀವವೆ
ರಾತ್ರಿ ಜಾರಿ ಹೋಗಲಿ
ಶುಭ ಸೂರ್ಯೋದಯವಾಗಲಿ ಚಿಂತೆ... ಓಹೋಹೋ... ॥೨॥

♦♦♦♦♦



ಚಿತ್ರ : ಶಬ್ಧವೇಧಿ (೨೦೦೦)
ಸಾಹಿತ್ಯ : ಹಂಸಲೇಖ
ಸಂಗೀತ : ಹಂಸಲೇಖ

ಜನರಿಂದ ನಾನು ಮೇಲೆ ಬಂದೆ
ಜನರನ್ನೇ ನನ್ನ ದೇವರೆಂದೆ
ಜನರಿದ್ದರೆ ನನ್ನ ಬೆನ್ನ ಹಿಂದೆ
ಹೋರಾಡಲು ನಾನೆಂದು ಮುಂದೆ
ಈ ದೇವರು ಮಾಡಿದ ಆಜ್ಞೆ
ನಾ ಮೀರುವುದುಂಟೇನು
ಈ ಮಣ್ಣಲಿ ಹುಟ್ಟಿದ ಋಣವ
ನಾ ಮರೆಯುವುದುಂಟೇನು ॥ಪ॥

ಹಣವನು ದೋಚುವ ದೆಸೆಯಿಂದ
ಮಾರಕ ಮಾದಕ ಕೊಡುವುದೇ?
ಸುಖಪಡುವುದೆ ನಾಳಿನ ಪ್ರಜೆಗಳ ಕಂಗೆಡಿಸಿ
ನಾಡನು ನರಕಕೆ ತಳ್ಳಲು ಕುಣಿತೆಗೆವುದೇ
ಸತ್ಯಕೆ ಸಾವಿಲ್ಲ ಮೋಸಕೆ ಉಳಿವಿಲ್ಲ
ಜ್ಞಾನದ ದಾರಿಗೆ ಭಯವಿಲ್ಲ
ಈ ಜನಗಳು ಮಾಡಿದ ಆಜ್ಞೆ ನಾ ಮೀರುವುದುಂಟೇನು
ಛೇ... ಛೇ... ಛೇ... ಆಗದು ಆಗದು ಆಗದು ॥೧॥

ಯುವಕರ ಓದಿನ ಉಪಯೋಗ
ನಾಡಿಗೆ ದೊರೆತರೆ ಚಿನ್ನದ ಬೆಳೆ ಬೆಳೆವುದು
ಯುವಜನ ಶಕ್ತಿಯು ಮನಸ್ಸಿಟ್ಟು ದುಡಿದರೆ
ಭೂಮಿಗೆ ಸ್ವರ್ಗವೇ ಇಳಿವುದು
ಯುವಕರೇ ಎದ್ದೇಳಿ
ಸಂಸ್ಕೃತಿ ಕಾಪಾಡಿ
ಯುವಕರೇ ನಾಡಿನ ಶಿಲ್ಪಿಗಳು ॥೨॥

♦♦♦♦♦

ನೆನಪಿನ ಅಂಗಳದಲ್ಲಿ

ಡಾ|| ರಾಜ್



ಸುಂದರ ಪ್ರಕಾಶನ

ಚಿತ್ರಶ್ರೀ – 43 ಕಲಾಮಂದಿರ 5ನೇ ತಿರುವು ಅ ನ ಸುಬ್ಬರಾವ್ ರಸ್ತೆ ಹನುಮಂತನಗರ ಬೆಂಗಳೂರು – 560 019

080 – 6562 3165 2660 5796